So far as I know, the District Boards (Amendment) Bill, the Mysore Agricultural Income-tax Bill and the University Bill are the three Bills that have to be finished. Therefore, we can make an attempt and I think we can successfully finish the Bills if we sit till six O'clock at least every day.

Sri K. HANUMANTHAIYA.—Shall we take up the Finance Bill to-day or tomorrow ?

Sri J. MOHAMED IMAM.–To-morrow we can take it up. To-day we may take up the District Boards Bill.

Sri Kadidal MANJAPPA (Minister for Revenue and Public Works).—The rules under the Sales Tax Act were published in the official Gazette on 2nd February 1955.

Mr. SPEAKER.—I will tak? note of it.

Bills Introduced.

Sri Kadidal MANJAPPA (Minister for Revenue and Public Works).—I beg to introduce the Mysore Sales Tax (Second Amen lment) Bill, 1955 and the Madras Tobacco (Taxation of Sales and Registration) Mysore Amendment Bill, 1955.

MYSORE VILLAGE PANCHAYETS AND DISTRICT BOARDS (AMENDMENT) BILL, 1955.

Motion to consider.

Sri Kadidal MANJAPPA (Minister for Revenue and Public Works).—I beg to move :

"That the Mysore Village Panchayets and District Boards (Amendment) Bill, 1955 be taken into consideration."

ಸ್ವಾಮಿ, ಅಧ್ಯಕ್ಷರೆ, ಈ ಮಸೂದೆಯ ಐತಿಹಾಸಿಕ ಅಥವಾ ಇದರ ಹಿನ್ನೆಲೆಯೇನು ಎಂಬತಕ್ಕ ಬಗ್ಗೆ ಈಗಲೇ ನಾನು ಏನನ್ನೂ ಅಷ್ಟು ಸವಿಸ್ತಾರವಾಗಿ ಪ್ರಸ್ತಾಪಮಾಡುವುದಕ್ಕೆ ಇಷ್ಟಪಡುವುದಿಲ್ಲ. ಈ ವಿಚಾರಗಳೆಲ್ಲಾ ಈಗಾಗಲೇ ಸಂಪೂರ್ಣವಾಗಿ ಮಾನ್ಯ ಸದಸ್ಯರುಗಳಿಗೆಲ್ಲಾ ಗೊತ್ತಿರುತ್ತದೆ. ಈ ಹಿಂದೆ ಅಂದರೆ 1947ರ ಮೊದಲು ಈ ಜಿಲ್ಲಾ ಬೋರ್ಡುಗಳಿಗೆ ನಡೆದಿದ್ದಂಥ ಚುನಾವಣೆಗಳೆಲ್ಲಾ ಆಗಿದ್ದ 1926ನೆಯ ಜಿಲ್ಲಾ ಬೋರ್ಡು ಅಕ್ಟಿನ ಪ್ರಕಾರ ನಡೆಸಲ್ಪಟ್ಟಿದ್ದವು. ಹಾಗೆ ರಚಿಸಲ್ಪಟ್ಟಂಥ ಆ ಜಿಲ್ಲಾ ಬೋರ್ಡುಗಳೆಲ್ಲಾ ಅವುಗಳ ಆಡಳಿತವನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳುವ ಮುನ್ನ ಅಂದರೆ 1948ರಲ್ಲಿ ಆ ಬಗ್ಗೆ ಅದನ್ನು ಪುನರ್ಪರಿಶೀಲನೆ ಮಾಡಲು ಶ್ರೀ ವಿ. ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸರ್ಕಾರದವರು ನೇಮಕಮಾಡಿದ್ದರು. ಹಾಗೆ ಒಂದು ಸಮಿತಿಯನ್ನು ನೇಮಕಮಾಡಿದ ತರುವಾಯ ಅವರು ಆ ಬಗ್ಗೆ ವಿಚಾರಗಳನ್ನೆಲ್ಲಾ ಕೂಲಂಕಷವಾಗಿ ವಿಮರ್ಶೆಮಾಡಿ ಅದನ್ನು ಯಾವ ರೀತಿ ಮಾಡಿದರೆ ಅನುಕೂಲವಾಗಿರುತ್ತದೆಂಬ ಬಗ್ಗೆ ಆ ಸಮಿತಿಯವರು ಒಂದು ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದರು. ಆಗ ಆ ವರದಿಯನ್ನು ಸರ್ಕಾರದವರು ಪರಿಶೀಲನೆಮಾಡಿ ಆ ಬಗ್ಗೆ ಒಂದು ಬಿಲ್ಲನ್ನು ತಯಾರಿಸಿ ಅದನ್ನು ಈ ಶಾಸನ ಸಭೆಯ ಮುಂದೆ ಇಟ್ಟಿದ್ದರು. ಆ ಪ್ರಕಾರ 1952ರಲ್ಲಿ ಒಂದು ಕಾನೂನಾಯಿತು. ಹಾಗೆ ಆದ ಕಾನೂನಿಗೆ ಪುನಃ 1952ನೆಯ ಇಸವಿಯಲ್ಲಿ ಕೆಲವು ಬದಲಾವಣೆಗಳನ್ನು ಕೂಡ ಮಾಡಿದ್ದಾಯಿತು, ಆದರೆ ಹಾಗೆ ಬದಲಾವಣೆಯಾದ ಆ ಆಕ್ಟಿನ ಪ್ರಕಾರ ಈ ಜಿಲ್ಲಾ ಬೋರ್ಡುಗಳ ಚುನಾವಣೆಗಳನ್ನು ಸರ್ಕಾರದವರು ಕೈಗೊಳ್ಳುವಷ್ಟರಲ್ಲಿಯೇ, ನೇರವಾಗಿ ಈ ಸ್ಥಳೀಯಸಂಸ್ಥೆಗಳಿಗೆ ಚುನಾವಣೆ ನಡೆಯಬೇಕಾದದ್ದು ಅಗತ್ಯವೆಂಬುದಾಗಿ ಸರ್ಕಾರದ ಮುಂದೆ ಕೆಲವು ಮನವಿಗಳು ಬಂದವು. ಆದರೆ 1952ನೆಯ ಆಕ್ಟಿನ ಪ್ರಕಾರ ಈ ಸ್ಥಳೀಯ ಸಂಸ್ಥೆಗಳಿಗೆ ಅಪ್ರತ್ಯಕ್ಷ ಚುನಾವಣೆಗಳು ನಡೆಯುವುದಕ್ಕೆ ಅವಕಾಶವಿತ್ತು.

2 P. M.

ಅಂದರೆ ಗ್ರಾಮ ಪಂಚಾಯಿತಿಗಳಿಗೆ ಚುನಾಯಿತರಾದ ಎಲ್ಲಾ ಸದಸ್ಯರನ್ನೂ ಒಳಗೊಂಡ ಒಂದು ಚುನಾವಣಾ ಕ್ಷೇತ್ರ ಇರತಕ್ಕದ್ದು: ಆ ಕ್ಷೇತ್ರದಿಂದ ಜಿಲ್ಲಾ ಬೋರ್ಡು ಸದಸ್ಯರನ್ನು ಚುನಾಯಿಸತಕ್ಕದ್ದು ಎಂದು ವಿಧಾಯಕವಾಗಿದೆ. ಈ ರೀತಿ ವಿಧಾಯಕವಾಗಿರುವುದರಿಂದ ಅಪ್ರತ್ಯಕ್ಷ ಚುನಾವಣೆಗೆ ಸರ್ಕಾರದವರು ಏರ್ಪಾಡು ಮಾಡುತ್ತಿದ್ದರು. ಅಷ್ಟರಲ್ಲಿ ಅಪ್ರತ್ಯಕ್ಷ ಚುನಾವಣೆಯಿಂದ ಹೆಚ್ಚು ಪ್ರಯೋಜನ ಲಭಿಸುವುದಿಲ್ಲ. ಪ್ರತ್ಯಕ್ಷ ಚುನಾವಣೆಯಾಗಬೇಕಾದುದು ಅಗತ್ಯವೆಂದು ಮಾನ್ಯ ಸದಸ್ಯರನೇಕರು ವಾದಿಸಿದರು. ಈ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿದ್ದದ್ದರಿಂದ ಚುನಾವಣೆ ನಡೆಸುವುದು ತಡವಾಯಿತು. ಅಷ್ಟರಲ್ಲಿ ತಾಲ್ಲೂಕು ಬೋರ್ಡುಗಳನ್ನು ರಚನೆಮಾಡಬೇಕೆಂಬ ವಾದ ಸರ್ಕಾರದ ಮುಂದೆ ಇಡಲ್ಪಟ್ಟಿತು. ಹೀಗೆ 2-3 ವಾದಗಳು ಸರ್ಕಾರದ ಮುಂದೆ ಇಡಲ್ಪಟ್ಟದ್ದರಿಂದ ಸರ್ಕಾರದವರು 1953ನೆ ಇಸವಿಯಲ್ಲಿ ಒಂದು ಸಮಿತಿಯನ್ನು ಶ್ರೀ ಡಿ. ಹೆಚ್. ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ನೇಮಕಮಾಡಿದರು. ಆ ಸಮಿತಿಯವರು ಸರ್ಕಾರಕ್ಕೆ ವರದಿಯನ್ನು ಒಪ್ಪಿಸಿದರು. ಸರ್ಕಾರದವರು ಆ ಸಮಿತಿಯ ವರದಿಯನ್ನೂ, ಮಾನ್ಯ ಸದಸ್ಯರನೇಕರು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನೂ ಗಣನೆಗೆ ತೆಗೆದುಕೊಂಡು ಈ ಮಸೂದೆಯನ್ನು ತಮ್ಮ ಮುಂದೆ ಇಟ್ಟಿದ್ದಾರೆ. ಈ ಮಸೂದೆಯಲ್ಲಿ ಅಪ್ರತ್ಯಕ್ಷ ಚುನಾವಣೆಗೆ ಬದಲು ಪ್ರತ್ಯಕ್ಷ ಚುನಾವಣೆ ನಡೆಸಲು ಕಾನೂನನ್ನು ಬದಲಾಯಿಸುವ ಸಲಹೆ ಅಡಕವಾಗಿದೆ. ಅದರ ಜೊತೆಗೆ ಇದುವರೆಗೆ 1952ನೆ ಇಸವಿ ಆಕ್ಟು ಜಾರಿಯಲ್ಲಿದ್ದುದರ ಪರಿಣಾಮವಾಗಿ, ಸರ್ಕಾರ ಅನುಭವ ಪಡೆದದ್ದರ ಪರಿಣಾಮವಾಗಿ ಕೆಲವು ಬದಲಾವಣೆಗಳನ್ನು ಕೂಡ ಮಾಡತಕ್ಕದ್ದು ಸೂಕ್ತವೆಂದು ಯೋಚಿಸಿ ಕೆಲವು ಬದಲಾವಣೆಗಳನ್ನು ಈ ಮಸೂದೆಯಲ್ಲಿ ಸೂಚಿಸಿದ್ದೇವೆ.

(SRI KADIDAL MANJAPPA.)

ಈ ಮಸೂದೆಯ ಎರಡನೆಯ ಸೆಕ್ಷನ್ ಅರ್ಥವಿವರಣೆಗೆ ಸಂಬಂಧಪಟ್ಟದ್ದು. ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ 1952ನೆ ಆಕ್ಟ್‌ನಲ್ಲಿ ನಿಮ್ನತರಗತಿಯವರಿಗೆ ಗ್ರಾಮಪಂಚಾಯಿತಿಗಳಲ್ಲಿ ಮತ್ತು ಜಿಲ್ಲಾ ಬೋರ್ಡುಗಳಲ್ಲಿ ಕೆಲವು ಸ್ಥಾನಗಳನ್ನು ಮೀಸಲಾಗಿ ಇಡುವುದಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ. ಆದರೆ scheduled castes ಎಂಬ ಪದಕ್ಕೆ ಹಿಂದಿನ ಆಕ್ಟಿನಲ್ಲಿ ಸರಿಯಾದ ಅರ್ಥ ವಿವರಣೆ ಇರಲಿಲ್ಲ. ಅದಕ್ಕೋಸ್ಕರ scheduled castes ಎಂಬ ಪದಕ್ಕೆ ಅರ್ಥ ವಿವರಣೆಯನ್ನು ಮಸೂದೆಯ 2ನೆ ಸೆಕ್ಷನ್‌ನಲ್ಲಿ ಕೊಡಲಾಗಿದೆ.

3ನೆ ಸೆಕ್ಷನ್ ಅಲ್ಪ ತನಿಖೆಗೆ ಸಂಬಂಧಪಟ್ಟದ್ದು. ಜಿಲ್ಲಾ ಬೋರ್ಡು ಆಕ್ಟ್ ಪ್ರಕಾರ ಜಿಲ್ಲಾ ಬೋರ್ಡುಗಳ ಲೆಖ್ಖಗಳ ತನಿಖೆಯನ್ನು ಆಡಿಟ್ ಮಾಡಿದಾಗ ಆ ಸಂಬಂಧ ಉಂಟಾಗಬಹುದಾದ ಖರ್ಚನ್ನು ಜಿಲ್ಲಾ ಬೋರ್ಡು ಕೊಡುವುದಕ್ಕೆ ಅವಕಾಶವಿದೆ. 121ನೆ ಸೆಕ್ಷನ್‌ನಲ್ಲಿ ಆಡಿಟ್ ಸಂಬಂಧ ತಗಲಬಹುದಾದ ಖರ್ಚನ್ನು ಜಿಲ್ಲಾ ಬೋರ್ಡ್ ಫಂಡಿನಿಂದ ಕೊಡುವುದಕ್ಕೆ ಅವಕಾಶವಿದೆ. ಆದರೆ ಪಂಚಾಯಿತಿಗಳಿಗೆ ಸಂಬಂಧಪಟ್ಟ ಲೆಖ್ಖ ತನಿಖೆ ಮಾಡಿದಾಗ ಆ ಸಂಬಂಧವಾದ ಖರ್ಚನ್ನು ಪಂಚಾಯಿತಿ ಫಂಡಿನಿಂದ ಕೊಡುವುದಕ್ಕೆ ಈಗಿರತಕ್ಕ ಕಾನೂನು ಪ್ರಕಾರ ಅವಕಾಶವಿಲ್ಲ. ಅದುದರಿಂದ 48ನೆ ಸೆಕ್ಷನ್‌ನಲ್ಲಿ ಬದಲಾವಣೆಯನ್ನು ಮಾಡಬೇಕೆಂದು 3ನೆ ಕ್ಲಾಜ್‌ನಲ್ಲಿ ಸೂಚಿಸಿದ್ದೇವೆ. ಬದಲಾವಣೆ ಮಾಡಬೇಕೆಂದಿರತಕ್ಕ ನಿಯಮ ಈ ರೀತಿ ಇದೆ :—

"The expenses of such examination of accounts and audit shall be debitable to and be paid out of the Panchayet Fund in such manner as the Government may direct."

4ನೆ ಕ್ಲಾಜ್ ಜಿಲ್ಲಾ ಬೋರ್ಡು ವ್ಯವಸ್ಥೆಗೆ ಸಂಬಂಧಪಟ್ಟ ನಿಯಮ. ಈಗ ಇರತಕ್ಕ 50ನೆ ಸೆಕ್ಷನ್ ಬದಲಾವಣೆ ಮಾಡಿದರೆ 4ನೆ ಕ್ಲಾಜ್‌ನಲ್ಲಿ ಇರತಕ್ಕ ನಿಯಮವನ್ನು ಅಡಕ ಮಾಡಬೇಕೆಂದು ಸೂಚನೆ ಮಾಡಿದ್ದೇವೆ. ಈಗಿರತಕ್ಕ 50ನೆ ಸೆಕ್ಷನ್ ಈ ರೀತಿ ಇದೆ.—

(1) "Every District Board shall be composed of members elected in accordance with the provisions of this Chapter.

(2) The total number of seats in a District Board specfied in the first column of the fourth schedule shall be the number specified in the second column thereof opposite to that district."

ಅದಕ್ಕೆ ಬದಲಾಗಿ ಹೊಸ ಸೆಕ್ಷನ್ ಈ ರೀತಿ ಇರಬೇಕು ಎಂದು ಸೂಚನೆ ಮಾಡಿದ್ದೇವೆ.

"Composition of District Boards. Every District Board shall consist of members directly elected by the voters in each district in accordance with the provisions of this Act and the rules made thereunder."

ಮಸೂದೆಯ 5ನೆ ಕ್ಲಾಜ್, ಈಗಿರತಕ್ಕ 51ನೆ ಸೆಕ್ಷನ್‌ಗೆ ಸಂಬಂಧಪಟ್ಟಂತೆ ಕೆಲವು ಬದಲಾವಣೆಗಳನ್ನು ಸೂಚಿಸುತ್ತದೆ. 51ನೆ ಸೆಕ್ಷನ್ ಈಗಿರುವಂತೆ ಹೀಗೆ ಓದಲಾಗುತ್ತದೆ.

"The members shall be elected by electorates consisting of members of every Panchayet constituted within each Taluk in the District."

ಎಂದು ಇದೆ. ಈ ಸೆಕ್ಷನ್ ಬದಲಾವಣೆಯಾಗಿ ಕೆಳಗೆ ಕಂಡಂತೆ ತಿದ್ದುಪಡಿಮಾಡಬೇಕೆಂದು ಸೂಚನೆ ಮಾಡಿದ್ದೇವೆ.

"District Board Consituencies : (1) every Revenue Taluk (excluding such portions of the taluk as are included in a Municipality or area under the authority of a Sanitary Board or a Town Board in the District shall be a constituency and each such constituency shall elect such number of members not exceeding three having regard to the population of each constituency, as the Government may, by notification under sub-section (2) determine :

(a) the number of seats allotted to each Constituency; and

(b) the number of seats, if any, reserved for the Scheduled castes in any Constituency."

ಅಂದರೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಕೂಡ ಮುನಿಸಿಪಲ್ ಸರಹದ್ದಿನೊಳಗೆ ಅಥವಾ Town Board ಸರಹದ್ದಿನೊಳಗೆ ಇರತಕ್ಕ ಪ್ರದೇಶಗಳು ವಿನಾ ಉಳಿದ ಎಲ್ಲಾ ಪ್ರದೇಶಗಳೂ ಸೇರಿ ಒಂದು ಜಿಲ್ಲಾ ಬೋರ್ಡ್ ಚುನಾವಣಾ ಕ್ಷೇತ್ರವಾಗತಕ್ಕದು. ಆ ಚುನಾವಣಾಕ್ಷೇತ್ರದಿಂದ ಮೂರು ಜನರಿಗೆ ಮೀರದಂತೆ ಜಿಲ್ಲಾ ಬೋರ್ಡು ಸದಸ್ಯರನ್ನು ಆರಿಸತಕ್ಕದ್ದು ಎಂದು ಸೂಚನೆ ಇದೆ.

6ನೆ ಕ್ಲಾಜ್, ಈಗಿರುವ 53ನೆ ಸೆಕ್ಷನ್‌ಗೆ ಸಂಬಂಧಪಟ್ಟದ್ದು. ಈಗಿರತಕ್ಕ 53ನೆ ಸೆಕ್ಷನ್ ಈ ರೀತಿ ಇದೆ.

"The District Board shall keep a list for each constituency of persons qualified to vote at elections of members to the District Board.

(2) Such list shall be prepared and revised in such manner as may be prescribed."

ಈ ಹೊಸ ಮಸೂದೆಯಲ್ಲಿ ಕೆಳಗೆ ಕಂಡಂತೆ ಮಾರ್ಪಾಟು ಆಗಬೇಕೆಂದು ಸೂಚನೆ ಮಾಡಲಾಗಿದೆ.

Clause 6:

"Electoral rolls and qualifications of voters.—(1) So much of the electoral roll or rolls for the Assembly Constituency or constituencies as relate to the area comprised within a District Board Constituency shall be the electoral

roll for that District Board Constituency.

(2) Every person whose name appears in the electoral roll for the District Board Constituency shall be entitled to vote at an election from such constituency and no person whose name does not appear in such roll shall vote at an election from such constituency."

ಅಂದರೆ ಹಿಂದಿನ ಸೆಕ್ಷನ್‌ನಲ್ಲಿ ನಮೂದಾಗಿರುವಂತೆ ಮುನಿಸಿಪಲ್ ಸರಹದ್ದಿನಲ್ಲಿ ಸೇರಿರತಕ್ಕ ಪ್ರದೇಶವನ್ನು ಬಿಟ್ಟು ಉಳಿದ ತಾಲ್ಲೂಕಿನ ಎಲ್ಲ ಪ್ರದೇಶಗಳೂ ಕೂಡ ಒಂದು ಚುನಾವ ಣಾಕ್ಷೇತ್ರವೆಂದು ಭಾವಿಸಲ್ಪಡತಕ್ಕದ್ದು ಎಂದು ಇದೆ. ಆ ಚುನಾವಣಾಕ್ಷೇತ್ರಕ್ಕೆ ಅಸೆಂಬ್ಲಿ ಚುನಾವಣೆಗೆ ತಯಾರಾದ ಮತದಾರರ ಪಟ್ಟಿ ಏನಿದೆಯೋ ಆ ಪಟ್ಟಿಯೇ ಈ ಜಿಲ್ಲಾ ಬೋರ್ಡ್ ಚುನಾವಣೆಗೂ ಕೂಡ ಮತದಾರರ ಪಟ್ಟಿ ಎಂದು ಭಾವಿಸಲ್ಪಡತಕ್ಕದ್ದು ಎಂಬ ಈ ನಿಯಮವನ್ನು ಮಾಡಿದ್ದೇವೆ.

ಶ್ರೀ ಟಿ. ಹನುಮಯ್ಯ (ಹಿರಿಯೂರು ಅನುಸೂಚಿತ ಜಾತಿಗಳು).—ಟೌನ್ ಮುನಿಸಿಪಲ್ ಸರಹದ್ದಿನಲ್ಲಿರುವ ಮತದಾರರು ಜಿಲ್ಲಾ ಬೋರ್ಡ್ ಚುನಾವಣೆಗಳಲ್ಲಿ ಭಾಗವಹಿಸಕೂಡದೆ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಆ ಮೇಲೆ ಹೇಳುತ್ತೇನೆ. ಆ ಮತದಾರರ ಪಟ್ಟಿಯಲ್ಲಿ ಯಾರ ಯಾರ ಹೆಸರುಗಳಿವೆಯೋ ಅವರು ಮಾತ್ರ ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಓಟುಮಾಡುವುದಕ್ಕೆ ಅರ್ಹರಾಗುತ್ತಾರೆ. ಈ ನಿಯಮದ ಬದಲಾವಣೆ ಸಾಧುವಾದದ್ದು, ಸೂಕ್ತವಾದದ್ದು. ಏಕೆಂದರೆ ಜಿಲ್ಲಾ ಬೋರ್ಡ್‌ಗೋಸ್ಕರ ಬೇರೆ ಒಂದು ಮತದಾರರ ಪಟ್ಟಿಯನ್ನು ತಯಾರುಮಾಡಬೇಕಾದರೆ ಅವಕ್ಕೆ ತಕ್ಕ ಸಿಬ್ಬಂದಿ ಏರ್ಪಾಡುಮಾಡಬೇಕು. ಅದರ ಪರಿಣಾಮವಾಗಿ ಹೇರಳವಾಗಿ ಖರ್ಚಾಗುತ್ತದೆ. ಈ ಖರ್ಚನ್ನು ತಪ್ಪಿಸುವ ಉದ್ದೇಶದಿಂದ ಒಂದು ನಿಯಮವನ್ನು ಜಿಲ್ಲಾ ಬೋರ್ಡ್ ಕಾನೂನಿನಲ್ಲಿ ಸೇರಿಸಲಾಗಿದೆ ಎಂದು ಸೂಚಿಸುತ್ತೇನೆ.

7ನೇ ಕ್ಲಾಜ್ ಈಗಿರತಕ್ಕ 54 ಸೆಕ್ಷನ್‌ಗೆ ಸಂಬಂಧಪಟ್ಟದು. ಇದರಲ್ಲಿ ಕೆಲವು ಸಣ್ಣ ಬದಲಾವಣೆಗಳನ್ನು ಮಾಡಬೇಕೆಂದು ಈ ಮಸೂದೆಯಲ್ಲಿ ಸರ್ಕಾರದವರು ಸೂಚನೆಮಾಡಿದ್ದಾರೆ. 54ನೆ ಸೆಕ್ಷನ್ ಅನರ್ಹತೆಗೆ ಸಂಬಂಧಪಟ್ಟ ಸೆಕ್ಷನ್. ಅನರ್ಹತೆಯಲ್ಲಿ ಎರಡು ವಿಧವಾದ ಅನರ್ಹತೆಗಳಿವೆ. ಒಂದನೆ ವಿಧವಾದ ಅನರ್ಹತೆ ಚುನಾವಣೆಗೆ ಮೊದಲು ಉಂಟಾಗುವ ಅನರ್ಹತೆ. ಎರಡನೆ ವಿಧವಾದದ್ದು ಚುನಾವಣೆ ನಡೆದು ಮೆಂಬರಾದ ನಂತರ ಉಂಟಾಗಬಹುದಾದ ಅನರ್ಹತೆ. 54ನೆ ಸೆಕ್ಷನ್ನಿನ 3ನೆ ಉಪನಿಯಮದಲ್ಲಿ ಈ ರೀತಿ ಇದೆ.

"If any question arises whether any person is disqualified under this section or disabled from continuing as a member, the question shall be referred for the decision of the Government and its decision shall be final."

ಬಹುಶಃ ಆಗಿನ ಕಾಲದಲ್ಲ ಶಾಸನಸಭೆಯ ಉದ್ದೇಶವೇನಿತ್ತೋ ಗೊತ್ತಿಲ್ಲ. ಆದರೆ ಈಗಿರುವಂತೆ ನಿಯಮವಿದ್ದರೆ ಸ್ವಲ್ಪ ತೊಂದರೆಯಾಗುತ್ತದೆಂದು ಸರ್ಕಾರದವರು ಭಾವಿಸಿದ್ದಾರೆ. ಒಬ್ಬ ಸದಸ್ಯ ಉಮೇದುವಾರನಾಗುವುದಕ್ಕೆ ಮುಂಚಿತವಾಗಿ, ಚುನಾವಣೆಗೆ ಮುಂಚಿತವಾಗಿ ಕೆಲವು ಅನರ್ಹತೆಗಳನ್ನು ಪಡೆದಿದ್ದರೆ ಆ ಅನರ್ಹತೆಗಳನ್ನು ಕೋರ್ಟುಗಳು ಪರಿಶೀಲನೆ ಮಾಡಬೇಕಾಗುತ್ತದೆ. ಅಂಥ ಅನರ್ಹತೆಗಳನ್ನು ಸರ್ಕಾರದವರು ಪರಿಶೀಲನೆಮಾಡುವುದು ಸರಿಯಾದದ್ದಲ್ಲ. ಆದುದರಿಂದ ಇಂಥ ವಿಧವಾದ ಅನರ್ಹತೆ ವಿಚಾರದಲ್ಲಿ ಫೈಸಲಾತಿ ಮಾಡತಕ್ಕ ಅಧಿಕಾರ ಕೋರ್ಟುಗಳಿಗೆ ಕೊಡತಕ್ಕದ್ದು ಅವಶ್ಯಕ. ಒಂದು ವೇಳೆ ಸದಸ್ಯರಾದ ನಂತರ ಅನರ್ಹತೆ ಪಡೆದರೆ, ಅನರ್ಹತೆಯಾಗಿದೆಯೋ, ಇಲ್ಲವೋ ಎಂಬುದನ್ನು ಸರ್ಕಾರದವರು ಪರಿಶೀಲನೆ ಮಾಡಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇದು ಈಗಿರತಕ್ಕದ್ದರಲ್ಲಿ ಏನಾಗಿದೆ ಎಂದರೆ ಮೊದಲು ಅನರ್ಹತೆಯಾಗಿದ್ದರೂ ಕೂಡ ಸರ್ಕಾರದವರು ಪರಿಶೀಲನೆಮಾಡಿ ತೀರ್ಮಾನಮಾಡುವುದಕ್ಕೆ ಅನುಕೂಲವಾಗುವುದಿಲ್ಲ. ಆದುದರಿಂದ ಕೋರ್ಟುಗಳಿಗೆ ಈ ವಿಚಾರದಲ್ಲಿ ಅಧಿಕಾರವನ್ನು ಕೊಡುವ ಉದ್ದೇಶದಿಂದ ಈ ನಿಯಮದಲ್ಲಿ ಸ್ವಲ್ಪ ಬದಲಾವಣೆ ಮಾಡಬೇಕೆಂದು ಸೂಚಿಸಿದ್ದೇವೆ.

8ನೆಯ ಕ್ಲಾಜ್‌ನಲ್ಲಿ—ಇದು 55ನೆಯ ಸೆಕ್ಷನ್ನಿಗೆ ಸಂಬಂಧಪಟ್ಟಿದೆ. ಇದರಲ್ಲಿ ಹೇಳಿದೆ:—

"Section 55: Every person who is not less than twenty-five years of age and who is a resident of a taluk inclusive of all Municipal limits therein shall be qualified to be elected as a Member of the District Board from any taluk of that district."

ಶ್ರೀ ಹನುಮಯ್ಯನವರ ಪ್ರಶ್ನೆಗೆ ಉತ್ತರ ಇಲ್ಲೇ ಇದೆ. ಮುನಿಸಿಪಲ್ ಸರಹದ್ದಿನಲ್ಲಿ ವಾಸವಾಗಿದ್ದ ಎಲ್ಲ ಜನರಿಗೂ ಉಮೇದುವಾರರಾಗಿ ನಿಲ್ಲುವುದಕ್ಕೆ ಅರ್ಹತೆಯಿದೆಯೆಂದು ಹೇಳಿದೆ. ಆ ಮನುಷ್ಯನಿಗೆ 25 ವರ್ಷವಾಗಿದ್ದರೆ, ಅವನ ಹೆಸರು ವೋಟರ ಪಟ್ಟಿಯಲ್ಲಿ ಇರಲಿ ಅಥವಾ ಇಲ್ಲದಿರಲಿ ಅವನು ಉಮೇದುವಾರನಾಗಿ ನಿಲ್ಲಬಹುದು.

ಶ್ರೀ ಜೆ. ಮಹಮ್ಮದ್ ಇಮಾಂ (ಜಗಳೂರು).—ವೋಟರ ಪಟ್ಟಿಯಲ್ಲೇ ಇಲ್ಲದಿದ್ದ ಮೇಲೆ ಅವನು ಹೇಗೆ candidate ಆಗುತ್ತಾನೆ?

ಶ್ರೀ ಕಡಿದಾಳ್ ಮಂಜಪ್ಪ.—ಹಿಂದಿನ ಶಾಸನದಲ್ಲಿ ಇರುವುದೇ ಹಾಗೆ. ಒಬ್ಬ ವ್ಯಕ್ತಿ ಮುನಿಸಿಪಲ್ ಸರಹದ್ದಿನ ಆವರಣಕ್ಕೊಳಪಟ್ಟ ಪ್ರದೇಶದಲ್ಲಿ ವಾಸವಾಗಿದ್ದರೆ ಆತನು ವಿಲೇಜ ಪಂಚಾಯಿತಿಯ ಮೆಂಬರಾಗಿರಲಿ ಅಥವಾ ಇಲ್ಲದಿರಲಿ ಉಮೇದುವಾರನಾಗಿ ನಿಲ್ಲುವುದಕೆ ಆತನಿಗೆ ಅವಕಾಶವಿತ್ತು. A member whose name is entered into the Voters List in the Bangalore North Constituency can stand in Shimoga District. Therefore there is no prohibition.

Sri H. C. LINGA REDDY (Malur).—My submission is, the basis of the franchise then was on payment of some tax-land revenue, and therefore by virtue of payment of certain amount he used to be a voter.

ಶ್ರೀ ಕಡಿದಾಳ್ ಮಂಜಪ್ಪ.—ಈಗಿರತಕ್ಕ 51ನೆಯ ಸೆಕ್ಷನ್ ಪ್ರಕಾರ ಈ ರೀತಿಯಿದೆ :—

"The members shall be elected by electorates consisting of every Panchayat constituted within each taluk in the District." ಇದರಂತೆ, ವೋಟುಕೊಡತಕ್ಕ ಮಹಾಶಯರು ಆ ತಾಲ್ಲೂಕಿನ ಯಾವುದಾದರೂ ವಿಲೇಜ್ ಪಂಚಾಯಿತಿಯ ಸದಸ್ಯರಾಗಿರಬೇಕೆಂದಿದೆ. ಈಗ ಬದಲಾವಣೆಯಾಗಿರುವ ರೀತ್ಯಾ ಈ ರೀತಿಯಿದೆ: "Every person who is not less than 25 years of age who is a resident of a taluk inclusive of the municipal limits therein shall be qualified to be elected as member to the District Board from any taluk of that district."

Sri V. MASIYAPPA (Hiriyur).—How to ascertain that he is a resident of that place.

ಶ್ರೀ ಕಡಿದಾಳ್ ಮಂಜಪ್ಪ.—ಈಗಿರತಕ್ಕ ಆಕ್ಟಿನಲ್ಲಿರುವುದು ಹಾಗೆಯೇ.

ಶ್ರೀ ವಿ. ಮಾಸಿಯಪ್ಪ.—ಇರಬಹುದು. Unless he is enrolled as a Voter, ಒಂದು ತಾಲ್ಲೂಕಿನಲ್ಲಿ Resident ಆಗಿದ್ದಾನೆಂಬುದನ್ನು ನಿರ್ಧರಿಸುವುದು ಹೇಗೆ?

ಶ್ರೀ ಕಡಿದಾಳ್ ಮಂಜಪ್ಪ.—ಅವನ ಹೆಸರು ಆ ಮುನಿಸಿಪಲ್ ಸರಹದ್ದಿಗೆ ಅನ್ವಯಿಸತಕ್ಕ ವೋಟರ ಪಟ್ಟಿಯಲ್ಲಿ ಇರಬಹುದ ಅಥವಾ ಇಲ್ಲದಿರಬಹುದು. ಅವನಿಗೆ ಕೆಲವು ಅರ್ಹತೆಗಳನ್ನು ಗೊತ್ತುಮಾಡಿದ್ದಾರೆ. ಅದರ ಪ್ರಕಾರ ಅವನಿಗೆ 25 ವರ್ಷಗಳಾಗಿರಬೇಕು, ಮತ್ತು ಆ ಮುನಿಸಿಪಲ್ ಸರಹದ್ದನ್ನೊಳಪಡಿಸಿಕೊಂಡ ತಾಲ್ಲೂಕಿನ ವಾಸಿಯಾಗಿರಬೇಕು ಅಷ್ಟೆ. ಅಷ್ಟಿದ್ದರೆ ಅವನಿಗೆ ಉಮೇದುವಾರನಾಗುವುದಕ್ಕೆ ಹಕ್ಕಿದೆ. ಹಿಂದೆಯೂ ಹೀಗಿತ್ತು. I have not proposed any change as regards qualification of members. ಏನಿದ್ದರೂ ಒಂದು Proviso ಮಾತ್ರ ಸೇರಿದೆ. "Provided that a person shall not be qualified to be elected to fill a seat reserved for the Scheduled Castes, unless he is a member of those castes" ಎಂದು ಒಂದು ಪ್ರೊವಿಸೋ ಸೇರಿಸಿದ್ದೇವೆ ಅಷ್ಟೆ. ಈಗಿರತಕ್ಕ ಕಾನೂನು ಪ್ರಕಾರ ನಿಮ್ನ ತರಗತಿಯವರಿಗೆ ಗ್ರಾಮ ಪಂಚಾಯ್ತಿಯಲ್ಲಿ ಮತ್ತು ಜಿಲ್ಲಾ ಬೋರ್ಡ್‌ಗಳಲ್ಲಿ ಕೆಲವು ಸ್ಥಾನಗಳನ್ನು ರಿಸರ್ವ್ ಮಾಡುವುದಕ್ಕೆ ಅವಕಾಶವಿದೆ. ಆದರೆ, ಉಮೇದುವಾರರು ಅವರ ಜಾತಿಯ ಉಮೇದುವಾರರಾಗಿರಬೇಕೆಂದೇ ಇರಲಿಲ್ಲ. ಈಗ, ಆ ರೀತಿ ಇರಬೇಕು, ಅದು ಸೂಕ್ತವೆಂದು ಹೇಳಿ ಪ್ರೊವಿಸೊ ಸೂಚಿಸಿದ್ದೇವೆ.

ಆ ಮೇಲೆ 9ನೆಯ ಕ್ಲಾಜು ಈಗಿರತಕ್ಕ 57ನೆಯ ಸೆಕ್ಷನ್ನಿಗೆ ಸೇರಿದ್ದು. ಇದು consequential ಆಗಿರುವ ತಿದ್ದುಪಡಿ. ಚುನಾವಣೆ ನಡೆಯುವುದಕ್ಕೆ ಮುಂಚಿತವಾಗಿ, ಒಬ್ಬ ಮನುಷ್ಯನಿಗೆ ಅರ್ಹತೆಯಿಲ್ಲದಿದ್ದರೆ, ಆತನಿಗೆ ಅರ್ಹತೆಯಿದೆಯೇ ಇಲ್ಲವೇ ಎಂಬುದನ್ನು ತಿಳಿಯಲು ಸಂಬಂಧಪಟ್ಟವರು ಕೋರ್ಟಿನವರ ತೀರ್ಮಾನ ಪಡೆಯುವುದು ಅಗತ್ಯ. ಆದ್ದರಿಂದ ಈ ಬದಲಾವಣೆ ಸೂಚಿಸಿದ್ದೇವೆ.

10ನೆಯ ಕ್ಲಾಜು ಈಗಿರತಕ್ಕ 106ನೆಯ ಸೆಕ್ಷನ್ನಿಗೆ ಸಂಬಂಧಪಟ್ಟದ್ದು. 106ನೆಯ ಸೆಕ್ಷನ್ನು ಈ ರೀತಿಯಾಗಿದೆ :—

"Section 106 (1) The Government shall assign to a District Board an amount equal to six and one-fourth per cent of the net land revenue collected in the area within the jurisdiction of the District Board.

(2) The Government shall also assign to all the District Boards in the State an amount equal to six and one-fourth per cent of the net land revenue collected in the State, the amount to be allotted to each District Board being such as the Government may from time to time determine."

ಈಗಿದ್ದ ಸೆಕ್ಷನ್ನಿನಲ್ಲಿ, ಸಂಸ್ಥಾನದ ಮೇಲೆ collect ಮಾಡತಕ್ಕ ನೆಟ್ಟ್ ಲ್ಯಾಂಡ್ ರೆವಿನ್ಯೂ ಪ್ರತಿಕ $12\frac{1}{2}\%$ ನಷ್ಟು ಜಿಲ್ಲಾ ಬೋರ್ಡುಗಳಿಗೆ ಕೊಡಬೇಕೆಂದು ವಿಧಾಯಕವಾಗಿತ್ತು. ಆಗಿನ ಕಾಲದಲ್ಲಿ ಏಕೆ ಅದನ್ನು ಮಾಡಿದ್ದರೆಂದರೆ, ಜಿಲ್ಲಾ ಬೋರ್ಡುಗಳಿಗೆ ಹೆಚ್ಚಿನ ಕಾರ್ಯವ್ಯಾಪ್ತಿಯನ್ನು ಕೊಡಬೇಕು, ಅಭಿವೃದ್ಧಿಕಾರ್ಯಗಳನ್ನುಕೂಡ ಅವರೇ ಮಾಡಬೇಕೆಂದು ಹೇಳಿ ಶೇಕಡ $12\frac{1}{2}$ ರಷ್ಟು ಕಂದಾಯವನ್ನು ಕೊಡಬೇಕೆಂದು ವಿಧಾಯಕ ಮಾಡಿದ್ದೆವು. ನಮ್ಮ ಅನುಭವದಲ್ಲಿ ಜಿಲ್ಲಾ ಬೋರ್ಡುಗಳಿಗೆ ಎಲ್ಲಾ ಅಭಿವೃದ್ಧಿಕಾರ್ಯಗಳನ್ನೂ ವಹಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ತಿಳಿದುಬಂದಿದೆ. ಕೆಲವು ವಿಧಾಯಕವಾದ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಅವರಿಗೆ ಸಾಧ್ಯವಾಗುತ್ತದೆಯೇ ಹೊರತು ಜಿಲ್ಲೆಯಲ್ಲಿರತಕ್ಕ ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಕಂಡುಬಂದಿದೆ. ಈ ಕಾರಣದಿಂದ ಮೊದಲನೆಯ ಉಪನಿಯಮದಲ್ಲಿ ನಮೂದಾಗಿರತಕ್ಕ ಶೇಕಡ $6\frac{1}{4}$ ನಷ್ಟು ಮೊಬಲಗು ಜಿಲ್ಲಾ ಬೋರ್ಡುಗಳಿಗೆ ಪಾವತಿಯಾದರೆ ಸಾಕು. ಎರಡನೆಯ ಉಪನಿಯಮದಲ್ಲಿ ನಮೂದಾಗಿರತಕ್ಕ ಶೇಕಡ $6\frac{1}{4}$ ಮೊಬಲಗನ್ನು ಸರ್ಕಾರದವರೇ ನೇರವಾಗಿ ಅಥವಾ ತಾಲ್ಲೂಕಾಭಿವೃದ್ಧಿ ಸಮಿತಿಗಳನ್ನು ನೇಮಕಮಾಡುವುದಾದರೆ ಆ ಸಮಿತಿಗಳ ಮೂಲಕ ಅಭಿವೃದ್ಧಿಕಾರ್ಯಗಳನ್ನು ನಡೆಸುವುದಕ್ಕೆ ಅನುಕೂಲವಾಗುವಂತೆ ಮಾಡುವುದಕ್ಕೆ ಕೊಡುವುದಕ್ಕಾಗುತ್ತದೆಂದು ಮಾಡಿದೆ.... ..

Sir according to the provision continued in section 106, it is obligatory for the Government to assign to District Board an amount equal to $6\frac{1}{4}\%$ of the land revenue collected in that area within the jurisdiction of the District Board. It is also obligatory on the Government of Mysore to assign to all the District Boards in the State, an amount equal to $6\frac{1}{4}$ per cent of the net land revenue collected in the entire State, the amount being allotted at the discretion of the Government to each District Board.

It is the intention of Government to delete this clause (2) which provides for the payment of 6¼ per cent of the total land revenue collected in the State, so that this money may be spent for developmental activities in the rural areas. Therefore, we propose that this clause *viz.*, clause (2) in section 106 may be deleted. The amount to be utilised for the developmental activities in the rural areas either directly through the revenue agency or through the Taluk Development Committees which we intend constituting.

ಜಿಲ್ಲಾ ಬೋರ್ಡುಗಳ ಚುನಾವಣೆಗಳು ನಡೆದು ಬಹಳ ವರ್ಷಗಳಾದ್ದರಿಂದ ಪುನಃ ಚುನಾವಣೆ ನಡೆಸುವುದಕ್ಕೆ ಬಹಳ ಜರೂರಾಗಿ ಮಸೂದೆಯಾಗತಕ್ಕದ್ದು ಅವಶ್ಯಕವಾಗಿದೆ. ಈ ಮಸೂದೆ ಬಹಳ ಸೂಕ್ತವಾದ ಮತ್ತು ಸರಳಸ್ವಭಾವದಿಂದ ಕೂಡಿದ್ದಾಗಿದೆ. ಆದ್ದರಿಂದ ಇದರ ವಿಚಾರದಲ್ಲಿ ಹೆಚ್ಚು ಭಿನ್ನಾಭಿಪ್ರಾಯವಿಲ್ಲವೆಂದು ನಾನು ಭಾವಿಸಿದ್ದೇನೆ. ಆದಷ್ಟು ಜಾಗ್ರತೆ ಈ ಮಸೂದೆ ಕಾನೂನಾಗುವಂತೆ ಮಾಡಬೇಕೆಂದು ನಾನು ಮಾನ್ಯ ಸದಸ್ಯರನ್ನು ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—Motion moved:

"That the Mysore Village Panchayets and District Boards (Amendment) Bill, 1955, be taken into consideration."

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಬಿಲ್ಲಿನ ಇತಿಹಾಸ ಹಿನ್ನೆಲೆ ಬಹಳ ಜಾಸ್ತಿಯಿದೆಯೆಂದು ಮಾನ್ಯ ಸಚಿವರೇ ಅಪ್ಪಣೆಕೊಡಿಸಿದರು. ಆದರೆ, ಅದು ಏನೆಂಬುದನ್ನು ಅವರು ಹೇಳಲಿಲ್ಲ. ಜಿಲ್ಲಾ ಬೋರ್ಡ್ ವ್ಯವಸ್ಥೆ ನಮ್ಮ ಇಂಡಿಯಾದೇಶವಲ್ಲೆಲ್ಲಾ ಮೈಸೂರಿನಲ್ಲಿ ಬಹಳ ತೃಪ್ತಿಕರವಾಗಿ ನಡೆಯುತಕ್ಕಂಥ ದೇಶವಾಗಿತ್ತು. ಆದರೂ ಕೂಡ ಪ್ರಜಾಸರ್ಕಾರ ಎಂದು ಹೇಳಿಸಿಕೊಳ್ಳುವ ಸರ್ಕಾರ ಬಂದಮೇಲೆ ಇದಕ್ಕೆ ಬಂದಂಥ ಅವಸ್ಥೆ ಬಹಳ ಶೋಚನೀಯವಾಗಿದೆ. ಇದರಿಂದಾಗಿ ಜನಗಳಿಗೆ ಆಗಿರುವ ಅನುಭವ ಬಹು ವಿಷಾದಕರವಾಗಿದೆ. ನಮ್ಮಲ್ಲಿ 1862ರಿಂದ ಜಿಲ್ಲಾ ಬೋರ್ಡ್ ವ್ಯವಸ್ಥೆಯಿತ್ತು. ಅದು ಕಾಲಕ್ರಮೇಣ ಬದಲಾವಣೆಯಾಗಿ 1926ರಲ್ಲಿ ಒಂದು ಸರಿಯಾದ ಕಾನೂನೇರ್ಪಟ್ಟು ತಾಲ್ಲೂಕು ಬೋರ್ಡ್‌ಗಳಿರುವುದು ಅನಾವಶ್ಯಕವೆಂದು ತೆಗೆದುಹಾಕಿ ಪಂಚಾಯ್ತಿಗಳಿಗೂ ಜಿಲ್ಲಾಬೋರ್ಡ್‌ಗಳಿಗೂ ಹೆಚ್ಚಿನ ಅಧಿಕಾರ ಕೊಟ್ಟಿದ್ದಾಯಿತು.

2-30 P.M.

ನಮ್ಮ ಜಿಲ್ಲಾ ಬೋರ್ಡುಗಳು ಬಹಳ ದಕ್ಷ ರೀತಿಯಿಂದ ಕೆಲಸ ಮಾಡಿಕೊಂಡು ಬಂದಿವೆ. 1926ನೆಯ ಇಸವಿಯಲ್ಲಿ ಜಿಲ್ಲಾ ಬೋರ್ಡಿಗೆ ಹೆಚ್ಚು ಅಧಿಕಾರ ಕೊಟ್ಟಿದ್ದರು ಮತ್ತು ಈಚೆಗೆ ಅವಕ್ಕೆ ಖಾಸಗಿ ಅಧ್ಯಕ್ಷರು ನೇಮಕವಾಗಿದ್ದರು. 1930ರಿಂದಲೇ ಅಧಿಕಾರಪಡೆದು ಅದನ್ನು ದಕ್ಷರೀತಿಯಿಂದ ನಡೆಸಿಕೊಂಡು ಬಂದಿದ್ದಾರೆ. ಯಾವ ಜಿಲ್ಲಾಬೋರ್ಡುಕೂಡ ತನ್ನ ಕೆಲಸ ಕಾರ್ಯಗಳಲ್ಲಿ ಅದಕ್ಷತೆಯನ್ನು ತೋರ್ಪಡಿಸಿಕೊಂಡಿಲ್ಲ. ಜಿಲ್ಲಾ ಬೋರ್ಡು ಅಧ್ಯಕ್ಷರುಗಳು ಬಹಳ ದಕ್ಷತೆಯಿಂದ ಕೆಲಸ ಮಾಡಿದ್ದಾರೆ. ಪ್ರಜಾಸರ್ಕಾರ ಬಂದಮೇಲೆ ಕೂಡಲೆ ಸ್ಥಳೀಯ ಸಂಸ್ಥೆಗಳಿಗೆ ಪೂರ್ಣ ಅಧಿಕಾರ ಸಿಕ್ಕುತ್ತದೆಂದು ನಾವು ತಿಳಿದುಕೊಂಡಿದ್ದೆವು. ರಾಜ್ಯಾಡಳಿತವನ್ನು ಯಾವ ರೀತಿ ಪ್ರಜೆಗಳ ಪ್ರತಿನಿಧಿಗಳು ದಕ್ಷತೆಯಿಂದ ನಡೆಸುತ್ತಾರೋ ಅದೇ ರೀತಿ ಸ್ಥಳೀಯ ಸಂಸ್ಥೆಗಳ ಆಡಳಿತವೂ ದಕ್ಷತೆಯಿಂದ ನಡೆಯಲು ಆ ಸಂಸ್ಥೆಗಳಿಗೆ ಹೆಚ್ಚಿನ ಸೇವಾಕ್ಷೇತ್ರ ಮತ್ತು ಹೆಚ್ಚು ಅಧಿಕಾರ ಕೊಟ್ಟು ಪ್ರಜೆಗಳ ಕಷ್ಟ ಮತ್ತು ಅವರಿಗೆ ಇರತಕ್ಕ ಅನಾನುಕೂಲಗಳು ಕಡಿಮೆಯಾಗಲು ಅವಕಾಶ ಮಾಡುತ್ತಾರೆ ಎಂಬ ಅಭಿಪ್ರಾಯವಿತ್ತು. ಆದರಂತೆ 1949ನೆಯ ಇಸವಿಯಲ್ಲಿ ಈ ಸರ್ಕಾರ ಬಂದಮೇಲೆ ಪ್ರಜಾಭಿಪ್ರಾಯಕ್ಕನುಗುಣವಾಗಿ ವೆಂಕಟಪ್ಪ ಸಮಿತಿಯನ್ನು ಮಾಡಿದರೆಂಬುದು ನನ್ನ ಅಭಿಪ್ರಾಯ. ಆ ಸಮಿತಿಯು 1950ನೆಯ ಜೂನ್ ತಿಂಗಳಲ್ಲಿ ವರದಿಯನ್ನು ಒಪ್ಪಿಸಿತು. 1952ನೆಯ ಜನವರಿಯಲ್ಲಿ ಬಿಲ್ಲು ಪಾಸಾಯಿತು. 1952ನೆಯ ಫೆಬ್ರುವರಿಯಲ್ಲಿ ಒಂದು ತಿಂಗಳಲ್ಲಿ ಆ ಬಿಲ್ಲನ್ನು ಜಾರಿಗೆ ಕೊಟ್ಟರು. ಅದನ್ನು ಜಾರಿಗೆ ಕೊಟ್ಟ ಕೂಡಲೆ ಚುನಾವಣೆಮಾಡುವುದಕ್ಕೆ ಸರ್ಕಾರಕ್ಕೇನು ಆತಂಕವಿತ್ತು? ವೆಂಕಟಪ್ಪ ಸಮಿತಿಯಲ್ಲಿ ನಾನೂ ಒಬ್ಬ ಸದಸ್ಯನಾಗಿದ್ದೆ. ನಾನು ಡಿಸೆಂಟಿಂಗ್ ನೋಟನ್ನು ಸಹ ಕೊಟ್ಟಿದ್ದೇನೆ. ಡೈರೆಕ್ಟ್ ಎಲೆಕ್ಷನ್ ಆಗಬೇಕೆ, ಇನ್‌ಡೈರೆಕ್ಟ್ ಎಲೆಕ್ಷನ್ ಆಗಬೇಕೆ ಎಂಬ ವಿಚಾರದಲ್ಲಿ ಭಿನ್ನಾಭಿಪ್ರಾಯ ಬಂದುದರಿಂದ ಈ ಬಿಲ್ಲು ತರಬೇಕಾಯಿತೆಂದು ಹೇಳಿದರು. ಆದರೆ ಮೊದಲು ಈ ವಿಚಾರ ಬಂದಾಗಲೇ ಅದರ ಮೇಲೆ ಚರ್ಚೆಯಾಗಲಿಲ್ಲವೆ? ನಾನು ವೆಂಕಟಪ್ಪ ಸಮಿತಿಯ ಸದಸ್ಯನಾಗಿದ್ದಾಗ ಡೈರೆಕ್ಟ್ ಎಲೆಕ್ಷನ್ ಆಗಬೇಕು, ಇನ್‌ಡೈರೆಕ್ಟ್ ಎಲೆಕ್ಷನ್ ಪ್ರಜಾತಂತ್ರಕ್ಕೆ ವಿರೋಧ ಎಂದು ಡಿಸೆಂಟಿಂಗ್ ನೋಟ್ ಕೊಟ್ಟಿರುವುದನ್ನು ಓದಿ ಹೇಳುತ್ತೇನೆ. ಅದು ಈ ರೀತಿಯಿದೆ.

(Extract from the Report of Integration and Co-ordination Committee for Local Bodies).

"The first recommendation to which I am opposed is to the suggested 'Indirect election to the District Councils'. The reasons stated for this course are in no way convincing. To say that direct election to the District Council based on adult franchise may not guarantee securing members who may have an intimate knowledge of village conditions is, to say the least, not correct. If we could have direct elections to the Houses of Legislature and the Village Panchayets based on adult franchise there is no reason as to why we should shirk to adopt the same course in the case of District Councils also. To say that such direct elections will not secure proper representatives of the

(ಶ್ರೀ ಬಿ. ಹುಚ್ಚೇಗೌಡ.)

people is a poor compliment to the public life in Mysore. More than all these elections to the Houses of Legislatures and the Dominion Parliament have to be conducted on the basis of adult franchise and this will be a training ground for the voters to exercise their votes properly if the elections to the District Councils are 'direct' based on adult franchise."

ಅದರಲ್ಲಿ ನಾನು ವಿಶದವಾಗಿ ಹೇಳಿದ್ದೇನೆ. 1952ನೆಯ ಜನವರಿಯಲ್ಲಿ ಈ ಬಿಲ್ಲು ಬಂದಾಗ ಎಲ್ಲಾ ಚರ್ಚೆಯಾಗಿ ನನ್ನ ಅಭಿಪ್ರಾಯಕ್ಕೆ ಪುರಸ್ಕಾರ ದೊರೆಯಿತು; ಆ ದಿವಸ ಅದಕ್ಕೆ ಮನ್ನಣೆ ದೊರೆಯಿತು. ಆಗ ಭಿನ್ನಾಭಿಪ್ರಾಯ ಬಂದಮೇಲೆ ಏಕೆ ಎಲೆಕ್ಷನ್ ಜಾರಿಗೆ ಕೊಡಲಿಲ್ಲ? ಈ ದಿವಸ ಎಷ್ಟು ಅದಕ್ಕೆ ಜರೂರಾತಿಯಿದೆಯೋ ಅದೇ ಜರೂರಾತಿ ಆಗಿರಲಿಲ್ಲವೆ? ಹಾಗಿದ್ದರೂ ಕೂಡ ಸುಮ್ಮನಿದ್ದು ಮೂರು ವರ್ಷಗಳಾದಮೇಲೆ ಈ ರೀತಿ ಮಾಡುವುದು ಎಷ್ಟು ಆಭಾಸ, ಟೊಳ್ಳು ಎಂಬುದನ್ನು ಮಾತ್ರ ಹೇಳಬೇಕಾಗಿಲ್ಲ.

ಆಮೇಲೆ ಜಿಲ್ಲಾ ಬೋರ್ಡಿಗೆ ಎಲ್ಲಾ ಅಭಿವೃದ್ಧಿ ಕಾರ್ಯ ಮಾಡುವುದಕ್ಕೆ ಶಕ್ತಿಯಿಲ್ಲ ಎಂದು ಹೇಳಿದರು. ನಮ್ಮ ದುರಾದೃಷ್ಟವೋ ಏನೋ ಈಗಿರುವ ಮಂತ್ರಿಗಳಲ್ಲಿ ಒಬ್ಬರೂ ಕೂಡ ಜಿಲ್ಲಾಬೋರ್ಡ್ ಅಧ್ಯಕ್ಷರಾಗಿರಲಿಲ್ಲ. ಅವರ ಅಭಿಪ್ರಾಯ ನೋಡಿ ಅವರಿಗೆ ತಿಳಿಯದೆ ಮಾತನಾಡಿದರೆಂದು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಅಭಿವೃದ್ಧಿ ಕಾರ್ಯ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರೆ ಎಷ್ಟುಮಟ್ಟಿಗೆ ಮಾಡುವುದಕ್ಕಾಗುವುದಿಲ್ಲ? ಜಿಲ್ಲಾಬೋರ್ಡುಗಳ ಕಾರ್ಯಭಾಗ ಲೆಕ್ಕಹಾಕಿ ಹತ್ತು ವರ್ಷಗಳಲ್ಲಿ 1943ನೆಯ ಇಸವಿಯಿಂದ ಎಷ್ಟು ಕೆಲಸವಾಗಿದೆಯೆಂಬುದನ್ನು ಹೇಳುತ್ತೇನೆ. 1943ರಲ್ಲಿ 15 ಲಕ್ಷ ರೂಪಾಯಿಗಳ ವ್ಯವಹಾರ ಮಾಡಿದರು; 1952 ರಿಂದ 8 ವರ್ಷ 42 ಲಕ್ಷ ರೂಪಾಯಿಗಳ ವ್ಯವಹಾರ ಮಾಡಿದರು. ಇದನ್ನು ನೋಡಿದರೆ ಮೂರರಷ್ಟು ಜಾಸ್ತಿ ಕೆಲಸ ಮಾಡಿರುವುದು ವ್ಯಕ್ತವಾಗುತ್ತದೆ. ಹಿಂದೆ ಒಂದಕ್ಕೆ ಮೂರರಷ್ಟು ಸೌಕರ್ಯ ಹೆಚ್ಚಿಸಲು, ಹೊಸದಾಗಿ ತೆರಿಗೆ ಹೆಚ್ಚಿಸಲು, ಇರುವ ಆದಾಯ ಅಭಿವೃದ್ಧಿಪಡಿಸಲು, ರಸ್ತೆ, ಆಸ್ಪತ್ರೆ ವಗೈರೆ ಮಾಡಿಸಲು ಮಾಡಿರುವ ಪ್ರಯತ್ನ ನೋಡಿದರೆ, ಒಂದಕ್ಕೆ ಮೂರರಷ್ಟು ಕೆಲಸಮಾಡಿರುವುದನ್ನು ನೋಡಿದರೆ ಜಿಲ್ಲಾಬೋರ್ಡಿಗೆ ದಕ್ಷತೆಯಿದೆಯೆಂಬುದು ವೇದ್ಯವಾಗುವುದಿಲ್ಲವೆ? ಹೀಗಿರುವಾಗ 5 ಲಕ್ಷ ರೂಪಾಯಿ ಹೆಚ್ಚಾಗಿ ಖರ್ಚುಮಾಡಲು ಶಕ್ತಿಯಿಲ್ಲವೆಂದು ಹೇಳುವುದು ಎಷ್ಟು ಸಾಧುವಾದುದು, ಅದರಲ್ಲಿ ಎಷ್ಟು ಸತ್ಯಾಂಶವಿದೆಯೆಂಬುದು ಮಾನ್ಯ ಸದಸ್ಯರಿಗೆ ಹೊಸದಾಗಿ ಹೇಳಬೇಕಾಗಿಲ್ಲ. 8 ವರ್ಷಗಳಲ್ಲಿ 15 ಲಕ್ಷದಿಂದ 45 ಲಕ್ಷಕ್ಕೆ ಹೆಚ್ಚಿಸಿದ್ದಾರೆ. ಅವರಿಗೆ ಶೇಕಡ $6\frac{1}{4}$ರಂತೆ 5 ಲಕ್ಷ ರೂಪಾಯಿ ಕೊಡುತ್ತಾರೆ. 5 ಲಕ್ಷ ಖರ್ಚುಮಾಡಲು ಅವರಿಗೆ ಶಕ್ತಿಯಿಲ್ಲವೆ? ಅದಕ್ಕೆ ಶಕ್ತಿಯಿಲ್ಲ, ತಾಲ್ಲೂಕುಬೋರ್ಡ್ ಆಗಬೇಕು ಎಂದು ಹೇಳಿದರೆ ಎಷ್ಟುಮಟ್ಟಿಗೆ ಅದನ್ನು ನಂಬಬಹುದು? ಅಲ್ಲದೆ ತಾಲ್ಲೂಕುಬೋರ್ಡನ್ನು ಸ್ಥಾಪಿಸುವುದರಿಂದ ಒಂದೊಂದು ತಾಲ್ಲೂಕುಬೋರ್ಡಿಗೆ ಒಬ್ಬೊಬ್ಬ ಚೀಫ್ ಎಗ್ಸಿಕ್ಯೂಟಿವ್ ಆಫೀಸರ ಪ್ರಕಾರ 80 ತಾಲ್ಲೂಕು ಬೋರ್ಡುಗಳಿಗೆ ಕೊಡಲು ಇದು ಸಾಕೆ? ಸಿಬ್ಬಂದಿಗಾಗಿ ಈ ಹಣ ಕೊಡುತ್ತಾರೆಂದು ಹೇಳಬಹುದು.

ಎರಡನೆಯದಾಗಿ, ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್ ಮತ್ತು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್‌ಬೋರ್ಡ್ ಆಗಬೇಕೆಂಬ ವಿಚಾರ ವೆಂಕಟಪ್ಪ ಸಮಿತಿಯಲ್ಲಿ ಚರ್ಚೆಯಾಯಿತು. ಹಿಂದಿದ್ದ ತಾಲ್ಲೂಕು ಡೆವಲಪ್‌ಮೆಂಟ್ ಸಮಿತಿ ಮತ್ತು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಸಮಿತಿ ಅನುಭವದಿಂದ ಈ ಬಿಲ್ಲನ್ನು ಮಾಡಿದ್ದಾರೆ. ಆದರೆ ಡೆವಲಪ್‌ಮೆಂಟ್ ಸಮಿತಿಯಿಲ್ಲದೆ ಮಾಡಿದರೆ ಸುಸೂತ್ರವಾಗಿ ಕೆಲಸ ನಡೆಯುವುದಿಲ್ಲ, ದಕ್ಷತೆಯಿರುವುದಿಲ್ಲ.

Sri Kadidal MANJAPPA.—The report of the Committee on which my Hon'ble friend was a member made this recommendation. There is a recommendation for constituting a non-statutory body at the taluk level.

"There shall be a non-statutory body at the revenue taluk level." (Page 65).

ಶ್ರೀ ಬಿ. ಹುಚ್ಚೇಗೌಡ.—ನಾನು ಡಿಸೆಂಟಿಂಗ್ ನೋಟ್‌ನಲ್ಲಿ ಚೀಫ್ ಎಗ್ಸಿಕ್ಯೂಟಿವ್ ಆಫೀಸರ ವಿಚಾರ ಡೆವಲಪ್‌ಮೆಂಟ್‌ಕಮಿಟಿ ವಿಚಾರ ರೆಫರ್‌ಮಾಡಿರುವುದರಿಂದ ಅದನ್ನು ನೋಡಬಹುದು. ಪುನಃ ಆ ವಿಚಾರದಲ್ಲಿ ಜವಾಬು ಹೇಳಬೇಕಾಗಿಲ್ಲ.

ಆಮೇಲೆ ತಾಲ್ಲೂಕು ಕಮಿಟಿ ವಿಚಾರ ಚರ್ಚೆಗೆ ಬಂದು ಚಂದ್ರಶೇಖರಯ್ಯ ಸಮಿತಿಯನ್ನು ನೇಮಕಮಾಡಿದರು. ಈ ಸರ್ಕಾರ ಅಧಿಕಾರಕ್ಕೆ ಬಂದಕೂಡಲೆ ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿಗಳನ್ನು ಒಂದೇ ದಿವಸದಲ್ಲಿ ಹೊಡೆದುಹಾಕಿತು. ಅದು ಒಳ್ಳೆಯದೆಂದು ಯಾರೂ ಮನ್ನಣೆ ಕೊಡಲಿಲ್ಲ. ಹಾಗಿರುವಾಗ ಈಗ ಏಕ್‌ದಂ ಈ ಅಭಿಪ್ರಾಯ ಸರ್ಕಾರ ಹೇಳಲು ಯಾವ ಕಾರಣವಿದೆಯೋ ಗೊತ್ತಾಗಲಿಲ್ಲ.

ಆಮೇಲೆ ನಮ್ಮ ದೇಶದಲ್ಲೂ ಕೂಡ 1926 ಆದಮೇಲೆ ಮಾಡಲ್ ವಿಲೇಜ್ ಸ್ಕೀಂ ಬಂತು, ಹೋಬಳಿ ಡ್ರೈವ್ ಬಂತು, ರೂರಲ್ ಡೆವಲಪ್‌ಮೆಂಟ್ ಸ್ಕೀಂ ಬಂತು, ನ್ಯಾಷನಲ್ ಎಕ್ಸ್‌ಟೆನ್ಷನ್ ಸ್ಕೀಂ ಬಂತು. ಈ ನ್ಯಾಷನಲ್ ಎಕ್ಸ್‌ಟೆನ್ಷನ್ ಸ್ಕೀಂ ಬರುವುದಕ್ಕೆ ಮುಂಚೆಯೇ 1947ರಲ್ಲಿ ಹೋಬಳಿ ಡ್ರೈವ್ ಎಂದು ಮಾಡಿದ್ದೆವು. ಗ್ರಾಮಸುಧಾರಕರನ್ನು ನೇಮಕಮಾಡಿಕೊಂಡು Village Workers ಎಂದು ಇಂಡಿಯಾ ಸರ್ಕಾರದವರು ಯಾವ ರೀತಿ ಮಾಡಿದ್ದರೋ ಅದೇ ರೀತಿ ಕೆಲಸಮಾಡುವ ಸ್ಕೀಂನ್ನು ಮೈಸೂರಿನಲ್ಲಿ ಮೊದಲೇ ತಂದಿದ್ದೇವೆ. ಆ ಅನುಭವ ಇಟ್ಟುಕೊಂಡು ಕೂಡ ಈ ರೀತಿ ತಡವರಿಸುತ್ತ ಇರುವುದು ಮತ್ತು ಈ ಬಿಲ್ಲಿನ ವಿಚಾರದಲ್ಲಿ ಹೀಗೆ ನಡೆಸುತ್ತ ಇರತಕ್ಕ ನಡವಳಿಕೆ ಬಹಳ ವಿಷಾದಕರವಾದದ್ದು ಎಂದು ಹೇಳುತ್ತೇನೆ.

ಆಮೇಲೆ ಚಂದ್ರಶೇಖರಯ್ಯ ಕಮಿಟಿ ಎಂದು ಒಂದು ಮಾಡಿದ್ದರು. ಈ ಚಂದ್ರಶೇಖರಯ್ಯ ಕಮಿಟಿ ಏಕೆ ಮಾಡಿದ್ದು ಎಂದರೆ ಇನ್ನೂ ಒಂದು ವರ್ಷದ ದಿವಸ ಚುನಾವಣೆಗಳನ್ನು ಮುಂದಕ್ಕೆ ತಳ್ಳುವುದಕ್ಕೆ ಅಥವಾ ಜಿಲ್ಲಾ ಬೋರ್ಡುಗಳ ಚುನಾವಣೆ ನಡೆಯದಂತೆ ಮಾಡುವುದಕ್ಕೆ ಸಾಧ್ಯವಾಗಲಿ ಎಂದು ಹೇಳಿ ಮಾಡಿದರು. ಆ ಸಮಿತಿಯವರ ಅಭಿಪ್ರಾಯಕ್ಕೆ ಎಳ್ಳಷ್ಟೂ ಬೆಲೆ ಕೊಡಲಿಲ್ಲ. ಆ ಸಮಿತಿ ರಿಪೋರ್ಟಿನಲ್ಲಿ ಏನು ಹೇಳಿದೆ ಎಂಬುದು ಕೂಡ ಇಲ್ಲ. ಸಮಿತಿ ಏಕೆ ಮಾಡಬೇಕಾಯಿತು, ಯಾವ ಸರ್ಕಂಸ್ಟೆನ್ಸಸ್‌ನಲ್ಲಿ ಎಂದು ಕೂಡ ಇಲ್ಲ. 1952ನೇ ಬಿಲ್ ಪ್ರಕಾರ ಒಂದು ಟ್ರೈಯಲ್ ಕೊಟ್ಟು, ಚುನಾವಣೆ ನಡೆಸಿ, ಅದರ ಸಾಧಕ ಬಾಧಕಗಳೇನು ಎಂಬುದನ್ನು ನೋಡಿದ್ದರೆ ಚೆನ್ನಾಗಿತ್ತು ಮತ್ತು ಆಗ ಯಾರು

ಒಳ್ಳೆಯ ಅಭಿಪ್ರಾಯಪಟ್ಟರೋ ಅವರ ಮಾತಿಗೂ ಕೂಡ ಲಕ್ಷ್ಯ ಕೊಡಲಿಲ್ಲ.

ಆ ಮೇಲೆ ಈ ಬಿಲ್ಲು ಹುಟ್ಟುತ್ತಲೇ ಎಷ್ಟೋ ತಿದ್ದುಪಡಿಗಳು ಆದವು. ಚುನಾವಣೆ ವಿಚಾರದಲ್ಲಿ 3ನೇ ಸಾರಿ ತಿದ್ದುಪಡಿ ಬಂದಿದೆ. ಒಂದು ಹೋಬಳಿವಾರು ಮಾಡಬೇಕುಎಂದೂ, ಎರಡನೆಯದುಮಲ್ಟಿ ಮೆಂಬರ್ ಕಾನ್‌ಸ್ಟಿಟ್ಯುಯನ್‌ಸಿ ಮಾಡತಕ್ಕದ್ದು ಎಂದೂ ಆಮೇಲೆ ಷೆಡ್ಯೂಲ್ 4ರ ಪ್ರಕಾರ ಇದ್ದುದನ್ನು ತಿರುಗಿ ಪ್ರತಿಯೊಂದಕ್ಕೂ 50 ಜನ ಮೆಂಬರುಗಳು ಇರಬೇಕೆಂದೂ ಮಾಡಿದರು. ಇದರಲ್ಲೇ ಕಾಲಹರಣ ಆಯಿತು. ಈಗ ಏನಾಗಿದೆ ಎಂದರೆ ಹಿಂದಿನ ಬಿಲ್‌ನಲ್ಲಿ ಏನು ಮಾಡಿದ್ದರೋ ಅದೇರೀತಿ ಪ್ರತಿಯೊಂದು ತಾಲ್ಲೂಕಿಗೂ ಒಬ್ಬೊಬ್ಬ ಷೆಡ್ಯೂಲ್ಡ್ ಕ್ಯಾಸ್ಟ್ ಮೆಂಬರು ಇರಬೇಕೆಂದು ತಿದ್ದುಪಡಿ ಮಾಡಿದರು. ಈಗಿನ ತಿದ್ದುಪಡಿ ಪ್ರಕಾರ ಸರ್ಕಾರದವರೇ ಆ ಪವರ್ ತೆಗೆದುಕೊಂಡು ಪ್ರತಿಯೊಂದು ತಾಲ್ಲೂಕಿಗೂ 3 ಜನಕ್ಕೆ ಜಾಸ್ತಿ ಇರಬಾರದು ಎಂದು ಮಾಡಿದ್ದಾರೆ. ಜನಸಂಖ್ಯೆಗನುಗುಣವಾಗಿ ಇರಬೇಕೆಂದು ಮಾಡಿದ್ದಾರೆ, ಇದರಲ್ಲೇ ಷೆಡ್ಯೂಲ್ಡ್ ಕ್ಯಾಸ್ಟಿಗೆ ಎಷ್ಟಿರಬೇಕೆಂಬುದನ್ನು ಏಕೆ ನಿಗದಿಮಾಡಬಾರದಾಗಿತ್ತು ? ಈ ರೀತಿ ನಿಗದಿಇಲ್ಲದೆ ಯಾವ ಯಾವ ತಾಲ್ಲೂಕಿಗೆ ಎಷ್ಟೆಷ್ಟು ಪ್ರಾತಿನಿಧ್ಯ ಕಾನೂನು ಪ್ರಕಾರ ಇರಬೇಕು, ಎಂದು ಮಿನಿಮಂ ಏನಾದರೂ ಉಂಟೇ ? ಒಂದು ತಾಲ್ಲೂಕಿಗೆ ಒಂದೇ ಎರಡೇ ಎನ್ನುವುದನ್ನು ರೆಗ್ಯುಲೇಟ್ ಮಾಡಿಲ್ಲ. ಇದು ಒಂದು ಅನಾಮಲಿ ಆಗುತ್ತದೆ.

ಆ ಮೇಲೆ ಎಲ್ಲಕ್ಕಿಂತ ಹೆಚ್ಚಾಗಿ ಸೆಕ್ಷನ್ 106 (3) ರಲ್ಲಿ "In sub-section (4), the figures and brackets '(2)' shall be omitted" ಎಂದು ಇದೆ. ಇದು ಬಹಳ ಅನ್ಯಾಯ. ಜಿಲ್ಲಾಬೋರ್ಡಿನವರಿಗೆ ಈಗ ಅವರ ಜವಾಬ್ದಾರಿ ಬಹಳವಾಗಿ ಜಾಸ್ತಿಯಾಗಿದೆ. ಮೊದಲು ಕೇವಲ ಒಂದೊಂದು ತಾಲ್ಲೂಕಿಗೆ ಒಂದು ಎರಡು ಆಸ್ಪತ್ರೆಗಳು ಇದ್ದವು. ಈಗ 5–6 ಆಸ್ಪತ್ರೆಗಳು ಇವೆ. ಅವನ್ನು ನಡಸಬೇಕಾಗಿದೆ. ಮತ್ತು ಸ್ಯಾನಿಟೇಷನ್‌ಗೆ ಲಕ್ಷಾಂತರ ರೂಪಾಯಿ ಖರ್ಚುಮಾಡಬೇಕಾಗಿದೆ. ಮೊದಲು ಕೇವಲ 18–20 ಸಾವಿರ ರೂಪಾಯಿಗಳನ್ನು ಒಂದೊಂದು ಕಡೆ ಖರ್ಚು ಮಾಡುತ್ತ ಇದ್ದರು. ಅದೇ ಈಗ 1½ ಕೋಟಿ ರೂಪಾಯಿಗಳವರೆಗೂ ಖರ್ಚುಮಾಡಬೇಕಾಗಿದೆ; ಮತ್ತು ರಸ್ತೆಗಳು ದಿನವಹಿ ಒಂದು ಊರಿನಿಂದ ಇನ್ನೊಂದು ಊರಿಗೆಹೋಗಬೇಕಾಗಿರುವಾಗ, ಈ ರಸ್ತೆಗಳು ನವನಾಗರೀಕತೆಯ ಕಾಲದಲ್ಲಿ ಬಹಳ ಅಗತ್ಯ. ಅವನ್ನು ಮಾಡಬೇಕಾದ ಅವಶ್ಯಕತೆ ಬಹಳವಾಗಿರತಕ್ಕ ಈ ಪರಿಸ್ಥಿತಿಯಲ್ಲಿ ಅವರಿಗೆ ಕೊಟ್ಟಿರತಕ್ಕ ಶೇಕಡ 6¼ ಬಹಳ ಅನ್ಯಾಯವಾಗುತ್ತದೆ. ಹಿಂದೆ ಇದರಲ್ಲಿ ಬೇಕಾದಷ್ಟು ಗ್ರ್ಯಾಂಟು ಕೂಡ ಬರುತ್ತಾ ಇತ್ತು. ಲ್ಯಾಂಡ್ ರೆವಿನ್ಯೂ ನಮ್ಮ ದೇಶದಲ್ಲಿ ಸುಮಾರು 30–40 ವರ್ಷದಿಂದ ಇದ್ದಷ್ಟೇ ಇದೆ. 1 ಕೋಟಿ 30 ಲಕ್ಷ ರೂಪಾಯಿ ಹಿಂದೆ ಇತ್ತು. ಈಗಲೂ ಅಷ್ಟೇ ಇದೆ. ನಮ್ಮ ಸಂಸ್ಥಾನದ ಒಟ್ಟು ಉತ್ಪತ್ತಿ 2½ ಕೋಟಿ ರೂಪಾಯಿ ಇದ್ದಾಗ ಎಷ್ಟಿತ್ತೋ 20 ಕೋಟಿ ರೂಪಾಯಿಗಳಷ್ಟು ಹೆಚ್ಚಿರತಕ್ಕ ಈ ಸಮಯದಲ್ಲೂ ಅಷ್ಟೇ ಇದೆ. ಆದ್ದರಿಂದ ಲ್ಯಾಂಡ್ ರೆವಿನ್ಯೂನಿಂದ ಬರತಕ್ಕ ಉತ್ಪತ್ತಿ ಎಲ್ಲಾ ಆಯಾಯ ಗ್ರಾಮದವರಿಗೇ ಅಥವಾ ಸ್ಥಳೀಯ ಸಂಸ್ಥೆಗಳಿಗೇ ಕೊಡಬೇಕಾದ್ದು ಸೂಕ್ತ. ಆದಷ್ಟು ಜಾಗ್ರತೆ ಪಂಚಾಯ್ತಿಗಳಿಗೆ ಶೇಕಡ 50, ಜಿಲ್ಲಾಬೋರ್ಡಿಗೆ ಶೇಕಡ 50ರಂತೆ ಲ್ಯಾಂಡ್ ರೆವಿನ್ಯೂ ಕೊಟ್ಟು ಅವರು ಲ್ಯಾಂಡ್ ರೆವಿನ್ಯೂ ವಸೂಲು ಮಾಡಿಕೊಳ್ಳುವುದಕ್ಕೆ ಕಾನೂನುಮಾಡಬೇಕು. ಈಗ ಮಾಡಿರತಕ್ಕ ಕಾನೂನಿನ ಪ್ರಕಾರ ನಾವು ಹಿಂದು ಹಿಂದಕ್ಕೆ ಹೋಗುತ್ತಾ ಇದ್ದೇವೆ. ನಮ್ಮ ಪಂಚಾಯ್ತಿ ಆಕ್ಟ್ ತೆಗೆದುಕೊಂಡರೆ ಅದರಲ್ಲೂ ಕೂಡ ಹಿಂದೆ ಇದ್ದಷ್ಟು ಅಧಿಕಾರ ಈಗ ಪಂಚಾಯ್ತಿಗಳಿಗೆ ಕೊಟ್ಟಿಲ್ಲ ಒಬ್ಬ ಸೆಕ್ರೆಟರಿ ಎಂದು ಇಟ್ಟಿದ್ದಾರೆ. ಸೆಕ್ರೆಟರಿ ಅಧೀನದಲ್ಲಿ ಕೆಲಸಕಾರ್ಯಗಳು ನಡೆಯುತ್ತವೆ. ಜನಗಳಿಂದ ಚುನಾಯಿತರಾದ ಪಂಚಾಯ್ತಿದಾರರಿಗೆ ಅಥವಾ ಅಧ್ಯಕ್ಷರಿಗೆ ಏನೇನೂ ಅಧಿಕಾರ ಸಾಲದು. ಜಿಲ್ಲಾ ಬೋರ್ಡಿಗೂ ಕೂಡ ಅದೇ ರೀತಿ ಮಾಡಿದ್ದೀರಿ. ಈಗಿರತಕ್ಕ ಜಿಲ್ಲಾ ಬೋರ್ಡು ಕಾನೂನು ಪ್ರಕಾರ ಹಿಂದಿನ ಬೇಜವಾಬ್ದಾರಿ ಸರ್ಕಾರ ಏನು ಮಾಡುತ್ತ ಇತ್ತು ಎಂದು ಹೇಳುತ್ತ ಇದ್ದೆವೋ ಅದನ್ನೇಮಾಡಿ, ಆ ಕಾನೂನನ್ನೇ ಸಾಧ್ಯವಾದಮಟ್ಟಿಗೂ ಈಗಿನ ಕಾಲಕ್ಕನುಸಾರವಾಗಿ ತಿದ್ದುಪಡಿಮಾಡಿ ಅದರಲ್ಲಿರತಕ್ಕ ರೆಸ್ಟ್ರಿಕ್ಷನ್ ಕಮ್ಮಿಮಾಡಿ ಸ್ವಲ್ಪ ಹೆಚ್ಚುವಿಶಾಲ ಪಡಿಸಿದ್ದೀರಿ. ಜಿಲ್ಲಾ ಬೋರ್ಡುಗಳು ತಾವೇ ಸ್ವಾವಲಂಬಿಗಳಾಗಿ ಅಧಿಕಾರ ನಡೆಸಿ, ತಮ್ಮ ಆದಾಯ ವೆಚ್ಚಕ್ಕೆ ಸರ್ಕಾರದಿಂದ ಬಕ್ಷೆ ನೀಡದೆ, ತಮಗೆ ಅವಶ್ಯಕವಾದ ಕಾನೂನುಗಳನ್ನು ತಾವೇ ಮಾಡಿಕೊಳ್ಳಲು ಒಂದು ಮಾರ್ಗವನ್ನು ಅವರಿಗೆ ಕಲ್ಪಿಸಿಕೊಡಬೇಕು ; ಅವರ ಜವಾಬ್ದಾರಿ ಮತ್ತು ಅವರ ಅನುಭವದ ಮೇಲೆ ಸಾರ್ವಜನಿಕ ಕ್ಷೇತ್ರದಲ್ಲಿ ಜನಗಳು ಇನ್ನೂ ಹೆಚ್ಚಿನ ಕೆಲಸ ಮಾಡುವುದಕ್ಕೆ ತರಪೇತು ಹೊಂದಿದಂತಾಗುತ್ತದೆ ಎಂದು ನಾವು ಯಾವ ಒಂದು ಆಶೆಯನ್ನಿಟ್ಟು ಕೊಂಡಿದ್ದೆವೋ ಅದು ಈಗಿನ ಬಿಲ್‌ನ ಅವಸ್ಥೆಯನ್ನು ನೋಡಿದರೆ ಅದಕ್ಕೆ ವ್ಯತಿರಿಕ್ತವಾಗಿದೆ. ಹಿಂದಿನ ಸರ್ಕಾರದವರು ಖಾಸಗಿಯವರಿಗೆ ಅಧಿಕಾರ ಕೊಡದೇ ಎಷ್ಟುಮಟ್ಟಿಗೆ ಒಂದು ಬಿಕ್ಕಟ್ಟು ಇಟ್ಟುಕೊಂಡಿದ್ದರೋ ಅದೇ ಪರಿಸ್ಥಿತಿ ಈಗಲೂ ಉಂಟು ಮಾಡುತ್ತಾ ಇದ್ದೀರಿ, ಅದಕ್ಕಿಂತಲೂ ಹೆಚ್ಚಾಗಿ ಈ ಸರ್ಕಾರ ವರ್ತಿಸುತ್ತ ಇರುವುದು ನಮ್ಮ ದುರಾದೃಷ್ಟ. 1949ರಲ್ಲಿ ಸರ್ಕಾರ ಈ ವಿಚಾರಕ್ಕೆ ಕೈಹಾಕಿ 1955ನೆ ಇಸವಿ ಬಂದರೂ ಕೊಡ, 6 ವರ್ಷ ತುಂಬಿದರೂ ಕೂಡ ಈ ಕೆಲಸದಲ್ಲಿ ಕೃತಕೃತ್ಯರಾಗಿಲ್ಲ ಎಂದರೆ ಅದು ಅವರ ದಕ್ಷತೆಯನ್ನು ತೋರಿಸುತ್ತದೆಯೇ ಹೊರತು ಜಿಲ್ಲಾ ಸಂಸ್ಥೆಗಳಿಗೆ ದಕ್ಷತೆಯಿಲ್ಲ, ಜಿಲ್ಲಾ ಸಂಸ್ಥೆಗಳಿಗೆ ಅಧಿಕಾರವಾಡಲು ಶಕ್ತಿಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಹೀಗೆ ಮಾಡಿಕೊಂಡು ಹೋಗುವುದರಲ್ಲಿ ಯಾವ ಮಟ್ಟದ ದಕ್ಷತೆಯನ್ನು ಹೊಂದಿದ್ದೀರಿ ಎಂಬುದನ್ನು ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ನಮ್ಮ ಪ್ರತಿನಿಧಿಗಳಾದ ಅವರು ಇಲ್ಲಿ ಮಂತ್ರಿವರ್ಗದಲ್ಲಿ ಕೆಲಸ ಮಾಡುವುದು ಮತ್ತು ಸರ್ಕಾರ ನಡಸುವುದಕ್ಕೆ ಯಾವ ರೀತಿ ದಕ್ಷತೆ ನೀವು ಹೊಂದಿದ್ದೀರೋ ಅದೇ ರೀತಿ ಅಧ್ಯಕ್ಷರಾಗಿ ಕೆಲಸಕಾರ್ಯ ತೃಪ್ತಿಕರವಾಗಿ ಮಾಡಿ ಆಡಳಿತ ನಡೆಸಲು ಹೆಚ್ಚಿನ ಸೇವೆ ಮಾಡಲು ಕೂಡ ಸಿದ್ಧವಾಗಿದ್ದಾರೆ. ಮಂತ್ರಿಗಳು ಇಲ್ಲಿ ಮಾಡತಕ್ಕ ಕೆಲಸಕ್ಕಿಂತ ಹೆಚ್ಚಿನಸೇವೆ ಅಲ್ಲಿ ಸಲ್ಲಿಸುವುದಕ್ಕೆ ಅವರಿಗೆ ಅವಕಾಶವಿದೆ. ಸ್ಥಳೀಯ ಸಂಸ್ಥೆಗಳು ನೇರವಾಗಿ ಅವರ ದುಡ್ಡಿನ ಕೊರತೆಯಿಂದ ಹಣ ಖರ್ಚುಮಾಡುವುದಕ್ಕೆ ಸಾಧ್ಯವಿಲ್ಲದೆ ಇರಬಹುದು, ಆದರೆ ಅವರು ಸೇವಾದೃಷ್ಟಿಯಿಂದ ಸರ್ಕಾರದ ಕೆಲಸಕಾರ್ಯಗಳು ಸುಗಮವಾಗಿ ನಡೆಯಬೇಕಾದರೆ, ಸ್ಥಳೀಯ ಸಂಸ್ಥೆಗಳು ದಕ್ಷತೆಯಿಂದ ಕೆಲಸ ಮಾಡಬೇಕಾದರೆ ಅದಕ್ಕೆ ಸಾಕಾದಷ್ಟು, ಒಂದು ವಿಶಾಲತೆಯ ದೃಷ್ಟಿಯಿಂದ ಅಧಿಕಾರವಿರಬೇಕು ; ಮತ್ತು ಅದಕ್ಕೆ ಜವಾಬ್ದಾರಿ ಪೂರ್ಣವಾಗಿ ವಹಿಸಿರಬೇಕು ಎನ್ನುವುದನ್ನು ಸರ್ಕಾರ ಮನಗಾಣಬೇಕು. ಈ ದೃಷ್ಟಿಯಿಂದ ಕಾನೂನು ಮಾಡುವುದಕ್ಕೆ ಸರ್ಕಾರ

(ಶ್ರೀ ಬಿ. ಹುಚ್ಚೇಗೌಡ)

ಮನಸ್ಸುಮಾಡಿದರೆ ಮಾತ್ರ ನಮ್ಮ ದೇಶ ಮುಂದೆ ಬರುವುದಕ್ಕೆ ಸಾಧ್ಯ. ಅದು ಬಿಟ್ಟು ಕೇವಲ ಒಂದು ಹಿಡಿತದಿಂದ, ಕಪಿಮುಷ್ಟಿಯಿಂದ ಮತ್ತು ಬರೀ ಮಂತ್ರಿ ಮಂಡಲದಿಂದಲೇ ಕೆಲಸ ನಡೆಯಬೇಕು ಎಂಬ ದೃಷ್ಟಿ ಯಿಂದ ಮಾತು ಯಾವ ಒಂದು ಕೆಲಸ ಕಾರ್ಯಗಳಿಗೂ ಸರ್ಕಾರದ ಗ್ರಾಂಟು, ಸಬ್‌ಸಿಡಿ ಮತ್ತು ಪ್ರತಿಯೊಂದು ಸಹಾಯಕ್ಕೂ ಕೂಡ ನೇರವಾಗಿ ಸರ್ಕಾರಕ್ಕೆ ಪ್ರಾರ್ಥ ನೆಮಾಡತಕ್ಕ ಪರಿಸ್ಥಿತಿ ಇಟ್ಟುಕೊಳ್ಳಬೇಕೆಂಬುದಕ್ಕೆ ಖಂಡಿತ ಈಮಾನ್ಯ ಸಭೆಆಗಗೊಡಬಾರದು ಎಂದು ನಾನು ನನ್ನ ಸ್ನೇಹಿತರಲ್ಲಿ ಬೇಡಿಕೊಳ್ಳುತ್ತೇನೆ. ಈಗ ಸ್ಥಳೀಯ ಸಂಸ್ಥೆಗಳು ಇರತಕ್ಕ ಒಂದು ಸ್ಥಿತಿಯನ್ನು ನೋಡಿದರೆ ಮತ್ತು ಜನಗಳಿಗೆ ಇರತಕ್ಕ ತೊಂದರೆ ಏನು ಎಂಬು ದನ್ನು ಪರಿಶೀಲಿಸಿದರೆ ರಸ್ತೆ ವಗೈರೆ ಯಾವುದೂ ಕೂಡ ಸರಿಯಾಗಿ ರಿಪೇರಿ ಆಗುತ್ತಾ ಇಲ್ಲ. ಯಾವುದೊಂದಕ್ಕೂ ತಕರಾರು. ಜನರು ಉತ್ಸಾಹಕರವಾಗಿ ಯಾವ ಒಂದು ಕೆಲಸವನ್ನು ಕೂಡ ಜವಾಬ್ದಾರಿಯುತವಾಗಿ ನಡೆಸಲು ಸಾಧ್ಯವಾಗಿಲ್ಲ. ಆದ್ದರಿಂದ ಈ ಸನ್ನಿವೇಶದಲ್ಲಿ ಸರ್ಕಾರದವರು ಏನು ಮಾಡಬೇಕು ಎಂದರೆ ಈ ಬಿಲ್ಲಿನಲ್ಲಿ ರತಕ್ಕ ನ್ಯೂನಾತಿರಿಕ್ತಗಳನ್ನು ಒಂದೇಸಾರಿ ಸರಿಪಡಿಸು ವುದಕ್ಕೆ ಈ ಬಿಲ್ಲನ್ನೇ ವಾಪಸು ತೆಗೆದುಕೊಳ್ಳಬೇಕು.

Mr. SPEAKER.—According to the Hon'ble Member Government should not be immediately empowered to conduct elections.

Sri B. HUTCHE GOWDA.—They can hold the elections under the present Act.

Mr. SPEAKER.—But Government have accepted your views. Therefore some other Member can make that statement but not you.

ಶ್ರೀ ಬಿ. ಹುಚ್ಚೇಗೌಡ.—ಅಥವಾ ಸೆಲೆಕ್ಟ್ ಕಮಿಟಿ ಗಾದರೂ ಹಾಕಿ ತಕ್ಷಣ ಕೆಲವು ಸೂಕ್ತ ಬದಲಾವಣೆ ಮಾಡಬೇಕಾದುದು ಅಗತ್ಯ. ಆದಷ್ಟು ಜಾಗ್ರತೆ ತೃಪ್ತಿಕರವಾದ ಬದಲಾವಣೆ ಮಾಡುವುದಕ್ಕೆ ಕಾಲಾವ ಕಾಶವಿದೆ ಎಂದು ಹೇಳುತ್ತೇನೆ. 3 ದಿವಸದಲ್ಲಿ ಸೆಲೆಕ್ಟ್ ಕಮಿಟಿಯಿಂದ ಪರಿಶೀಲನೆಮಾಡಿಸಿ ವಾಪಸು ತರಿಸಿಕೊಳ್ಳ ಬಹುದು, ಕೆಲವು ಮೂಲಭೂತ ಬದಲಾವಣೆಗಳನ್ನು ಮಾಡುವುದಕ್ಕೆ ಸಾಧ್ಯವಿದೆ ಎಂದು ನನ್ನ ಅಭಿಪ್ರಾಯ. ಏಕೆಂದರೆ ಜಿಲ್ಲಾ ಬೋರ್ಡುಗಳು ಅನಾಯಕವಾಗಿರುವ ಈಗಿನ ಪರಿಸ್ಥಿತಿಯಲ್ಲಿ ಇನ್ನೂ ಏನೇನೂ ಆಗುತ್ತದೆಯೋ ಹೇಳುವುದಕ್ಕೆ ಸಾಧ್ಯವಿಲ್ಲ. ಮುನಿಸಿಪಲ್ ಏರಿಯಾದಲ್ಲಿ ಇರಬೇಕೇ, ಇಲ್ಲವೇ ಎಂದು ಪ್ರಶ್ನೆಮಾಡಿದರು, ನಾನು ತುಮಕೂರಿನಲ್ಲಿ ವಾಸಮಾಡುತ್ತೇನೆ. ನಾಳೆ ನನಗೆ disqualification ಬರಬಹುದು.

Mr. SPEAKER.—That clause is not under the consideration of the amending Bill. Qualification of the Members ಬಂದಿಲ್ಲ. Voters ಅಷ್ಟೇ ಬಂದಿರುವರು.

Sri B. HUTCHE GOWDA.—Every District Board shall be composed of members elected in accordance with the provisions of the Act and the rules made thereunder.

Reserved seats ವಿಚಾರ ಹೇಳಿದ್ದಾರೆ. ಇದರಲ್ಲಿ ಮತ್ತೆ ಅನಾಮಲಿ ಬಂದಿದೆ. 5 ಜನರಿಗಿಂತ ಹೆಚ್ಚು ಇರಕೂಡದು, ಕಡಿಮೆ ಆಗಿರಬೇಕು ಎಂದರೆ ಎಷ್ಟು? ಒಂದು ಇದ್ದರೆ ಆಗಬಹುದೆ? ಒಂದು ಇರಲೇಬೇಕೆ?

Sri Kadidal MANJAPPA.—The Hon'ble Member is under the misconception that it is provided in the existing Act, that at least one member should be a member of the district board for every taluk. That is not the provision in the existing Act.

Sri B. HUTCHE GOWDA.—Is there not such a provision?

Sri Kadidal MANJAPPA.—There is no such provision as you think.

Mr. SPEAKER.—This is an improvement on the previous provision.

Sri Kadidal MANJAPPA.—If the Hon'ble Member reads section 52, I do not think there will be need for further argument on that subject.

ಶ್ರೀ ಬಿ. ಹುಚ್ಚೇಗೌಡ.—One member from each taluk ಎಂದು ಹೇಳಿದೆ. ಅದನ್ನು ಈಗ ಹೀಗೆ ತಿದ್ದುಪಡಿಮಾಡಿದ್ದಾರೆ. ಉದಾಹರಣೆಗೆ ಹೇಳುವು ದಾದರೆ ಮೊದಲನೆಯ ಆಕ್ಟಿನಲ್ಲಿ ಪ್ರತಿಯೊಂದು ಜಿಲ್ಲಾ ಬೋರ್ಡಿಗೂ 40 ಜನ ಸದಸ್ಯರಿರತಕ್ಕದ್ದೆಂದು ಹೇಳಿ ದ್ದರು. ಆದರೆ ಅದರ ಮುಂದೆ ಜಾರಿಗೆ ಬಂದ ಆಕ್ಟಿ ನಲ್ಲಿ 45 ಜನ ಸದಸ್ಯರಿರಬೇಕೆಂದು ಹೇಳಿದ್ದಾರೆ. ಆದರೆ ಹೀಗೆ ಅವರು ಹೇಳಿರತಕ್ಕದ್ದು ಕೇವಲ ಈ ಡಿಪ್ರೆಸ್ಡ್ ಕ್ಲಾಸಿನವರಿಗೆ ಪ್ರಾತಿನಿಧ್ಯ ಎಷ್ಟಿರಬೇಕು ಎನ್ನುವುದನ್ನು ಮಾತ್ರ ಹೇಳಿದ್ದಾರೆ.

3 P.M.

Sri Kadidal MANJAPPA.—I will read for the benefit of the Hon'ble Member so that he may not repeat his argument once again.

"(1) Seats shall be reserved in District Board for the Scheduled Castes.

"(2) The number of such seats shall bear, as nearly as may be, the same proportion to the total number of seats in the District Board as the population of the Scheduled Castes in the district bears to the total population of the district:

"Provided that at least one seat shall be reserved in District Board for the Scheduled Castes:

"Provided further that this section shall cease to have effect after ten years from the commencement of this Act:

"Provided further that the second proviso to this section shall not affect any representation in a

District Board until the expiry of the erm of office of the members "

There is no proposal just at present to amend this section.

Mr. SPEAKER.—Section 52 is printed in this Bill copy of which is included.

ಶ್ರೀ ಬಿ. ಹುಚ್ಚೇಗೌಡ.—ಸ್ವಾಮಿ ನಾನೀಗ ಸರ್ಕಾರದವರು ಈ ¼% ನ್ನು ತೆಗೆದುಕೊಳ್ಳುವುದರಿಂದ ಜಿಲ್ಲಾ ಬೋರ್ಡುಗಳಿಗೆ ಎಷ್ಟು ಅನಾನುಕೂಲವಾಗುತ್ತದೆ, ಎಷ್ಟು ತೊಂದರೆಯಾಗುತ್ತದೆಂಬ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲಪೇಕ್ಷಿಸುತ್ತೇನೆ. 1943-4 ರಲ್ಲಿ ಜಿಲ್ಲಾ ಬೋರ್ಡುಗಳ ಆಡಳಿತದಲ್ಲಿದ್ದ ರಸ್ತೆ ಸುಮಾರು 4,919 ಮೈಲಿಗಳು. ಅದು 1955 ರಲ್ಲಿ 7,1·0 ಮೈಲಿಗಳಿಗೆ ಏರಿದೆ. ಇದೇ ರೀತಿ number of bridges, causeways, culverts and tunnels ಹಿಂದೆ 28 ಮಾತ್ರ ಇದ್ದುವು. ಈಗ 1,147 ಇರುತ್ತವೆ. Number of Hospitals and Dispensaries 1943-44ರಲ್ಲಿ 255 ಇದ್ದದ್ದು ಈಗ 287ಕ್ಕೆ ಏರಿರುತ್ತೆ. Number of Midwives ಸಂಖ್ಯೆ 182 ಇದ್ದದ್ದು 2 6ಕ್ಕೆ ಏರಿದೆ. Number of Ayurvedic and Unani Dispensaries ಗಳಸಂಖ್ಯೆ 218 ಇದ್ದದ್ದು 271ಕ್ಕೆ ಏರಿದೆ. Number of Veterinary Hospitalsಗಳ ಸಂಖ್ಯೆ 111 ಇದ್ದದ್ದು 201ಕ್ಕೆ ಹೋಗಿದೆ. Expenditure of Vaccination ಮೊದಲು 57,152ರೂಗಳು ಇದ್ದದ್ದು ಈಗ ,1,947 ರೂ.ಗ ಏರಿಹೋಗಿದೆ. Conservancy and Sanitation charges 61,156 ರೂ. ಗಳು ಮಾತ್ರ ಇತ್ತು. ಈಗ .0,414 ರೂ.ಗಳಾಗಿವೆ. 1943ರಲ್ಲಿ Number of High Schools ಗ ಇಷ್ಟು ರಲಿಲ್ಲ. ಈಗ 35 ಹೈಸ್ಕೂಲುಗಳಿವೆ. ಈ ಸ್ಕಾಲರ್‌ಷಿಪ್‌ಗಾಗಿ ಮೊದಲು ಕೊಡುತ್ತಿದ್ದಂಥ ಗ್ರ್ಯಾಂಟ್ 1,420 ರೂಪಾಯಿಗಳು ಮಾತ್ರ ಇತ್ತು. ಈಗ .1,500 ರೂಪಾಯಿಗಳಿಗೆ ಹೆಚ್ಚಿದೆ. ಈ ರೀತಿಯಾಗಿ ಜಿಲ್ಲಾ ಬೋರ್ಡುಗಳ ಕಾರ್ಯಚಟುವಟಿಕೆಗಳು ಜಾಸ್ತಿಯಾಗುತ್ತಿರುವಾಗ ತಾವು ಈ ¼%ನ್ನು ಕಮ್ಮಿ ಮಾಡುವುದು ಸರಿಯಾದ್ದಲ್ಲ. ಹೀಗೆ ತಾವು ಇದನ್ನು ಕಮ್ಮಿಮಾಡುವುದರ ಬದಲು ಹೆಚ್ಚುಮಾಡಬೇಕಾಗಿತ್ತೆಂದು ಹೇಳುತ್ತೇನೆ. ಆದರೆ ಈ ಮೊದಲೇ ಲ್ಯಾಂಡ್ ರೆವಿನ್ಯೂನಲ್ಲಿ 25%ನ್ನು ಈ ಜಿಲ್ಲಾ ಬೋರ್ಡುಗಳ ಖರ್ಚುವೆಚ್ಚಗಳಿಗೆ ತೆಗೆದಿಡಬೇಕೆಂದು ಹೇಳಲಾಗಿತ್ತು. ಆದುದರಿಂದ ಈ ದಿವಸ ಈ ಜಿಲ್ಲಾ ಬೋರ್ಡುಗಳ ಕೆಲಸ ಕಾರ್ಯಗಳು ಸೂಸೂತ್ರವಾಗಿ ನಡೆಯಬೇಕಾದರೆ ಈ ಮಸೂದೆಯಲ್ಲಿ ಅಗತ್ಯವಾಗಿ ಯಾವ ಯಾವ ತಿದ್ದುಪಡಿಗಳನ್ನು ಮಾಡಬೇಕಾಗಿದೆಯೋ ಅವುಗಳನ್ನು ಮಾಡಿ ಅನಂತರ ಈ ಬಿಲ್ಲನ್ನು ಸಭೆಯ ಮುಂದೆ ತರಬೇಕೆಂದು ಹೇಳುತ್ತೇನೆ. ಆದರೆ ತಾವು ಈಗ ಈ ತಾಲ್ಲೂಕು ಬೋರ್ಡುಗಳನ್ನು ರಚನೆಮಾಡಬೇಕೆಂದು ಹೇಳಿದ್ದೀರಿ. ಇದನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ತಾವು ಈ ರೀತಿಯಾಗಿ ಮಾಡುವುದಕ್ಕೆ ಬದಲಾಗಿ ಈಗ ಈ ಜಿಲ್ಲಾ ಬೋರ್ಡುಗಳಿಗೆ ಪ್ರತಿಯೊಂದು ತಾಲ್ಲೂಕಿನಿಂದಲೂ 3 ಜನ ಸದಸ್ಯರುಗಳು ಬರಬೇಕೆಂದು ಹೇಳಿದ್ದೀರೋ ಅದನ್ನೇ ಬೇಕಾಗಿದ್ದರೆ ಇನ್ನೂ 1—2 ಸದಸ್ಯರನ್ನು ಜಾಸ್ತಿಮಾಡಿ, ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಬಂದು ಪ್ರತಿನಿಧಿಸುವಂತೆ ಮಾಡಿದರೆ ಅನುಕೂಲವೇ ಹೊರತು ಈ ತಾಲ್ಲೂಕು ಬೋರ್ಡುಗಳಿಂದ ಏನೂ ಪ್ರಯೋಜನವಾಗುವುದಿಲ್ಲವೆಂದು ಹೇಳುತ್ತೇನೆ ತಾವು ಈ ತಾಲ್ಲೂಕು ಬೋರ್ಡುಗಳನ್ನು ರಚಿಸುವುದರಿಂದ ವ್ಯಥ ಹಣ ವ್ಯಯವಾಗುತ್ತದೆ. ಈಗ ತಾವು ರಚಿಸಬೇಕೆಂದು ಹೊರಟಿರತಕ್ಕ ಈ ತಾಲ್ಲೂಕು ಬೋರ್ಡುಗಳ ಕೆಲಸ ಕಾರ್ಯಗಳಿಗೆ ಹಣವನ್ನು ಯಾವ ರೀತಿಯಾಗಿ ಒದಗಿಸಲು ಹೊರಟಿರುತ್ತಾರೆಂಬ ಬಗ್ಗೆ ಹೀಗೆ ಹೇಳಿದ್ದೀರಿ:—

Provision to secure Public Health Sanitation......... and control of Health Inspectors.

ಈಗ ಈ ಹೆಲ್ತ್ ಇನ್ಸ್‌ಪೆಕ್ಟರುಗಳು ಜಿಲ್ಲಾ ಬೋರ್ಡಿನ ಛಾರ್ಜಿನಲ್ಲಿದ್ದಾರೆ. ನಾಳೆ ಇವರನ್ನು ತಾಲ್ಲೂಕಾ ಮಾಳೆ ಇಡಬೇಕೆಂದರೆ ಎಷ್ಟು ಹಣವನ್ನು ನಾವು ಹೆಚ್ಚಾಗಿ ಖರ್ಚುಮಾಡಬೇಕಾಗಿರುತ್ತದೆಂಬುದನ್ನು ನೋಡಬೇಕಾಗಿದೆ. ಒಂದು ಜಿಲ್ಲೆಗೆ ಸಾಂಕ್ರಾಮಿಕ ಜಾಡ್ಯ ತಗುಲಿದಾಗ ಆಗ ಬೇರೆ ಹೆಚ್ಚು ಸಿಬ್ಬಂದಿಯನ್ನು ನೇಮಿಸಿಕೊಳ್ಳಬೇಕಾಗುತ್ತದೆ. ಹೀಗೆಲ್ಲಾ ಮಾಡುವುದರಿಂದ ಖರ್ಚುವೆಚ್ಚಗಳ ಬಗ್ಗೆ ಎಷ್ಟೊಂದು ವ್ಯತ್ಯಾಸವಾಗುತ್ತದೆಂಬುದನ್ನು ಗಮನಿಸಬೇಕು.

Promotion of vaccination and control of vaccinators and midwives.

Construction and repair of public wells, tanks and water works which serve more than one panchayet, supply of water from them and other sources and preservation of water for drinking and cooking purposes from pollution.

ಈಗ ತಾವು ಈ ರೀತಿಯಾಗಿ ಹೇಳಿರುವುದರಿಂದ ಯಾವ ಯಾವ ಕೆಲಸಕಾರ್ಯಗಳನ್ನು ಆ ತಾಲ್ಲೂಕು ಬೋರ್ಡಿನವರು ಮಾಡಬೇಕು, ಯಾವ್ಯಾವ ಕೆಲಸಗಳನ್ನು ಜಿಲ್ಲಾ ಬೋರ್ಡಿನವರು ಮಾಡಬೇಕು ಎನ್ನುವುದೇ ಗೊತ್ತಾಗುವ ಹಾಗಿಲ್ಲ. ಈ ಎರಡಕ್ಕೂ ಒಂದು ಘರ್ಷಣೆ ನಡೆಯುವ ಹಾಗೆ ತಾವು ಹೇಳಿರುತ್ತೀರಿ. ಈಗ ಈ ಜಿಲ್ಲಾ ಬೋರ್ಡುಗಳಿಗೂ ಮತ್ತು ಗ್ರಾಮ ಪಂಚಾಯಿತ್ತಿಗಳಿಗೂ ಹೇಗೆ ಬೇರೆ ಬೇರೆಯಾಗಿ ಕೆಲಸ ಕಾರ್ಯಗಳನ್ನು ವಿಂಗಡಿಸಲಾಗಿದೆಯೋ ಹಾಗೆ ಇದರಲ್ಲಿ ವಿಂಗಡಣೆ ಮಾಡಿಲ್ಲ. ಗ್ರಾಮಪಂಚಾಯಿತ್ತಿಗಳಿಗೂ ಮತ್ತು ಜಿಲ್ಲಾ ಬೋರ್ಡುಗಳಿಗೂ ಏನೋ ಒಂದು ರೀತಿಯಲ್ಲಿ ಹೊಂದಾಣಿಕೆಯಾಗಿತ್ತು. ಅದಕ್ಕಾಗಿ ಈ ಎರಡನ್ನೂ ಸೇರಿಸಿ ಒಂದು ಆಕ್ಟನ್ನು ತಯಾರಿಸಿದ್ದಾರೆ. ಈಗ ಇಲ್ಲಿಯವರೆಗೂ ಹಾಗೆ ಹೊಂದಾಣಿಕೆಯಿಂದ ಕೆಲಸ ನಡೆಸಿಕೊಂಡು ಬರುತ್ತಿದ್ದಂಥ ಗ್ರಾಮಪಂಚಾಯಿತಿಗಳನ್ನೂ ಮತ್ತು ಜಿಲ್ಲಾ ಬೋರ್ಡುಗಳನ್ನೂ ಬೇರೆ ಬೇರೆಯಾಗಿ ಮಾಡಿ ಈ ಮಧ್ಯೆ ಈ ತಾಲ್ಲೂಕು ಬೋರ್ಡುಗಳನ್ನು ರಚಿಸಬೇಕೆಂದು ಹೇಳಿದ್ದೀರಿ. ಇದರಿಂದ ತುಂಬಾ ತೊಂದರೆಗಳಾಗುತ್ತವೆ. ಈಗ ತಾವು ಈ ತಾಲ್ಲೂಕು ಬೋರ್ಡುಗಳಿಗೆ ಯಾವ ಅಧಿಕಾರ ಕೊಡಬೇಕು, ಈ ಜಿಲ್ಲಾ ಬೋರ್ಡುಗಳಿಗೆ ಯಾವ ಅಧಿಕಾರ ಕೊಡಬೇಕೆಂಬ ಬಗ್ಗೆ ಒಂದಕ್ಕೊಂದಕ್ಕೂ ಕಾನ್‌ಫ್ಲಿಕ್ಟ್ ಆಗತಕ್ಕ ರೀತಿಯಲ್ಲಿ ಮಾಡಿ ಮುಂದೆ ಅದರಿಂದ ತುಂಬಾ ಅನಾನುಕೂಲಗಳಾಗುತ್ತವೆಂದು ನಾನು ತಿಳಿದುಕೊಂಡಿದ್ದೇನೆ. ಈಗ ಈ ಜಿಲ್ಲಾ ಬೋರ್ಡುಗಳು ತಾಲ್ಲೂಕುಗಳಲ್ಲಿ ಡೆವಲಪ್‌ಮೆಂಟ್ ಕಾರ್ಯಗಳನ್ನು

(ಶ್ರೀ ಬಿ. ಹುಚ್ಚೇಗೌಡ.)

ನಡೆಸತಕ್ಕ ಬಗ್ಗೆ ಹಣವನ್ನು ತಾಲ್ಲೂಕು ಬೋರ್ಡುಗಳಿಗೆ ಕೊಡಬೇಕೆಂದು ಹೇಳಿದ್ದೀರಿ.

ಅಧ್ಯಕ್ಷರು.—ಅವರು ಆ ರೀತಿ ಹೇಳಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಆ ರೀತಿಯಾಗಿ ಹೇಳಿದ್ದಾರೆ. ಈ ತಾಲ್ಲೂಕು ಸಮಿತಿ............

ಶ್ರೀ ಕಡಿದಾಳ್ ಮಂಜಪ್ಪ.—ಅವರಿಗೆ ವಿಧಾಯಕವಾಗಿರತಕ್ಕಂಥ ಕೆಲಸಗಳನ್ನು ಮಾತ್ರ ಅವರು ಮಾಡಿದರೆ ಸಾಕಾಗಿದೆ ಎಂದು ಮಾತ್ರ ಹೇಳಿದೆ

ಶ್ರೀ ಬಿ. ಹುಚ್ಚೇಗೌಡ.—ಈಗ ಅಂತೂ ತಾವು ಹೇಳಿರತಕದ್ದು ಸೂಪರ್ ಫ್ಲೂಯಸ್ ಆಗಿದೆ. ಇದರಿಂದ ಜನರಿಗೇನೂ ಪ್ರಯೋಜನವಾಗುವುದಿಲ್ಲ. ಇದರಿಂದ ಮುಂದೆ ನಡೆಯಬೇಕಾದಂಥ ಪ್ರತಿಯೊಂದು ಕೆಲಸಗಳಿಗೂ ಒಂದು ಅಡ್ಡಿ ಅಡಚಣೆಯನ್ನು ತಂದು ತಾವು ಒಡ್ಡಿದ ಹಾಗೆ ಆಗುತ್ತದೆಯೇ ವಿನಾ ಇದರಿಂದ ಮತ್ತೆ ಯಾವ ಸುಖವೂ ಇಲ್ಲ. ಆದಕಾರಣ ತಾವು ಈ ತಾಲ್ಲೂಕು ಬೋರ್ಡುಗಳನ್ನೂ ಮನ್ನಾ ಮಾಡಬೇಕೆಂದು ಹೇಳುತ್ತೇವೆ. ತಾವು ಈಗ ತಾಲ್ಲೂಕು ಬೋರ್ಡುಗಳನ್ನು ಮಾಡಿದರೆ ಸಾರ್ವಜನಿಕರ ದುಡ್ಡು ಹಾಳಾಗಿ ಯಾವ ಕೆಲಸಗಳೂ ಸುಲಲಿತವಾಗಿ ಆಗುವುದಿಲ್ಲ. ಈ ತಾಲ್ಲೂಕು ಬೋರ್ಡುಗಳ ಅಧಿಕಾರವೇನು ; ಇವುಗಳ ಕರ್ತವ್ಯವೇನೆಂಬುದೇ ಗೊತ್ತಿಲ್ಲ.

Mr. SPEAKER.—I do not think it is within the scope of the provisions of the Bill to discuss the details of taluk committee. The obligatory and other duties have been defined in the Act. The Board will be entrusted to carry on those duties and if you want to add any more duties or take away some duties, you can speak about it, but not about the constitution.

Sri B. HUTCHE GOWDA.—The immediate withdrawing of $6\frac{1}{2}$ per cent.........

Mr. SPEAKER.—That you can say.

Sri B. HUTCHE GOWDA.—Why they are withdrawing it ....

Mr. SPEAKER.—That you have said. You want more money.

ಶ್ರೀ ಬಿ. ಹುಚ್ಚೇಗೌಡ.—ಅಷ್ಟೇ ಅಲ್ಲ ಸ್ವಾಮಿ, ಈ $6\frac{1}{4}\%$ ಮೊಬಲಗನ್ನು ಈ ತಾಲ್ಲೂಕು ಬೋರ್ಡುಗಳಿಗೆ ಖರ್ಚುಮಾಡುತ್ತೇವೆಂದು ಹೇಳಿದ್ದಾರೆ. ಇಷ್ಟು ಹಣವನ್ನು ಈ ಜಿಲ್ಲಾ ಬೋರ್ಡುಗಳ ಫಂಡಿನಿಂದ ತೆಗೆದುಕೊಂಡು ಆ ತಾಲ್ಲೂಕು ಬೋರ್ಡುಗಳಿಗೆ ಕೊಡಬೇಕಾಗಿದೆಯೆಂದು ಹೇಳಿದ್ದಾರೆ. ಹೀಗೆ ಜಿಲ್ಲಾ ಬೋರ್ಡಿನವರು ಅವರಿಗೆ ಹಣವನ್ನು ಕೊಟ್ಟು ಕೆಲಸ ಮಾಡಿಸಿದರೆ ಅವರು ಸ್ವತಂತ್ರವಾಗಿ ಯಾವ ಕೆಲಸಗಳನ್ನು ಮಾಡಿದಹಾಗಾಯಿತು ? ಹೀಗೆ ಅವರಿಗೆ ಯಾವ ಕೆಲಸ ಕಾರ್ಯಗಳನ್ನೂ ಕೈಗೊಳ್ಳುವುದಕ್ಕೆ ಆಸ್ಪದವೇ ಇಲ್ಲದಿರುವಾಗ ತಾವು ಈ ಬೋರ್ಡುಗಳನ್ನು ರಚಿಸುವುದರಿಂದ ಆಗತಕ್ಕ ಪ್ರಯೋಜನವಾದರೂ ಏನೆಂದು ಕೇಳುತ್ತೇನೆ ?

Mr. SPEAKER.—You can say you want more money. That is all.

ಶ್ರೀ ಬಿ. ಹುಚ್ಚೇಗೌಡ.—ಹೀಗೆ more money ಅನ್ನುವುದು ಒಂದೇ ಅಲ್ಲ. ಯಾವಾಗ ಅವರು ಇಷ್ಟೊಂದು ದುಡ್ಡನ್ನು ತೆಗೆದುಕೊಳ್ಳುತ್ತಾರೋ ಅದನ್ನು ಅವರು ಯಾವ ರೀತಿಯಾಗಿ ಖರ್ಚು ಮಾಡುತ್ತಾರೆಂಬುದನ್ನೂ ಕೂಡ ವಿವರವಾಗಿ ತಿಳಿಸಬೇಕಾದ್ದು ಸರ್ಕಾರದವರ ಕರ್ತವ್ಯ.

ಅಧ್ಯಕ್ಷರು.—ಮಂತ್ರಿಗಳು ಕೊನೆಯಲ್ಲಿ ಈ ಮಸೂದೆಗೆ ಉತ್ತರವಾಗಿ ಹೇಳಿಕೆ ಕೊಡುವಾಗ ಇದನ್ನೆಲ್ಲಾ ತಿಳಿಸುತ್ತಾರೆ.

Sri B. HUTCHE GOWDA.—Revival of folk dances and other branches—

ಇದಕ್ಕೆ ಬೇರೆ ದುಡ್ಡನ್ನು ಕೊಡುತ್ತಾರಂತೆ.

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಿ ಹಾಗೆ ಹೇಳಿದೆ ?

ಶ್ರೀ ಬಿ. ಹುಚ್ಚೇಗೌಡ.—ಈಗ ನಾನು ಶ್ರೀ ಡಿ. ಹೆಚ್. ಚಂದ್ರಶೇಖರಯ್ಯನವರ ವರದಿಯ ಮೇಲೆ ಮಾತನಾಡುತ್ತಿದ್ದೇನೆ ಆ ರಿಪೋರ್ಟಿನಲ್ಲಿ ಹೀಗೆ ಹೇಳಿದೆ :—

> Appointment and transfer of health inspectors, vaccinators and midwives.
>
> "Promotion of vaccination and control of vaccinators and midwives....."

ಹೀಗೆ ಜಿಲ್ಲಾ ಬೋರ್ಡಿನವರಿಗೆ ಇಂಥಿಂಥಾ ಅಧಿಕಾರಗಳಿರುತ್ತವೆಂದು ಹೇಳಿದ್ದಾರೆ. ಆದರೆ ಈ ತಾಲ್ಲೂಕು ಬೋರ್ಡಿಗೆ ಇಂಥ ಅಧಿಕಾರಗಳೇ ಇವೆಯೆಂಬುದಾಗಿ ಏಕೆ ಹೇಳಲಿಲ್ಲ ?

Mr. SPEAKER.—That Report also need not be discussed. We are concerned only with the provisions of the present amendment Bill.

Sri Mulka GOVINDA REDDY.—This Report will throw a good deal of light for discussion of this Bill.

Mr. SPEAKER.—On that account we cannot quote everything.

Sri B. HUTCHE GOWDA.—The Government's intention is well-advised and we have to correct it, if possible.

Mr. SPEAKER.—I think I must bring it to the notice of the Hon'ble Members once again that we have got many Bills and that we have to hurry through the business. I have given the Hon'ble Member more than 45 minutes.

ಶ್ರೀ ಬಿ. ಹುಚ್ಚೇಗೌಡ.—ಆದುದರಿಂದ ನಾನೀಗ ಸರ್ಕಾರಕ್ಕೆ ಏನು ಎಚ್ಚರಿಕೆ ಕೊಡಬೇಕಾಗಿರುತ್ತದೆಯೆಂದರೆ, ತಾವು ಈ ದಿನಸ ದೇಶಕ್ಕೆ ಬಂದಿರತಕ್ಕಂಥ ಪ್ರಜಾಪ್ರಭುತ್ವ ತತ್ವಕ್ಕೆ ಮೊಟಕು ಆಗುವಂಥ ರೀತಿಯಲ್ಲಿ ವರ್ತಿಸುತ್ತಿದ್ದೀರಿ. ಹೀಗೆ ಖಂಡಿತ ತಾವು ಇಂಥ ಅಡ್ಡದಾರಿ ಹಿಡಿಯಬೇಡಿ ಎಂದು ಹೇಳಬೇಕಾಗಿದೆ. ಹಿಂದೆ ಇದ್ದಂಥಾ ಒಂದು ಸರ್ಕಾರದವರನ್ನು ತಾವು ಹೇಗೆ ಬೇಜವಾಬ್ದಾರಿ ಸರ್ಕಾರ ಎಂದು ಕರೆಯುತ್ತಿದ್ದಿರೋ ಆ ಸರ್ಕಾರ ವರ್ತಿಸುತ್ತಿದ್ದಂಥ ರೀತಿಯಲ್ಲೇ ತಾವು ಈ ದಿವಸ ವರ್ತಿಸಬಾರದೆಂದು ಹೇಳುತ್ತೇನೆ. ಹೀಗೆ ಮಾಡುತ್ತಾ ಹೋದರೆ ತಮಗೆ ಎಳ್ಳಷ್ಟೂ ಹೆಸರು ಬರುವುದಿಲ್ಲವೆಂದು ಹೇಳುತ್ತೇನೆ. ಈಗ ತಾವು ಈ ಬಿಲ್ಲನ್ನು ಹೇಗಾದರೂ ಮಾಡಿ ಬೇಗ ಪಾಸ್ ಮಾಡಿ

ನಲೇ ಬೇಕಾಗಿದೆ. ಆದುದರಿಂದ ಈಗಿನ ಪ್ರಜಾ ಪ್ರಭುತ್ವ ಆಡಳಿತದ ತತ್ವಗಳಿಗೆ ಅನುಗುಣವಾಗಿ ಈ ಜಿಲ್ಲಾ ಬೋರ್ಡುಗಳು ಒಂದು ವ್ಯವಸ್ಥೆಗೊಳು ವಂತೆ ಕಾನೂನಿನಲ್ಲಿ ತಾವು ಅವಕಾಶವಿರುವಂತೆ ಇದನ್ನು ತಿದ್ದುಪಡಿ ಮಾಡಬೇಕಾಗಿದೆ. ಈಗ ಇದರಲ್ಲಿ ಅನೇಕ ನ್ಯೂನಾತಿರಿಕ್ತಗಳಿರುತ್ತವೆ. ಇವುಗಳನ್ನೆಲ್ಲಾ ತೆಗೆದು ಹಾಕಲು ಕೊನೇ ಪಕ್ಷ ಇದನ್ನು ಸಲೆಕ್ಟ್ ಸಮಿತಿಗಾದರೂ ಕಳುಹಿಸಿಕೊಡಬೇಕೆಂದು ಹೇಳಿ ನಾನು ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—The House will now rise for Lunch and meet at 3-45 P.M.

The House adjourned for Lunch at Fifteen Minutes past Three of the Clock and re-assembled at Forty-five Minutes past Three of the Clock.

[MR. SPEAKER in the Chair.]

ಶ್ರೀ ಎ. ಭೀಮಪ್ಪನಾಯಿಕ್ (ಮೊಳಕಾಲ್ಮುರು).—ಸ್ವಾಮಿ, ಈ ಜಿಲ್ಲಾ ಬೋರ್ಡ್ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಆದರೆ ಇದರಲ್ಲಿ ಕೆಲವು ಬದಲಾವಣೆಗಳು ಅಗತ್ಯವೆಂದು ನಾನು ಭಾವಿಸುತ್ತೇನೆ. ಶ್ರೀಮಾನ್ ಹುಚ್ಚೇಗೌಡರು ಅನೇಕ ಬದಲಾವಣೆಗಳನ್ನು ಸೂಚಿಸಿದರು. ಅದಕ್ಕಿಂತ ಮುಂಚೆ ಇದು ಬಹಳ ದಿವಸ ತಡವಾಯಿತು ಎಂದು ಹೇಳಿ ಎದುರು ಪಾರ್ಟಿಯಲ್ಲಿ ಇರವುದರಿಂದ ಸರ್ಕಾರವನ್ನು ಬಯ್ಯುವುದಕ್ಕೆ ಅವಕಾಶವಿದೆ ಎಂದು ಹೇಳಿದರೇ ಹೊರತು ಅವರ ಅಭಿಪ್ರಾಯ ಏನು ಎನ್ನುವುದನ್ನು ಹೇಳಲಿಲ್ಲ. ಅದನ್ನು ಸೂಚಿಸುವುದರಲ್ಲಿ ಮುಖ್ಯವಾದ ಒಂದು ಬದಲಾವಣೆ ಏನೆ ದರೆ ಈ ಚುನಾವಣಾ ಕ್ಷೇತ್ರವನ್ನು ಒಂದು ತಾಲ್ಲೂಕಿಗೆ ಒಂದು ಕ್ಷೇತ್ರವಾಗಿಯೂ, ಒಂದೊಂದು ಕ್ಷೇತ್ರದಿಂದ ಮೂರು ಜನರನ್ನು ಚುನಾಯಿಸಬೇಕೆಂದೂ multi-member constituency ಮಾಡಬೇಕು, ಬಹು ಸದಸ್ಯರ ಕ್ಷೇತ್ರವನ್ನಾಗಿ ಮಾಡಬೇಕು ಎಂದೂ ಹೇಳಿದ್ದಾರೆ. ಯಾವ ಉದ್ದೇಶದಿಂದ ಇಂಡಿಯಾ ಸರ್ಕಾರದವರು single-member constituency ಮಾಡಿದ್ದಾರೆಯೋ ಆ ಉದ್ದೇಶಕ್ಕೆ ಧಕ್ಕೆ ಬರುತ್ತದೆಂದು ನನ್ನ ಅಭಿಪ್ರಾಯ. ಕಾರಣವಿಷ್ಟೆ. ವಿಲೇಜ್ ಪಂಚಾಯಿತಿ ಲೆವಲ್‌ನಲ್ಲಿ single-member voters ಮಾಡಿದಾಗಲೂ ಕೂಡ ಒಟ್ಟು ಹಳ್ಳಿಯನ್ನೇ ಒಂದು electoral roll ಆಗಿ ಮಾಡಿಕೊಂಡಿದ್ದಾರೆ. Town Municipalityಗಳಲ್ಲೂ ಕೂಡ single-member constituency ಮಾಡಿಕೊಂಡಿದ್ದಾರೆ. ಹಾಗೆಯೇ legislatureಗೆ ಸಹ single member constituency ಮಾಡಿಕೊಂಡಿದ್ದಾರೆ. ಈಗ multi-member constituency ಮಾಡಿಕೊಂಡು ತಾಲ್ಲೂಕನ್ನೇ ಒಂದು constituency ಮಾಡಿದಾಗ genaral electionsನಲ್ಲಿ ಏನು ಖರ್ಚು ಬೀಳುತ್ತಿತ್ತೊ, ಏನೇನು ತೊಂದರೆಯಾಗುತ್ತಿತ್ತೋ ಆ ತೊಂದರೆಗಳೆಲ್ಲವೂ ಇದರಲ್ಲಿ ಪುನಃ ಉಂಟಾಗುತ್ತವೆ. ಈ ರೀತಿ multi-member constituency ಮಾಡುವುದರಿಂದ ಉಮೇದುವಾರರಾಗಿ ನಿಲ್ಲತಕ್ಕವರಿಗೆ ಖರ್ಚುಗಳು ಹೆಚ್ಚಾಗಿ ಇವರಿಗೆ ಪಾರಿತೋಷಕ ನಾವಾಗಿ ನಾವು ತಂದುಕೊಟ್ಟ ಹಾಗಾಗುತ್ತದೆ. ಆದರೆ ಒಂದೊಂದು ಹೋಬಳಿಗೂ ಪ್ರತ್ಯೇಕ constituency ಮಾಡಿದರೆ ಉದಾಹರಣೆಗೆ—ಒಂದು ಹೋಬಳಿಯಲ್ಲಿ ಸುಮಾರು 30 ಸಾವಿರ ಜನಸಂಖ್ಯೆ ಇದ್ದಾರೆಂದಿಟ್ಟುಕೊಳ್ಳೋಣ; ಇದರಲ್ಲಿ 15,000 ಜನ ಓಟುದಾರರು ಇರಬಹುದು. ಕೆಲವರು ಈ ರೀತಿ ಸಣ್ಣ ಸಣ್ಣದಾಗಿ ಚುನಾವಣಾ ಕ್ಷೇತ್ರವನ್ನು ವಿಂಗಡಿಸಿದರೆ ಓಟುಗಳನ್ನು ಕೊಂಡುಕೊಳ್ಳುತ್ತಾರೆಂದು ಕೆಲವರು ಹೇಳಬಹುದು. 15 ಸಾವಿರ ಓಟುಗಳನ್ನು ಕೊಂಡುಕೊಳ್ಳತಕ್ಕ ಮನುಷ್ಯ ನಮ್ಮ ದೇಶದಲ್ಲಿ ಸಿಕ್ಕುವುದು ಕಷ್ಟವೆಂದು ನನ್ನ ಅಭಿಪ್ರಾಯ. ಸಾಧಾರಣವಾಗಿ 1,000 ಅಥವಾ 2,000 ಓಟುದಾರರಿದ್ದಾಗ ಒಬ್ಬನಿಗೆ 500–600 ಓಟುಗಳು ಬರುವಹಾಗಿದ್ದು 200–300 ಓಟು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬಹುದೇ ಹೊರತು 15,000 ಓಟುದಾರರಿರುವಾಗ ಆ ರೀತಿಯಾಗಿ ಮಾಡುವುದಕ್ಕಾಗುವುದಿಲ್ಲ. ಹಿಂದೆ Legislative Councilಗೆ ಉಮೇದುವಾರರಾಗಿ ನಿಲ್ಲುತ್ತಿದ್ದಾಗ ಇಡೀ ಒಂದು ಡಿಸ್ಟ್ರಿಕ್ಟಿಗೆ ಎಷ್ಟು ಓಟುಗಳು ಇರುತ್ತಿದ್ದುವೋ ಅಷ್ಟು ಓಟುಗಳು ಈಗ ಒಂದು ಹೋಬಳಿಯಲ್ಲಿ ಕೇಂದ್ರೀಕೃತವಾಗಿರುವುದರಿಂದ, ಒಂದೊಂದು ಹೋಬಳಿಯನ್ನೂ single-member constituencyಯಾಗಿ ಮಾಡಿದರೆ ಆ ಹೋಬಳಿಯ ಕೇಂದ್ರದಿಂದ ಸಾಧಾರಣವಾಗಿ 5–6 ಮೈಲಿ ತಪ್ಪಿದರೆ 10 ಮೈಲಿ radiusನಲ್ಲಿ ಎಲ್ಲಾ ಹಳ್ಳಿಗಳೂ ಸಿಕ್ಕುತ್ತವೆ. ಆಗ ಸಾಧಾರಣವಾಗಿ ಆ ಹೋಬಳಿಯಲ್ಲಿ ಸಂಚಾರಮಾಡಲು ಒಂದು ಗಾಡಿಯನ್ನು ತೆಗೆದುಕೊಂಡೋ, ಬೈಸಿಕಲ್ ಮೇಲೆ ತಿರುಗಿಯೋ ಓಟುದಾರರೊಂದಿಗೆ ಮಾತನಾಡಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಕೆಲವರು ಹೇಳಬಹುದು, ಯಾವ ರೀತಿ ಮಾಡಿದರೂ ಉಮೇದುವಾರನಿಗೆ ಖರ್ಚೆಲ್ಲಾ ಒಂದೇ ಆಗುತ್ತದೆಂದು. ಹೇಗೆಂದರೆ ಒಂದು ತಾಲ್ಲೂಕಿಗೆ ಮೂರು ಜನ ಉಮೇದುವಾರರೆಂದು ತಾಲ್ಲೂಕನ್ನೆಲ್ಲಾ ಸಂಚರಿಸಲು ಆಗುವ ಖರ್ಚನ್ನು ಎಲ್ಲರೂ ಹಂಚಿಕೊಂಡರೆ ಆಗ ಪ್ರತಿಯೊಬ್ಬರಿಗೂ ಹೆಚ್ಚಾಗಿ ಖರ್ಚಾಗುವುದಿಲ್ಲವೆಂದು ಹೇಳಬಹುದು. ಒಂದು ತಾಲ್ಲೂಕಲ್ಲ ಸಂಚಾರ ಮಾಡಬೇಕಾದರೆ ಎಷ್ಟು ಖರ್ಚಾಗುತ್ತದೆಯೋ ನಾವು ಯೋಚನೆ ಮಾಡಬೇಕು. ಅದೇ ಒಂದು ಹೋಬಳಿಯಲ್ಲಿ ಒಬ್ಬ ಮನುಷ್ಯ ಬಹಳ ಕಡಿಮೆ ಖರ್ಚಿನಲ್ಲಿ ಎಲ್ಲ ಹಳ್ಳಿಗಳನ್ನೂ ಸುತ್ತುವುದಕ್ಕೆ ಸಾಧ್ಯವಿದೆ. ಅಲ್ಲದೆ ಇನ್ನೊಂದು ತೊಂದರೆ ಏನೆಂದರೆ, ಈ ರೀತಿ ತಾಲ್ಲೂಕು Constituency ಮಾಡಿದರೆ ಅಲ್ಲಿರುವ ಲಾಯರುಗಳು ಅಥವಾ ಇನ್ನು ಯಾರಾದರೂ ಪ್ರಮುಖ ವ್ಯಕ್ತಿಗಳು, ತಾಲ್ಲೂಕು head-quartersನಲ್ಲಿರುವವರು ಚುನಾವಣೆಯಲ್ಲಿ ಬರುವುದಕ್ಕೆ ಅವಕಾಶವಾಗುತ್ತದೆಯೇ ಹೊರತು ಸಾಧಾರಣವಾದ ಹಳ್ಳಿಗನು ಬರುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಆಯಾ ಭಾಗದ ಪ್ರತಿನಿಧಿಗಳು ಈ ಚುನಾವಣೆಗಳಲ್ಲಿ ಬರುವುದು ಅಗತ್ಯ ಮತ್ತು ಆ ರೀತಿಯಾಗಿ ಆಯಾ ಭಾಗದ ಜನರು ಬರುವುದರಿಂದ ಅವರಿಗೆ ಬೇಕಾದ ಭಾವಿ, ರಸ್ತೆ, ಆಸ್ಪತ್ರೆ, ಅಧಿಕಾರ್ಣಾರ್ಟಕರಿಗೆ ಮತ್ತು ಬಡವರಿಗೆ ವಾಸಮಾಡಲು ಮನೆಗಳ ಏರ್ಪಾಡು ಮಾಡುವುದು ಇವೆಲ್ಲಾ ಕೆಲಸ ಕಾರ್ಯಗಳು ಜಿಲ್ಲಾ ಬೋರ್ಡಿನಲ್ಲಿರುತ್ತವೆ. ಅಲ್ಲಿ legislation ಮಾಡುವುದಕ್ಕೆ ಯಾರೂ ಹೋಗಬೇಕಾಗಿಲ್ಲ. ಶ್ರೀ ಕೆ. ಪಟ್ಟಾಭಿರಾಮನ್, ಶ್ರೀ ಎ. ಭೀಮಪ್ಪ ನಾಯಕ್, ನಮ್ಮ ರೆವಿನ್ಯೂ ಮಂತ್ರಿಗಳು ಮೊದಲಾದಂಥ ಲಾಯರುಗಳು ಅಲ್ಲಿ ಬೇಕಾಗಿಲ್ಲ. ಸಾಧಾರಣವಾಗಿ ಜನತೆಯ ಪ್ರತಿನಿಧಿ ಅಲ್ಲಿರಬೇಕು. ಜಿಲ್ಲಾ ಬೋರ್ಡುಗಳಲ್ಲಿ ನಿಜವಾದ ಹಳ್ಳಿಗರ ಪ್ರತಿನಿಧಿ

(ಶ್ರೀ ಎ. ಭೀಮಪ್ಪನಾಯಕ್.)

ಇರಬೇಕು. ಎಂದರೆ ಆಯಾ ಹೋಬಳಿ ಪ್ರಾತಿನಿಧ್ಯವಿರಬೇಕು. ಆಯಾ ಜನಗಳ ಪ್ರತಿನಿಧಿ ಅಲ್ಲಿಯ ಜನಗಳಲ್ಲಿ ಪ್ರೀತಿ ವಿಶ್ವಾಸ ಗಳಿಸಿದ ಮನುಷ್ಯ ಬಂದರೆ ಅದರಿಂದ ಆ ಕ್ಷೇತ್ರದವರಿಗೆ ಬಹಳ ಅನುಕೂಲವಾಗುತ್ತದೆ. ಆದ್ದರಿಂದ ತಾಲ್ಲೂಕನ್ನೇ ಒಂದು ಕ್ಷೇತ್ರವಾಗಿ ಮಾಡಿ ಮೂರು ನಾಲ್ಕು ಜನ ನಿಂತುಕೊಂಡು ಆಗುವ ಖರ್ಚನ್ನೆಲ್ಲಾ ಎಲ್ಲರೂ ಹಂಚಿಕೊಂಡು ಯಾರೋ ಸದಸ್ಯರಾಗಿ ಬರುವುದಕ್ಕಿಂತ ಒಂದೊಂದು ಹೋಬಳಿಯನ್ನೂ ಒಂದೊಂದು ಚುನಾವಣಾ ಕ್ಷೇತ್ರವನ್ನಾಗಿ ಮಾಡಿ single-member constituency ಮಾಡುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ.

Multi-member constituency ಇಟ್ಟುಕೊಂಡರೆ ಇದರಲ್ಲಿ distributive or cumulative system ಅನುಸರಿಸಬೇಕು. ಈ ರೀತಿಯ distributive ಅಥವಾ cumulative ಪದ್ಧತಿಯಿಂದ ತೊಂದರೆಗಳನ್ನು ಮನಗಂಡು ಇಡೀ ಹಿಂದೂಸ್ಥಾನದಲ್ಲಿ ಚುನಾವಣೆಗಳಲ್ಲಿ single-member constituency ಇರಬೇಕೆಂದು ಮಾಡಿದರು. ಹಿಂದೆ ಅನೇಕರು cumulative system ಬೇಕು ಎಂದು ಹೇಳುತ್ತಿದ್ದರು. ಏಕೆಂದರೆ, minority communities, un-represented communities ಇವರಿಗೆ cumulative ಪದ್ಧತಿಯಿಂದ ಎರಡು ಅಥವಾ ಮೂರು ಓಟುಗಳನ್ನು ತೆಗೆದುಕೊಂಡು ಚುನಾವಣೆಗಳಲ್ಲಿ ಜಯಶೀಲರಾಗುವುದಕ್ಕೆ ಅವಕಾಶವಾಗುತ್ತಿತ್ತು. Majority community ಯವರಿಗೆ ಇದು ಬೇಡವಾಗಿತ್ತು ಎನ್ನುವುದು ಎಲ್ಲರಿಗೂ ಗೊತ್ತಾಗುತ್ತದೆ. ನಮ್ಮ ದೇಶದಲ್ಲಿ ಇನ್ನೂ ಕಮ್ಯೂನಿಟಿ ಭಾವನೆಗಳು, ಜಾತಿವಾರು, ಕೋಮುವಾರು ಭಾವನೆಗಳು ಸಂಪೂರ್ಣವಾಗಿ ಹೋಗಿವೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಹೋಬಳಿವಾರು ಚುನಾವಣಾ ಕ್ಷೇತ್ರಗಳಿದ್ದರೆ ಒಬ್ಬನೇ ಒಬ್ಬ ಚುನಾವಣೆಗೆ ನಿಲ್ಲುತ್ತಾನೆ.

ನಾನು ಈಗ ಹೇಳುವುದೇನೆಂದರೆ distributive system ನಲ್ಲಿ ಮೂರು ಓಟುಗಳನ್ನು ಮೂರು ಜನರಿಗೆ ಕೊಟ್ಟೇ ಕೊಡಬೇಕು. ಕೊಡದೆಹೋದರೆ invalid ಎಂದು ಮಾಡುವುದಿಲ್ಲ. ಒಂದು ತಾಲ್ಲೂಕಿಗೆ ಮೂರು ಜನಕ್ಕೆ ಓಟು ಕೊಡಬೇಕೆಂದು ಒಬ್ಬ ಮತದಾರನಿಗೆ ಮೂರು ಓಟು ಕೊಡುವ ಹಕ್ಕು ಇದೆಯೆಂದು ಮೂರು ಚೀಟಿಗಳನ್ನು ಕೊಡುತ್ತೀರಿ. ಯಾವುದಾದರೂ ಒಂದು ಪೆಟ್ಟಿಗೆಯಲ್ಲಿ ಒಂದು ಚೀಟಿ ಹಾಕಿ ಉಳಿದ ಚೀಟಿಗಳನ್ನು ಅತನು ವಾಪಸು ತಂದರೆ ಏನು ಮಾಡುತ್ತೀರಿ ? ಹೀಗೆ single vote ಕೊಡುವಂತೆ ಉಮೇದುವಾರರು ಏರ್ಪಡಿಸಿಕೊಳ್ಳುತ್ತಾರೆ. ಹಳ್ಳಿಯವರು ಬಹಳ ಜನ ಓಟ ಮಾಡತಕ್ಕವರಿರುವುದರಿಂದ ಬಣ್ಣದ ಪೆಟ್ಟಿಗೆಗಳನ್ನು ಇಟ್ಟಿರುತ್ತಾರೆ, ಅವರಿಗೆ ಎಷ್ಟು ಓಟು ಕೊಡಲು ಹಕ್ಕಿರುತ್ತದೆಯೋ ಅಷ್ಟು ಚೀಟಿಗಳನ್ನು ಕೊಟ್ಟು ತಮಗೆ ಬೇಕಾದ ಪೆಟ್ಟಿಗೆಗಳಲ್ಲಿ ಒಂದೊಂದಾಗಿ ಹಾಕುವಂತೆ ಹೇಳುತ್ತೀರಿ. ಅವರು ಒಂದೊಂದನ್ನು ತಮಗೆ ಬೇಕಾದ ಪೆಟ್ಟಿಗೆಗಳಲ್ಲಿ ಹಾಕಬಹುದು ಅಥವಾ ಒಂದು ಚೀಟಿಯನ್ನು ಒಂದು ಪೆಟ್ಟಿಗೆಯಲ್ಲಿ ಮಾತ್ರ ಹಾಕಿ ಉಳಿದುದನ್ನು ಜೇಬಿನಲ್ಲಿಟ್ಟುಕೊಂಡು ವಾಪಸು ಬರಬಹುದು. ಈ ರೀತಿ ಮಾಡಿದರೆ single vote ಕೊಟ್ಟಂತಾಗಿ ಉಳಿದವು invalid ಆಗುತ್ತದೆ. ಆದ್ದರಿಂದ ಒಬ್ಬ ಮತದಾರನು ಓಟುಗಳನ್ನು valid ಅಥವಾ invalid ಮಾಡಬಹುದು. ಉಮೇದುವಾರರು ಮತದಾರರ ಮೇಲೆ ತಮ್ಮ ಪ್ರಭಾವ ಬೀರಿ ಮೂರು ಓಟುಗಳಪೈಕಿ ಒಂದನ್ನು ಮಾತ್ರ ತಾವು ಪಡೆದು ಉಳಿದೆರಡನ್ನು invalid ಮಾಡಿ ತಮಗೆ ಹೆಚ್ಚು ಓಟು ಬರುವಂತೆ ಮಾಡುವುದಕ್ಕೆ ಅವಕಾಶವಿದೆ.

4 P.M.

ಇದು ಒಂದು ತೊಂದರೆಯೆಂದು ನನ್ನ ಅಭಿಪ್ರಾಯ. ಎಲ್ಲಕ್ಕಿಂತ ಹೆಚ್ಚಾಗಿ ಸಾರ್ವತ್ರಿಕ ಚುನಾವಣೆಗಳಲ್ಲಿ ಆದ ಅಪಘಾತಗಳು ಈಗ ಆಗುವುದಕ್ಕೆ ಅವಕಾಶಕೊಡುವುದರಿಂದ ಜನರಿಗೆ ಬಹಳ ತೊಂದರೆಯಾಗುತ್ತದೆ. ಮತ್ತು ಯಾವ ಹಳ್ಳಿಗಳಿಗೆ ಪ್ರಾತಿನಿಧ್ಯಬೇಕೆಂದು ಹೇಳುತ್ತಿದ್ದೇವೋ ಆ ಹಳ್ಳಿಗಳ ಜನ, rural folk ಆ ಜಿಲ್ಲಾ ಬೋರ್ಡಿನಲ್ಲಿದ್ದು ಹಳ್ಳಿಗಾಡಿನ ಜನರ ಸೌಕರ್ಯವನ್ನು ಹೆಚ್ಚು ಮಾಡುವುದಕ್ಕೆ ಅವಕಾಶಕೊಡಬೇಕು. ಆದ್ದರಿಂದ ಹಾಗೆ ಹಂಚಿಕೊಳ್ಳುತ್ತಾರೆ, ಹೀಗೆ ಹಂಚಿಕೊಳ್ಳುತ್ತಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಯಾವ ಪಾರ್ಟಿಗೂ ಸೇರದವರಿದ್ದರೆ ಹೇಗೆ ಹಂಚಿಕೊಳ್ಳುವುದಕ್ಕೆ ಸಾಧ್ಯ. ಏನೋ ಪಾರ್ಟಿ ಸಿಸ್ಟಂ ಇದ್ದರೆ ಹಂಚಿಕೆ ಬಂದರೂ ಬರಬಹುದು. ಹಾಗಿಲ್ಲದೆ ಒಬ್ಬೊಬ್ಬನೇ ನಿಂತಿದ್ದಾಗ ಆತ ಇಡೀ ತಾಲ್ಲೂಕನ್ನು ತಿರುಗಬೇಕೆಂದರೆ ಎಷ್ಟು ಕಷ್ಟ ಬರುತ್ತದೆಂದು ಯೋಚನೆ ಮಾಡಬಹುದು.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಆ ಕಮ್ಯೂನಿಟಿಯ ಮನುಷ್ಯ ಒಬ್ಬನೂ ಇಲ್ಲದಿದ್ದರೆ ಏನು ಮಾಡುತ್ತೀರಿ ?

ಶ್ರೀ ಎ. ಭೀಮಪ್ಪನಾಯಕ್.—ಆ ಜನರ ವಿಶ್ವಾಸವುಳ್ಳವನಾಗಿದ್ದರೆ ಪರವಾಗಿಲ್ಲ. ಆ ಕಮ್ಯೂನಿಟಿಯವನೂ ಆಗಿಲ್ಲದೆ, ವಿಶ್ವಾಸವುಳ್ಳವನೂ ಆಗಿಲ್ಲದಿದ್ದರೆ, ಅಂಥವನಿಗೆ ವೋಟು ಸಿಕ್ಕುವುದೇ ಇಲ್ಲ. ಅಲ್ಲದೆ ಕಮ್ಯೂನಿಟಿಯ ಪ್ರಶ್ನೆಯನ್ನು ಸೇರಿಸಿಕೊಳ್ಳುವುದರಿಂದ ಅನೇಕ ತೊಂದರೆಗಳಿವೆಯೆಂದು ನಾನು ಹೇಳುತ್ತೇನೆ. ಏಕೆ ತಾಲ್ಲೂಕು-ತಾಲ್ಲೂಕು ಎಂದು ಹೇಳುತ್ತಿದ್ದೀರಿ! ಯಾವುದರಿಂದ ಮನೆ ಮನೆಗಳೇ ಹಾಳಾಗಿವೆಯೋ ಅದೇ ಬೇಕೆಂದು ಮತ್ತೆ ಏಕೆ ಕೇಳುತ್ತಿದ್ದೀರಿ ? ಎಲ್ಲಾ ಕ್ಷೇತ್ರಗಳಲ್ಲೂ ತಾಲ್ಲೂಕು ಲೆವೆಲ್‌ನಲ್ಲೂ ಜನಾನುರಾಗಿಗಳಾದ ಮನುಷ್ಯರೇ ಬರಬೇಕೆಂದು ಹೇಳುವುದಾದರೆ ಎಲ್ಲವೂ ತಾಲ್ಲೂಕ್ ಲೆವೆಲ್‌ನಲ್ಲೇ ಆದ ಹಾಗಾಯಿತು. ಅಂದಮಾತ್ರಕ್ಕೇ ಇಲ್ಲಿದ್ದವರು ಅಲ್ಲಿಗೆ ಹೋಗಕೂಡದು, ಅಲ್ಲಿದ್ದವರು ಇಲ್ಲಿಗೆ ಬರಕೂಡದು ಎಂಬುದಲ್ಲ. ಡಿಸ್ಟ್ರಿಕ್ಟ್ ಬೋರ್ಡು ಎನ್ನುವುದು ಮೂಲತಃ ಹಳ್ಳಿಗರ ಉಪಯೋಗಕ್ಕಾಗಿ ಕೆಲಸ ನಡೆಸಬೇಕೆಂದಿದೆ ಆದ್ದರಿಂದ 10-15 ಹಳ್ಳಿಗಳು ಸೇರಿ ಒಂದು ಕೇಂದ್ರವಾಗಿದ್ದರೆ, ಆ ಹಳ್ಳಿಗಳೆಲ್ಲಾ ಆ ಕೇಂದ್ರದಿಂದ 5-6 ಮೈಲಿಗಳಲ್ಲಿರುತ್ತವೆ. ಯಾವನೇ ಉಮೇದುವಾರನು ಒಂದು ಸೈಕಲ್ ಮಾಡಿಕೊಂಡು ಅಷ್ಟು ಹಳ್ಳಿಗಳನ್ನೂ ಸುತ್ತಬಹುದು ಹಾಗಿಲ್ಲದೆ ತಾಲ್ಲೂಕು ಪ್ರಾತಿನಿಧ್ಯವಂದಿಟ್ಟುಕೊಂಡರೆ, ಒಂದು ಕಾರನ್ನೇ ಇಟ್ಟುಕೊಳ್ಳಬೇಕು, ದೊಡ್ಡದೊಡ್ಡ ಹಸ್ತಪತ್ರಿಕೆಗಳನ್ನು ಹಂಚಿಯೇ ತೀರಬೇಕು. ಆದ್ದರಿಂದ ಅದು ಅಷ್ಟು ಸೂಕ್ತವಲ್ಲವೆಂದು ಹೇಳುತ್ತೇನೆ.

Sri Kadidal MANJAPPA.—Is it possible to make every hobli in every taluk a constituency ?

ಶ್ರೀ ಎ. ಭೀಮಪ್ಪನಾಯಕ್.—ಒಂದೊಂದು ಹೋಬಳಿಯನ್ನೂ ಮಾಡುವುದಕ್ಕಾಗದಿದ್ದರೆ ಒಂದೂವರೆ ಹೋಬಳಿಗೊಂದು ಕ್ಷೇತ್ರ ರಚಿಸಿ constituency ಗಳನ್ನು delimit ಮಾಡುವುದೇನೂ ಕಷ್ಟವಲ್ಲ. ಒಂದು ಲಕ್ಷ ಪ್ರಜಾಸಂಖ್ಯೆಯಿರುವ ಒಂದು ತಾಲ್ಲೂಕಿನಲ್ಲಿ ಮೂರು ಹೋಬಳಿಗಳಿದ್ದರೆ ಮೂರು ಕ್ಷೇತ್ರಗಳನ್ನು ಮಾಡಿ. ಇನ್ನು ಕೆಲವು ಕಡೆ ಕೆಲವು ಹಳ್ಳಿಗಳು

contiguous areaದಲ್ಲಿದ್ದು ಒಂದು ಹೋಬಳಿಯಲ್ಲಿ ಜಾಸ್ತಿ ಜನಸಂಖ್ಯೆಯಿದ್ದು ಇನ್ನೊಂದು ಹೋಬಳಿಯಲ್ಲಿ ಕಡಮೆಯಿದ್ದರೆ, ಎರಡನ್ನೂ ಸೇರಿಸಿ ಒಂದುಮಾಡಬಹುದು. ಇದಕ್ಕೆಲ್ಲಾ ಎಷ್ಟುಕಾಲ ಬೇಕಾಗುತ್ತದೆ! ಒಟ್ಟು ದೇಶದ ಭೂಪಟವನ್ನಿಟ್ಟುಕೊಂಡು ಸ್ವಲ್ಪ ಯೋಚನೆಮಾಡಿ ಮಾಡುವುದಾದರೆ ಒಂದು ವಾರದಲ್ಲಿ ಮಾಡಿಬಿಡಬಹುದು. ಸಾಧಾರಣವಾಗಿ ಡಿಲಿಮಿಟೇಷನ್ ಮಾಡುವಾಗ ಪ್ರಜಾಸಂಖ್ಯೆಯನ್ನು ಸೆನ್ಸಸ್ ಲೆಕ್ಕವನ್ನು ನೋಡಿ ಮತ್ತು contiguous areas ನೋಡಿಕೊಂಡು ಮಾಡುತ್ತಾರೆ. ಹೇಗಿದ್ದರೂ 25,000 ಪ್ರಜಾಸಂಖ್ಯೆಗೆ ಒಬ್ಬರು, ಮತ್ತು ತಾಲ್ಲೂಕಿಗೆ ಮೂರು ಜನರಿಗೆ ಮೇಲ್ಪಟ್ಟಿರಕೂಡದೆಂದು limit ಮಾಡಿಯೇ ಇದ್ದೀರಿ. ಅದರಂತೆ ಯಾವುದಾದರೂ ಹೋಬಳಿಯಲ್ಲಿ 24,000 ಅಥವಾ 23,000 ಪ್ರಜಾಸಂಖ್ಯೆಯಿದ್ದರೆ ಬೇರೊಂದು ಹೋಬಳಿಯನ್ನು ಸೇರಿಸಿಕೊಳ್ಳಬಹುದು. ಆದರಿಂದ ರೆವಿನ್ಯೂ ಮಂತ್ರಿಗಳು ಹೇಳಿದಂತೆ ಅಷ್ಟಾಗಿ ಕಷ್ಟ ಬರುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ತಾಲ್ಲೂಕನ್ನು delimit ಮಾಡಿ, ಹೋಬಳಿಯನ್ನೇ ಒಂದು ಕಾನ್ಸ್ಟಿಟ್ಯೂಯನ್ಸಿಯಾಗಿ ಏರ್ಪಡಿಸಿ single-memberನ್ನು ಅಲ್ಲಿಂದ ಬರುವಹಾಗೆ ಮಾಡಿದರೆ advantages ಜಾಸ್ತಿ, disadvantages ಕಡಮೆಯಾಗುತ್ತದೆಂದು ಹೇಳುತ್ತೇನೆ. ಸಿಂಗಲ್ ಮೆಂಬರು ಕಾನ್ಸ್ಟಿಟ್ಯೂಯೆನ್ಸಿ ಮಾಡಿದರೆ ಯಾವನಾದರೂ ಕೋಟ್ಯಾಧೀಶನಿದ್ದರೆ ವೋಟನ್ನು ಕೊಂಡುಕೊಳ್ಳಬಹುದೆಂದು ಹೇಳಿ ಮುನಿಸಿಪಲ್ ಚುನಾವಣೆಯೊಂದನ್ನು ಉದಹರಿಸಿದರು. ಮುನಿಸಿಪಾಲಿಟಿಯಲ್ಲಾದರೆ, 5000 ಪ್ರಜಾಸಂಖ್ಯೆಯಿದ್ದರೆ ಅವರಲ್ಲಿ 2,500 ವೋಟರುಗಳಿದ್ದಾರೆಂದಿಟ್ಟುಕೊಳ್ಳಬಹುದು. ಅವರಿಂದ 15ಜನ ಬರಬೇಕಾಗಿರುತ್ತದೆ. ಆದ್ದರಿಂದ ಒಬ್ಬೊಬ್ಬನಿಗೆ ಬರಬಹುದಾದ ವೋಟುಗಳು 40 ಇದ್ದರೆ, ಜೊತೆಗೆ 30-40 ಕೊಂಡುಕೊಂಡರೆ ಚುನಾಯಿತನಾಗಿರಬಹುದೆಂದು ಭಾವಿಸಬಹುದು. ಆ ಮುನಿಸಿಪಲ್ ಚುನಾವಣೆಯನ್ನೂ ಈ ಚುನಾವಣೆಯನ್ನೂ ಹೋಲಿಸುವುದಕ್ಕೆ ಆಗುತ್ತದೆಯೇ? 25,000 ಜನಸಂಖ್ಯೆಯಿರುವಾಗ ಓಟನ್ನು ಕೊಂಡುಕೊಳ್ಳುವುದಕ್ಕೆ ಹೋದರೆ ಅವನು ಹಾಳಾಗಿ ಹೋಗುತ್ತಾನೆ. ಅಲ್ಲದೆ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಗೆ ಖರ್ಚುಮಾಡಿದರೆ ಅವನಿಗೇನು ಬರುತ್ತದೆ! ಅಲ್ಲಿಗೆ ಬರುವವರು ಕೇವಲ ಸೇವೆ ಸಲ್ಲಿಸುವುದಕ್ಕೆ ಬರುತ್ತಾರೆ.

ಶ್ರೀ ಎಸ್ ಸಿದ್ದಪ್ಪ (ಮಾಗಡಿ).—ಹಾಗಾದರೆ ಅದನ್ನೇ ಈ ಅಸೆಂಬ್ಲಿಗೂ ತನ್ನಿ!

ಶ್ರೀ ಎ. ಭೀಮಪ್ಪನಾಯಕ್.—ಇಲ್ಲಿಗೂ 40 ಜನ ಮೆಂಬರುಗಳು ಬರಬಹುದೆಂದಿದ್ದರೆ ಇಲ್ಲಿಗೂ ಅದನ್ನೇ ತರುತ್ತಿದ್ದೆವು. ಈಗ 400 ಮೆಂಬರುಗಳೆಂದಿಲ್ಲ; 100 ಜನರು ಮಾತ್ರ ಇರಬೇಕೆಂದಿದೆ. ಆದ್ದರಿಂದ ಇದಕ್ಕನುಗುಣವಾಗಿ ಒಂದು ಲಕ್ಷ ಪ್ರಜಾಸಂಖ್ಯೆಗೆ ಒಂದು ಸಿಂಗಲ್ ಮೆಂಬರ್ constituency ಎಂದು ಹೇಳಿದೆವು. ಹಾಗೆಯೇ ಡಿಸ್ಟ್ರಿಕ್ಟ್ ಬೋರ್ಡಿಗೆ ಐದು ಜನ ಮೆಂಬರುಗಳೆಂದು ಹೇಳಿದ್ದರೆ ಎರಡೆರಡು ತಾಲ್ಲೂಕಿಗೊಬ್ಬರೆಂದು ಮಾಡುತ್ತಿದ್ದೆವು. ಈಗ ಹಾಗಲ್ಲ. ಈಗ ಒಂದು ಡಿಸ್ಟ್ರಿಕ್ಟ್ ಬೋರ್ಡಿಗೆ 25-30 ಜನರು ಬೇಕೆಂದು ಹೇಳಿದಮೇಲೆ 30 ಜನರೂ 30 ಸ್ಥಾನಗಳಿಂದ ಬರಲಿ ಎಂದು ನಾನು ಹೇಳುತ್ತೇನೆ. ಇದರಿಂದ ಪ್ರಜಾಪ್ರಾತಿನಿಧ್ಯ ಕಡಮೆಯಾಗುತ್ತದೆಂದರೆ ನಾನು ಒಪ್ಪುವುದಿಲ್ಲ. ಏಕೆಂದರೆ ನೀವು ಆ ರೀತಿ ಭಾವಿಸುವುದಾದರೆ 200 ಜನ ವೋಟರುಗಳಿಂದ ಮೆಂಬರಾಗಿ ಬಂದ ಮುನಿಸಿಪಲ್ ಸದಸ್ಯನಿಗೂ ಕೂಡ ಪ್ರಜಾಪ್ರಾತಿನಿಧ್ಯವಿಲ್ಲವೆಂದೇ ಹೇಳಬೇಕು. ಆ ಮೇಲೆ ಹಳ್ಳಿಗಳಲ್ಲಿ ಅಂಥ ಪ್ರತಿನಿಧಿ ಸಿಕ್ಕುತ್ತಾರೆಯೇ ಎಂದರೆ, ಇಲ್ಲಿಗೆ ಶ್ರೀ ರಾಕ್ ಶಿವನಂಜೇಗೌಡರು ಹಳ್ಳಿಯಿಂದಲೇ ಬಂದಿಲ್ಲವೇ? ಹಳ್ಳಿಗಳಲ್ಲೂ ಬುದ್ಧಿವಂತರಿದ್ದಾರೆ. ಪಟ್ಟಣಗಳಲ್ಲೂ ಬುದ್ಧಿವಂತರಿದ್ದಾರೆ. ಹಳ್ಳಿಯಲ್ಲೂ ದಡ್ಡರಿದ್ದಾರೆ, ಡಿಲ್ಲಿಯಲ್ಲೂ ದಡ್ಡರಿದ್ದಾರೆ. ಹಳ್ಳಿಯಲ್ಲೂ ಅನೇಕರು ಬುದ್ಧಿವಂತರಿದ್ದಾರೆ, ಅವರಲ್ಲಿ ಜನರಿಗೂ ನಂಬಿಕೆಯಿರುತ್ತದೆ. ಆದರೂ ಅವರು ಏಕೆ ನಿಲ್ಲುವುದಿಲ್ಲ? ಅವರು ತಾಲ್ಲೂಕಿಗೆಲ್ಲಾ ನಿಂತುಕೊಂಡು ತನಗೆ ಗೊತ್ತಿಲ್ಲದವರನ್ನೆಲ್ಲಾ ಕೇಳಿಕೊಳ್ಳುವುದಕ್ಕೆ ಹೋಗಿ ಅವರಿಂದ ವೋಟು ತೆಗೆದುಕೊಂಡುಬರುವುದಕ್ಕೆ ಇಷ್ಟಪಡುವುದಿಲ್ಲ. ಒಬ್ಬ ಮನುಷ್ಯ 15 ಹಳ್ಳಿಗಳಿಗೆ ಸೇವೆ ಮಾಡಿರಬಹುದು. ಅಲ್ಲಿನ ಜನರ ಪ್ರೀತಿ ವಿಶ್ವಾಸವನ್ನು ಗಳಿಸಿರಬಹುದು, ಅಂಥವನನ್ನು ನೀವು ಆ ರೀತಿ ಕ್ಷೇತ್ರವಿಭಜನೆಮಾಡಿ ಏಕೆ ಅವರ ಪ್ರತಿನಿಧಿಯಾಗಿ ಬರಲು ಅವನು ಇಷ್ಟಪಟ್ಟರೂ ಅವಕಾಶ ಕೊಡುವುದಿಲ್ಲ! ಅಲ್ಲದೆ ಮುಖ್ಯವಾಗಿ ಜಿಲ್ಲಾ ಬೋರ್ಡುಗಳಲ್ಲಿ ನಿಮಗೆ ಬೇಕಾಗಿರುವವರು ಅಲ್ಲಿನ ಜನತೆಯನ್ನು ಪ್ರತಿಬಿಂಬಿಸುವವರು. ರಾಜಕೀಯ ತತ್ವಗಳನ್ನು ರೂಪಿಸುವುದಕ್ಕೇನೂ ಯಾರೂ ಹೋಗಬೇಕಾಗಿಲ್ಲ. ಅವರವರ ಊರಿಗೆ ಆಗಬೇಕಾದ ಕೆರೆ, ಕುಂಟೆ ಮುಂತಾದ ಆವಶ್ಯಕತೆಗಳನ್ನು ಕೇಳುವುದಕ್ಕೆ ಜಿಲ್ಲಾಬೋರ್ಡ್ ಇರುವುದು. ಇಂಥ ಸಂದರ್ಭದಲ್ಲಿ ಅವರ ಪ್ರಾತಿನಿಧ್ಯವಿರುವುದೇ ನ್ಯಾಯ. ಚುನಾವಣಾ ಖರ್ಚಿನ ದೃಷ್ಟಿಯಿಂದಲೂ, ಆ ರೀತಿ ಮಾಡುವುದಾದರೆ, ದೊಡ್ಡದಾಗಿ ಮೋಟಾರು ಕಾರು ಮುಂತಾದುವುಗಳನ್ನಿಟ್ಟುಕೊಂಡು ಖರ್ಚು ಮಾಡುವ ಆವಶ್ಯಕತೆಯೂ ಇರುವುದಿಲ್ಲ.

ಅಲ್ಲದೆ ವೋಟು ಮಾಡುವುದರಲ್ಲಿಯೂ, ಮಲ್ಟಿ ಮೆಂಬರು ಕಾನ್ಸ್ಟಿಟ್ಯುಯನ್ಸಿಯಾದರೆ, ಮೂರು ಜನ ಕಾಂಗ್ರೆಸ್ಸಿನವರು, ಮೂರು ಜನ ಸೋಷಿಯಲಿಸ್ಟರು, ಮೂರು ಜನ Independent ಮೆಂಬರುಗಳಿದ್ದರೆ ಹನ್ನೆರಡು ಪೆಟ್ಟಿಗೆಗಳನಿಟ್ಟು ಆ ಅವಿದ್ಯಾವಂತ ಓಟರುಗಳ ಕೈಲಿ ಓಟಿನ ಚೀಟಿಕೊಟ್ಟು ಹಾಕಿ ಎಂದರೆ, ಅವರು ಹನ್ನೆರಡು ಪೆಟ್ಟಿಗೆಗಳನ್ನು ದಾಟಿಕೊಂಡು ಹೋಗಿ ಸರಿಯಾಗಿ ವೋಟು ಕೊಡುವುದು ಬಹಳಕಷ್ಟ. ಇತ್ತ ಕಡೆಯಿಂದ ಅತ್ತಕಡೆಯವರೆಗೆ ಹೋಗುವುದರೊಳಗೆ ಅವರಿಗೆ ಯಾವ ಬಣ್ಣದ ಪೆಟ್ಟಿಗೆಗೆ ಹಾಕಬೇಕೆಂಬುದೇ ಮರೆತು ಹೋಗುತ್ತದೆ. ಪಾರ್ಲಿಮೆಂಟಿಗೆ ನಡೆದ ಚುನಾವಣೆಗಳಲ್ಲಿ ಏನಾಯಿತೆಂಬುದನ್ನು ನಾವೆಲ್ಲಾ ನೋಡಿದ್ದೇವೆ. ಅಲ್ಲಾದರೋ ಎರಡು ಮೂರು ಪೆಟ್ಟಿಗೆಗಳಿಗಿಂತ ಜಾಸ್ತಿಯಿರಲಿಲ್ಲ, ನಾನು ನಿಂತಕಡೆ ಎರಡೇ ಇತ್ತು; ಶ್ರೀ ಇಮಾಂರವರು ನಿಂತಕಡೆಯೂ ಎರಡೇ ಇತ್ತು, ಅದೂ ಕಷ್ಟವೆಂದು ಎಲ್ಲರಿಗೂ ಗೊತ್ತಾಯಿತು. ಶ್ರೀ ಶಿವಣ್ಣನವರು ಮತ್ತು ಶ್ರೀ ದುಗ್ಗಪ್ಪನವರು ನಿಂತಕಡೆ ಹನ್ನೊಂದು ಪೆಟ್ಟಿಗೆಗಳಿದ್ದುವು! ಅಲ್ಲಿ ವೋಟುಮಾಡಲು ಹೋಗಿದ್ದ ಜನರನ್ನು ಯಾವ ಪೆಟ್ಟಿಗೆಗೆ ಹಾಕಿದಿರಿ ಎಂದು ಕೇಳಿದ್ದಕ್ಕೆ "ಯಾವುದಕ್ಕೋ ಹಾಕಿಬಿಟ್ಟೆವು, ಪೆಟ್ಟಿಗೆಗಳನ್ನು ನೋಡಿದ್ದರಲ್ಲಿ ಯಾವುದಕ್ಕೆ ಹಾಕಬೇಕೆಂಬುದೇ ಗೊತ್ತಾಗಲಿಲ್ಲ" ಎಂದರು. ಬರೀ ಕಾಂಗ್ರೆಸ್ಸಿನವರಿಗೆ ಹಾಕಬೇಕು ಎಂದು ಬೇಕಾದರೆ ಹಳದಿ ಪೆಟ್ಟಿಗೆಗೆ ಹಾಕಿಬರಬಹುದು. ಆದರೆ ಒಂದು ವೋಟು ಕಾಂಗ್ರೆಸ್ಸಿಗೆ, ಒಂದು ವೋಟು ಸೋಷಿಯಲಿಸ್ಟ್, ಇನ್ನೊಂದು ಇನ್ನೊಂದು ಪೆಟ್ಟಿಗೆಗೆ ಹಾಕಬೇಕೆಂದರೆ ಎಷ್ಟು ಕಷ್ಟವಾಗುತ್ತದೆ! ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿಯಿದ್ದರೆ ಅಷ್ಟು ಕಷ್ಟವಾಗುವುದಿಲ್ಲ. ಈ ಕಾರಣ

(ಶ್ರೀ ಎ. ಭೀಮಪ್ಪನಾಯಕ್.)

ಸಿಂಗಲ್ ಮೆಂಬರ್ ಕ್ಷೇತ್ರಗಳನ್ನು ಮಾಡಿ ಹೆಚ್ಚು ಖರ್ಚಿಲ್ಲದಂತೆ ಮಾಡುವುದು ಉತ್ತಮ. ಹರಿಜನರು ನಿಲ್ಲಬೇಕಾದ ಕಡೆ ಡಬ್ಬಲ್ ಮೆಂಬರು ಕ್ಷೇತ್ರವನ್ನು ಮಾಡಿ ಅವರಿಗೆ ಒಂದು ಹೋಬಳಿಯನ್ನು ರಿಸರ್ವ್ ಮಾಡಬೇಕೆಂದು ಹೇಳಿದರೆ ರಿಸರ್ವೇಷನ್ ಕೂಡ ಮಾಡಬಹುದು. ಯಾರೇ ಉಮೇದುವಾರರಾದರೂ ಸುಲಭವಾಗಿ ಬಂದು ಸೈಕಲ್ ಇಟ್ಟುಕೊಂಡು ತಮ್ಮ ಕ್ಷೇತ್ರವನ್ನೆಲ್ಲಾ ತಿರುಗಬಹುದು. ಇದು ಡೀಲಿಮಿಟೇಷನ್ ಆಫ್ ಕಾನ್ಸಿಟ್ಯುಯೆನ್ಸೀಸ್ ವಿಚಾರದಲ್ಲಿನನ್ನ ಅಭಿಪ್ರಾಯ, ಆಮೇಲೆ ಶೇ॥ 6¼ ಡೋಲೌಟ್ ಮಾಡಬೇಕೆಂದು ಮಂತ್ರಿಗಳು ಹೇಳಿದರು. ಒಂದು ಜಿಲ್ಲೆಯಲ್ಲಿ ವಸೂಲಾಗುವುದರಲ್ಲಿ ಶೇ॥ 6¼ ಅಲ್ಲ ಇಡೀ ಸಂಸ್ಥಾನದ ಲೆಕ್ಕಹಾಕಿ ಅದರಲ್ಲಿ ಶೇ॥ 6¼ ಒಂದು ಡಿಸ್ಟ್ರಿಕ್ಟಿಗೆ ಕೊಡಬೇಕೆಂದು ಹೇಳಿದರು. ಒಂದು ಜಿಲ್ಲೆಯಲ್ಲಿ ಆದಾಯ ಹೆಚ್ಚಾಗಿರಬಹುದು, ಇನ್ನೊಂದು ಜಿಲ್ಲೆಯಲ್ಲಿ ಕಡಮೆಯಾಗಿರಬಹುದು. ಆದ್ದರಿಂದ ಎಲ್ಲಕ್ಕೂ ಸಮನಾಗಿ ಬರಲಿ, ಆದಾಯ ಹೆಚ್ಚಾಗಿಲ್ಲದಿರುವ ಕಡೆಗೆ ಹೆಚ್ಚಾಗಿ ದೊರೆಯಲಿ ಎಂಬ ಅಭಿಪ್ರಾಯದಿಂದ ಇಡೀ ಸಂಸ್ಥಾನದ ಆದಾಯದಲ್ಲಿ ಶೇಕಡ 6¼ ರಷ್ಟನ್ನು ತೆಗೆದು ಜಿಲ್ಲೆಗಳಿಗೆ ಕೊಡುವ ಅಧಿಕಾರ ಕೊಟ್ಟಿದೆ. ಇದನ್ನು ನಾವು ಒಪ್ಪಿಕೊಳ್ಳೋಣ. ಆದರೆ ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿ ಆಗಬೇಕೆಂದು ಹೇಳುವಾಗ ಅದಕ್ಕೆ ತಕ್ಕ ಹಣದ ಅನುಕೂಲತೆಯಿದೆಯೆ ಎಂಬುದನ್ನು ನೋಡಬೇಕು. ಈಗ ಸಾಧಾರಣವಾಗಿ ಇಡೀ ಸಂಸ್ಥಾನದಲ್ಲಿ ಒಂದು ಕೋಟಿ 25 ಲಕ್ಷ ರೂಪಾಯಿ ಜಮೀನು ಕಂದಾಯ ಬರುವುದಾದರೆ ಐದು ಅಥವಾ ಆರು ಲಕ್ಷ ರೂಪಾಯಿ ಶೇಕಡ 6¼ರಂತೆ ಅದರಿಂದ ತೆಗೆದು ಮೈಸೂರು ಸಂಸ್ಥಾನದಲ್ಲಿರುವ ಸುಮಾರು 90 ತಾಲ್ಲೂಕುಗಳಿಗೆ ಹಂಚಿದರೆ ಎಷ್ಟು ಬರುತ್ತದೆಯೆಂಬುದನ್ನು ನೋಡಬೇಕು. ಅದರಿಂದ ತಾಲ್ಲೂಕು ಎಷ್ಟು ಉದ್ಧಾರವಾಗುತ್ತದೆಂಬುದನ್ನು ಗಮನಿಸಬೇಕು. ಇದಲ್ಲದೆ ತಾಲ್ಲೂಕು ಡೆವಲಪ್‌ಮೆಂಟ್ ಸಮಿತಿಗೆ ಬೇರೆ ಯಾವುದಾದರೂ ವರಮಾನವಿದೆಯೆ ಎಂಬುದು ಗೊತ್ತಾಗಲಿಲ್ಲ. ಹಾಗೆ ಬೇರೆ ವರಮಾನವಿರುವುದಾದರೆ ಆಗ ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿ ಮಾಡಿದರೆ ಸಾರ್ಥಕವಾಗುತ್ತದೆ. ಆದ್ದರಿಂದ ಸರ್ಕಾರದವರು ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿಗೆ ವರಮಾನಬರುವ ಬಾಬುಗಳ್ಯಾವುವೆಂಬುದನ್ನು ಹೇಳಿದರೆ ಒಳ್ಳೆಯದು, ಮತ್ತು ಕೆಲಸಕಾರ್ಯಗಳ ಹಂಚಿಕೆ ಮಾಡುವಾಗ ಇಂಟರ್ ತಾಲ್ಲೂಕು ರಸ್ತೆಗಳು, ಹೈಸ್ಕೂಲು, ಆಸ್ಪತ್ರೆ ಮುಂತಾದ್ದು ಡಿಸ್ಟ್ರಿಕ್ಟ್ ಬೋರ್ಡಿಗೆ ಸಂಬಂಧಪಟ್ಟಿರುವುದು, ಭಾವಿಗಳು ಮುಂತಾದ್ದು ತಾಲ್ಲೂಕು ಬೋರ್ಡಿಗೆ ಸಂಬಂಧಪಟ್ಟಿದೆ ಎಂದು ಪ್ರತ್ಯೇಕಮಾಡಿ ಅದಕ್ಕಾಗಿ ಫಂಡ್ ಏನಿದೆಯೆಂದು ಗಮನಿಸುವುದು ಆವಶ್ಯಕ, ಇನ್ನು ಮುಂದೆ ಒಂಭತ್ತಕ್ಕಿಂತ ಕಡಮೆಯಿಲ್ಲದೆ ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿಗಳಾಗುತ್ತವೆ. ಅವಕ್ಕೆ ಗುಮಾಸ್ತರು, ಓವರ್‌ಸೀಯರ ಗಳು ಅವರ ಜೊತೆಗೆ ಜಿಲ್ಲಾ ಬೋರ್ಡಿಗೆ ಸಿಬ್ಬಂದಿ ಇದಕ್ಕೆಲ್ಲಾ ಹಣ ಬೇಕೆ ಅಥವಾ ಒಬ್ಬ ತಾಲ್ಲೂಕು ಅಮಲ್ದಾರರೇ ಎಲ್ಲಾ ನೋಡಿಕೊಳ್ಳುವರೆ ? ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿ ಆಗಬೇಕೆಂದು ಹೇಳುವವರಲ್ಲಿ ನಾನೂ ಒಬ್ಬ, ಹಾಗಾಗುವಾಗ ಅದಕ್ಕೆ ಸಾಕಾದಷ್ಟು.........

Mr. SPEAKER.—May I bring it to the notice of the Hon'ble Member, that that was incidentally mentioned. It was not necessary for the passing of this Bill at all.

Sri A. BHEEMAPPA NAIK.—I am not elaborating this. I am speaking only to illustrate the point.

Mr. SPEAKER.—I do not want any digression on the point relating to the constitution of and finances that will be provided by the Government to the Taluk Committees. We need not go into that question Incidentally the Hon'ble Member has referred to the amount that may be spared for the taluk committees. It is not relevant at this stage to go into details. Whether it is necessary or whether it can be included here is all the question. Because, if I allow you to go into details, I cannot prevent others from doing so.

Sri A. BHEEMAPPA NAIK.—I do not want any special privilege. I do not want any special treatment.

Sri M. LINGANNA.—So far as this aspect is concerned, I submit that the Hon'ble Chair may direct the Minister to make a statement about that.

Mr. SPEAKER.—No, it is not necessary. The Speeches of Hon'ble Members must be strictly relevant to the matter at issue. Members need not elaborate on a point referred to by the Hon'ble Minister incidentally.

Sri A. BHEEMAPPA NAIK.—I am sorry Sir, it was deliberately mentioned with a view to show why this 6¼ per cent should be deducted. Because that amount has been statutorily allotted for that purpose.

Sri Mulka GOVINDA REDDY.—There is another aspect of it, Sir. In the Rajpramukh's Address, it was mentioned clearly that the Government are contemplating to set up Taluk Boards and the Minister while moving the Bill also mentioned about it. Though it was incidental, it was a very vital point, because he was making out a case why this 6¼ per cent should be given to District Boards.

Mr. SPEAKER.—That you can say. I do not object. You can also say: 'This amount is not necessary. This amount may be allotted for the District Board.'

ಶ್ರೀ ಎ. ಭೀಮಪ್ಪನಾಯಕ್.—ಶೇಕಡ 6¼ ನೀವು ತೆಗೆದು ಹಾಕುವುದಾದರೆ ಅದರ ಜೊತೆಗೆ ಇನ್ನೂ ಜಾಸ್ತಿ ಹಣವನ್ನು ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿಗಳಿಗೆ ಯಾವುದಾದರೂ ಮಾರ್ಗದಿಂದ ಕೊಡುವು

ದಕ್ಕೆ, ತಯಾರಾಗಿದ್ದರೆ ವಜಾಮಾಡಿ ಅಭ್ಯಂತರವಿಲ್ಲ. ಆದರೆ ಆ ರೀತಿ ವಜಾಮಾಡಿ, ಬೇರೆ ಸೋರ್ಸ್ ತೋರಿಸದೆಇದ್ದರೆ ಹಿಂದಿನ ಶೇಕಡ $6\frac{1}{4}$ ಜೊತೆಗೆ ಇನ್ನೂ ಶೇಕಡ $6\frac{1}{4}$ ಕೊಡುವುದು ಅಗತ್ಯ. ಒಟ್ಟಿನಲ್ಲಿ ಜಿಲ್ಲಾ ಬೋರ್ಡು ಚುನಾವಣೆ ಅತ್ಯಗತ್ಯವಾಗಿ ಬಹಳ ಜಾಗ್ರತೆಯಾಗಿ ಆಗಬೇಕಾದ್ದು ಅಗತ್ಯ, ಈಗಾಗಲೇನೇ ಚುನಾವಣೆಯಾಗಿ 8-10 ವರ್ಷವಾಯಿತೆಂದು ಅನೇಕರು ಹೇಳುತ್ತಿದ್ದಾರೆ. ಈ ಜಿಲ್ಲಾ ಬೋರ್ಡ್ ಆಕ್ಟು ತಿದ್ದುಪಡಿ ಮಾಡುವುದರಲ್ಲಿ ಕಾಲಕಳೆಯಬಾರದು. ಒಂದೆರಡು ವಿಷಯಗಳಲ್ಲಿ ಮಾತ್ರ ತಿದ್ದುಪಡಿಯಿದೆ, ಹೆಚ್ಚು ಬದಲಾವಣೆಯೇನೂ ಕಾಣುವುದಿಲ್ಲ. ಆದ್ದರಿಂದ ಇದನ್ನು ಇಲ್ಲಿಯೇ ಚರ್ಚೆಮಾಡಿ ತಿದ್ದುಪಡಿಮಾಡಿ ಜಾಗ್ರತೆ ಇದನ್ನು ಲಾ ಮಾಡಿ ಚುನಾವಣೆಗೆ ತಕ್ಷಣ ಏರ್ಪಾಡು ಮಾಡಬೇಕೆಂದು ಕೋರುತ್ತೇನೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಈ ಜಿಲ್ಲಾಬೋರ್ಡ್ ಮತ್ತು ಗ್ರಾಮಪಂಚಾಯಿತಿಗಳ ತಿದ್ದುಪಡಿ ಮಸೂದೆಯನ್ನು ಸ್ವಾಗತಿಸುತ್ತಾ ಎರಡು ಮೂರು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ಇದರಲ್ಲಿ ನೇರವಾಗಿ ಪ್ರತ್ಯಕ್ಷ ಚುನಾವಣೆಯಿಂದ ಆರಿಸಲು ಅವಕಾಶಮಾಡಿರುವುದು ಬಹಳ ಪ್ರಶಂಸನೀಯವಾದುದು. ಹಿಂದಿನ ಆಕ್ಟಿನಂತೆ ಅಪ್ರತ್ಯಕ್ಷವಾಗಿ ಚುನಾವಣೆಯಾಗುವುದು ಸರಿಯಲ್ಲವೆಂದು ಇದೇ ಸಭೆಯಲ್ಲಿ ಸಾಮಾನ್ಯವಾಗಿ ಅನೇಕ ಸಲ ಚರ್ಚೆಯಾಗಿ ತೀರ್ಮಾನವಾಗಿದೆ. ಈಗ ವಿಶಾಲಭಾವನೆಯಿಂದ ತಾಲ್ಲೂಕುಗಳಲ್ಲಿರುವ ಜನರ ಪ್ರೀತಿ ವಿಶ್ವಾಸ ಸಂಪಾದಿಸಿ ಡಿಸ್ಟ್ರಿಕ್ಟು ಬೋರ್ಡಿಗೆ ಪ್ರತ್ಯಕ್ಷವಾಗಿ ಚುನಾಯಿತರಾಗಿ ಬರಲು ಅವಕಾಶವಿದೆ. ತಾಲ್ಲೂಕು ಬೋರ್ಡು ರಚಿಸುವುದರಿಂದ ಹೋಬಳಿವಾರು ಕಾನ್‌ಸ್ಟಿಟ್ಯೂಯನ್ಸಿ ಮಾಡಿ ಒಂದು ಸಂಕುಚಿತ ಮನೋಭಾವನೆಯಿಂದ ಚುನಾವಣೆ ಮಾಡುವುದರಿಂದ ಪ್ರತಿ ಹೋಬಳಿಯಿಂದಲೂ ಚುನಾಯಿತರಾಗಿ ಬರಲು ಅವಕಾಶವಿಲ್ಲವೆಂದು ಕಾಣುತ್ತದೆ. ತಾಲ್ಲೂಕಿನಿಂದ ಜನರಲ್ಲಾಗಿ ವಯಸ್ಕರ ಮತದಾನದ ಮೇಲೆ ಚುನಾಯಿತರಾಗಿ ಬರುವುದು ಸರಿಯಾದುದು. ಎಲ್ಲಾ ಕೋಮುಗಳ ಪ್ರತಿನಿಧಿಗಳೂ ಸಹಾ ಅದರಿಂದ ಬರಲು ಅನುಕೂಲ. ಒಂದು ತಾಲ್ಲೂಕು ಯೂನಿಟ್ಟಾಗಿ ಮಾಡುವುದರಿಂದ ವೆಚ್ಚ ಕಡಮೆಯಾಗಿ ಚುನಾವಣೆ ನಡೆಯಲು ಅವಕಾಶವಿದೆ.

ಇದರಲ್ಲಿ ಅಸೆಂಬ್ಲಿ ಕಾನ್‌ಸ್ಟಿಟ್ಯೂಯೆನ್ಸಿ ಓಟರುಗಳ ಪಟ್ಟಿ ಪ್ರಕಟವಾಗಬೇಕಾದ್ದು ಮುಖ್ಯವಾದ ವಿಷಯ, ಇದರಲ್ಲಿ ತರ್ಕವಿಲ್ಲ. ನಿಮ್ನವರ್ಗದವರಿಗೆ ಸ್ಥಾನಗಳನ್ನು ಕಾದಿಡಲು ಅವಕಾಶವಿದೆ, ಮೊದಲಿನ ಆಕ್ಟಿನಲ್ಲಿ ಈ ಅವಕಾಶವಿರಲಿಲ್ಲ, ಈಗ ಅವಕಾಶ ಕೊಟ್ಟು ಕನಿಷ್ಠಪಕ್ಷ ಒಂದು ಸ್ಥಾನವಾದರೂ ಜಿಲ್ಲಾ ಬೋರ್ಡಿನಲ್ಲಿ ಸಿಕ್ಕಲು ಅವರಿಗೆ ಅವಕಾಶ ಕಲ್ಪಿಸಲಾಗಿದೆ, ಯಾವ ತಾಲ್ಲೂಕುಗಳಲ್ಲಾದರೂ ಪ್ರತಿನಿಧಿ ಬಾರದಿದ್ದರೆ ಪ್ರತಿನಿಧಿಯೊಬ್ಬರು ಬರಲು ಅವಕಾಶವಿದೆ. ಆಮೇಲೆ ಜಿಲ್ಲಾ ಬೋರ್ಡುಗಳಿಗೆ ಶೇಕಡ $6\frac{1}{4}$ ಹಣ ಕೊಡುವುದು ಬೇಡ, ಅದಕ್ಕೆ ಪ್ರತ್ಯೇಕ ಉತ್ಪನ್ನ ಮಾಡಿಕೊಡಲು ಅವಕಾಶವಿದೆ. ಈ ರೆವೆನ್ಯೂ ತಾಲ್ಲೂಕು ಬೋರ್ಡುಗಳಿಗೆ ಹಂಚುವುದರಿಂದ ಪ್ರತಿಯೊಂದು ತಾಲ್ಲೂಕಿನಲ್ಲೂ ಅಭಿವೃದ್ಧಿ ಕಾರ್ಯ ಕೈಕೊಳ್ಳಬಹುದು ಎಂದು 106ನೆಯ ಸೆಕ್ಷನ್ ತಿದ್ದುಪಡಿ ಮಾಡಿರುವುದನ್ನು ಸ್ವಾಗತಿಸುತ್ತೇನೆ. ಜಿಲ್ಲಾ ಬೋರ್ಡು ನೇರವಾಗಿ ವಸೂಲುಮಾಡಿ ಕೆಲಸಮಾಡಲು ಅವಕಾಶವಿದೆ. ಆದ್ದರಿಂದ ಶೇಕಡ $6\frac{1}{4}$ ಕೊಡುವುದನ್ನು ಜಿಲ್ಲಾ ಬೋರ್ಡಿಗೆ ತಪ್ಪಿಸಿ ಗ್ರಾಮಪಂಚಾಯಿತಿಗಳಿಗೆ ಕೊಡುವುದರಿಂದ ತಾಲ್ಲೂಕು ಬೋರ್ಡುಗಳು ನಡೆಯಲು ಅನುಕೂಲವಾಗುತ್ತದೆ. ಹೋಬಳಿ ಮತ್ತು ತಾಲ್ಲೂಕುಗಳಲ್ಲಿ ಖರ್ಚಿಗೆ ಹಣ ಸಿಕ್ಕುವದು ಕಷ್ಟವಾದ್ದರಿಂದ ಶೇಕಡ $6\frac{1}{4}$ನ್ನು ಗ್ರಾಮಪಂಚಾಯಿತಿಗಳಿಗೆ ಕೊಡುವುದನ್ನು ಒಪ್ಪುತ್ತೇನೆ.

4-30 P.M.

ಈಗ ತಂದಿರತಕ್ಕ ಈ ಮಸೂದೆ ಸೆಲೆಕ್ಟ್ ಕಮಿಟಿಗೆ ಹೋಗಬೇಕಾದ ಅವಶ್ಯಕತೆ ಇಲ್ಲ. ಈಗಿರುವಂತೆಯೇ ಸರಿಯಾದ ರೀತಿಯಲ್ಲಿ ಇದೆ. ಆದ್ದರಿಂದ ಇದನ್ನು ಸಭೆಯವರು ಒಪ್ಪಿ ಆದಷ್ಟು ಜಾಗ್ರತೆ ಜಿಲ್ಲಾ ಬೋರ್ಡಿನ ಚುನಾವಣೆ ನಡೆಯುವುದಕ್ಕೆ ಅವಕಾಶ ಮಾಡಿಕೊಡುವುದು ಉತ್ತಮ ಎಂದು ಹೇಳಿ ಈ ಮಸೂದೆಯನ್ನು ತಂದುದಕ್ಕಾಗಿ ಸರ್ಕಾರದವರನ್ನು ಅಭಿನಂದಿಸುತ್ತೇನೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ (ಮಾಲೂರು).—ಈ ಜಿಲ್ಲಾ ಬೋರ್ಡು ತಿದ್ದುಪಡಿ ಮಸೂದೆಯನ್ನು ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಮಾತ್ರ ಹೇಳಬೇಕೆಂದು ನಿಂತಿದ್ದೇನೆ. ಈಗಾಗಲೇ ಜಿಲ್ಲಾ ಬೋರ್ಡಿನ ಚುನಾವಣೆಗಳು ನಡೆದು 1 ವರ್ಷಗಳ ಮೇಲೆ ಆಗಿದೆ. ಈಗ ಸ್ಪೆಷಲ್ ಆಫೀಸರುಗಳ ವಶಕ್ಕೆ ಜಿಲ್ಲಾ ಬೋರ್ಡುಗಳನ್ನು ವಹಿಸಿದ್ದೇವೆ. ಈ ಜಿಲ್ಲಾ ಬೋರ್ಡಿನ ಕೆಲಸ ಕಾರ್ಯಗಳು ಅಷ್ಟಾಗಿ ಚೆನ್ನಾಗಿ ನಡೆಯುತ್ತಿಲ್ಲ. ಈ ಜಿಲ್ಲಾ ಬೋರ್ಡಿನ ಕೆಲಸವನ್ನು ನಾವು ಹೋದ ಸಲ ಸ್ಪೆಷಲ್ ಆಫೀಸರುಗಳಿಗೆ ವಹಿಸುವ ಸಂದರ್ಭದಲ್ಲಿ, ಅದರಲ್ಲಿ ಇನ್ನೂ ಒಂದು ಕಲಂನ್ನು ಕೂಡ ಹಾಕಿದ್ದೆವು. ಅದೇನೆಂದರೆ ಸ್ಪೆಷಲ್ ಆಫೀಸರುಗಳ ಸಹಾಯಕ್ಕೆ ಒಂದು ಸಮಿತಿಯನ್ನು ಕೂಡ ಸರ್ಕಾರದವರು ನೇಮಿಸಬೇಕೆಂದು ಸೂಚಿಸಲಾಗಿತ್ತು. ಜಿಲ್ಲಾ ಬೋರ್ಡಿನ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯುವುದಕ್ಕೆ ಸಹಾಯಕವಾಗಿರುವ ಏರ್ಪಾಡು ಕೂಡ ಮಾಡಬೇಕೆಂದು ಹೇಳಿತ್ತು. ಈಗ ನೋಡಿದ್ದರಲ್ಲಿ ಆ ರೀತಿ ಆಗಿಲ್ಲ, ಹಿಂದೆ ನಾವು ಮಾಡಿದ ಆಕ್ಟಿನಲ್ಲಿ ಏನನ್ನು ಸೂಚನೆ ಮಾಡಿದ್ದೆವು ಎಂಬುದನ್ನು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳುವುದು ಒಳ್ಳೆಯದು ಎಂದು ಏಕೆ ಹೇಳುತ್ತಾ ಇದ್ದೇನೆ ಎಂದರೆ ಈ ಚುನಾವಣೆಗಳು ಆಗಬೇಕಾಗಿದ್ದರೂ ಕೂಡ ಇನ್ನೂ 6 ತಿಂಗಳು ಬೇಕು. ಅದಕ್ಕೆ ಮೊದಲೇ ಆಗುವುದಿಲ್ಲ ಅಥವಾ ಇನ್ನೂ ಒಂದು ವರ್ಷವೇ ಬೇಕಾಗುತ್ತದೆಯೋ ಏನೋ ? ಆದ್ದರಿಂದ ಈ ಚುನಾವಣೆಗಳನ್ನು ಆದಷ್ಟು ಜಾಗ್ರತೆ ನಡೆಸಬೇಕು ಎನ್ನುವುದು ಒಂದು ಮುಖ್ಯವಾದ ಅಂಶ. ಈ ತಿದ್ದುಪಡಿ ಮಸೂದೆ ಪ್ರಕಾರ ತೀರ್ಮಾನ ಮಾಡಿ ಚುನಾವಣೆಗಳನ್ನು ನಡೆಸುವುದಕ್ಕೆ ಮೊದಲು ಈಗಿರತಕ್ಕ ಜಿಲ್ಲಾ ಬೋರ್ಡಿನ ಸ್ಪೆಷಲ್ ಆಫೀಸರುಗಳ ಸಹಾಯಕ್ಕೆ ಒಂದು ಸಲಹಾಸಮಿತಿಯನ್ನು ನೇಮಿಸಿಕೊಡುವುದು ಒಳ್ಳೆಯದು ಎಂದು ಹೇಳಿ ಈ ಸಂದರ್ಭದಲ್ಲಿ ಸರ್ಕಾರದವರಿಗೆ ಸಲಹೆ ಮಾಡುತ್ತೇನೆ. ಈಗ ನೋಡಿದ್ದರಲ್ಲಿ ಜಿಲ್ಲಾ ಬೋರ್ಡಿನ ಕೆಲಸಕಾರ್ಯಗಳು ಏನೇನೂ ನಡೆಯುತ್ತಿಲ್ಲ. ಸ್ಪೆಷಲ್ ಆಫೀಸರು ಎಂದು ಯಾರು ಇದ್ದಾರೆ, ಅವರೇನಿದ್ದರೂ ಅವರ ಹತ್ತಿರ ಹೋದ ಕಾಗದಗಳಿಗೆ ರುಜು ಹಾಕುವುದು ಎಷ್ಟೋ ಅಷ್ಟು ಮಾತ್ರ ಕೆಲಸ ಆಗುತ್ತಾ ಇದೆ. ಆಸ್ಪತ್ರೆಗಳ ಕೆಲಸ ಆಗಲೀ ರಸ್ತೆಗಳ ಕೆಲಸ ಆಗಲೀ, ಯಾವ ತಾಲ್ಲೂಕಿನಲ್ಲೂ ಕೂಡ ನಡೆಯುತ್ತಿಲ್ಲ. ಆದ್ದರಿಂದ ನಾನು ಸರ್ಕಾರದವರಿಗೆ ಸಲಹೆ ಮಾಡುವುದೇನೆಂದರೆ, ಈ ಜಿಲ್ಲಾ ಬೋರ್ಡಿನ ಆಕ್ಟನ್ನು ಜಾರಿಗೆ ತರುವುದಕ್ಕೆ ಇನ್ನೂ 6 ತಿಂಗಳು ಅಥವಾ

(ಶ್ರೀ ಎಚ್. ಸಿ. ಲಿಂಗಾರೆಡ್ಡಿ.)

ಒಂದು ವರ್ಷ ಆಗುವುದರಿಂದ ಈ ಜಿಲ್ಲಾ ಬೋರ್ಡ್ ಸ್ಪೆಷಲ್ ಆಫೀಸರುಗಳ ಸಹಾಯಕ್ಕೆ ಒಂದು ಸಲಹಾ ಸಮಿತಿಯನ್ನು ರಚನೆಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಇದರಲ್ಲಿ ಇನ್ನೊಂದು ಬಹಳ ಪ್ರಾಮುಖ್ಯವಾದ ವಿಷಯವನ್ನು ಸೂಚನೆ ಮಾಡಲಾಗಿದೆ. ನಾವು ಮೊದಲಿಂದಲೂ ಕೂಡ ಪ್ರತ್ಯಕ್ಷ ಚುನಾವಣಾ ಪದ್ಧತಿ ಇರಬೇಕೇ, ಅಪ್ರತ್ಯಕ್ಷ ಚುನಾವಣಾ ಪದ್ಧತಿ ಇರಬೇಕೇ ಎಂಬ ವಿಷಯವನ್ನು ಚರ್ಚೆ ಮಾಡುತ್ತಾ, ಮಾಡುತ್ತಾ, 5-6 ವರ್ಷಗಳ ಕಾಲವನ್ನು ಕಳೆದಿದ್ದೇವೆ. ಕೊನೆಯದಾಗಿ ಅಪ್ರತ್ಯಕ್ಷ ಚುನಾವಣೆ ಬೇಡ, ಪ್ರತ್ಯಕ್ಷ ಚುನಾವಣಾ ಪದ್ಧತಿಯನ್ನು ಅನುಸರಿಸೋಣ ಎಂದು ಇಲ್ಲಿ ಸೂಚನೆ ಮಾಡಿರುವುದರಿಂದ ಈಗಲಾದರೂ ಇದನ್ನು ಒಪ್ಪಿಕೊಂಡಿರಬಹುದೇನೋ ಎಂದು ಇದ್ದೆ. ಆದರೆ ಈಗಲೂ ಕೂಡ ಪ್ರತ್ಯಕ್ಷ ಚುನಾವಣೆ ಬೇಕು ಎಂದು ಕೆಲವರು, ಅಪ್ರತ್ಯಕ್ಷ ಚುನಾವಣೆ ಬೇಕು ಎಂದು ಮತ್ತೆ ಕೆಲವರು ಹೇಳುತ್ತಾ ಇರುವುದನ್ನು ನೋಡಿದರೆ ಯಾವುದಾದರೂ ಒಂದು ತೀರ್ಮಾನಕ್ಕೆ ಬಂದು ಆ ತೀರ್ಮಾನದ ಪ್ರಕಾರ ಚುನಾವಣೆ ನಡೆಸಿದರೆ ಅದರ ಅನುಭವ ಗೊತ್ತಾಗುತ್ತದೆಯೇ ಹೊರತು ಇಲ್ಲದೇ ಇದ್ದ ಪಕ್ಷದಲ್ಲಿ ಯಾವಾಗಲೂ ಇದು ಇದ್ದೇ ಇರುತ್ತದೆ. ಕೆಲವರು ಹಾಗೆ ಬೇಕು ಎನ್ನುತ್ತಾರೆ, ಕೆಲವರು ಹೀಗೆ ಬೇಕು ಎನ್ನುತ್ತಾರೆ. ಇದರಲ್ಲಿ ಅನುಕೂಲ ಇದೆ, ಅದರಲ್ಲಿ ಅನುಕೂಲ ಇದೆ ಎಂದು ಹೇಳುವುದು ವಾದಕ್ಕೆ ಸಂಬಂಧಪಟ್ಟ ವಿಷಯ. ಎರಡು ಅಭಿಪ್ರಾಯಗಳು ಇದ್ದೇ ಇರುತ್ತವೆ, ಹೋಗುವುದೇ ಇಲ್ಲ. ಆದ್ದರಿಂದ ನಾವು ಈಗಲಾದರೂ ಕೂಡ ಇದನ್ನೇ ಹೆಚ್ಚಾಗಿ ಚರ್ಚೆ ಮಾಡಿಕೊಂಡು ಕಾಲವಿಳಂಬಿಸಿಕೊಂಡು, ನಿಧಾನ ಮಾಡಿಕೊಂಡು ಸಾವಕಾಶವಾಗಿ ಹೋಗುವುದಕ್ಕೆ ಬದಲಾಗಿ ಪ್ರತ್ಯಕ್ಷ ಚುನಾವಣಾ ಪದ್ಧತಿಯ ಆಧಾರದ ಮೇಲೆ ಚುನಾವಣೆಗಳನ್ನು ಬಹು ಜಾಗ್ರತೆಯಾಗಿ ನಡೆಸಬೇಕೆಂದು ನಾನು ಈ ಸಂದರ್ಭದಲ್ಲಿ ಸೂಚನೆ ಮಾಡಲು ಬಯಸುತ್ತೇನೆ. ಶ್ರೀ ಭೀಮಪ್ಪ ನಾಯಕರು ಹೇಳಿದಂತೆ ಚುನಾವಣೆಗಳನ್ನು ನಡೆಸಬೇಕಾದರೆ ಬಹಳ ಕಾಲ ವಿಳಂಬವಾಗುತ್ತದೆ. ತಾಲ್ಲೂಕುಗಳನ್ನು ಡೀಲಿಮಿಟ್ ಮಾಡುವುದಕ್ಕೆ ಸುಮಾರು 1-2 ವರ್ಷ ಬೇಕಾಗಬಹುದು. ಅಷ್ಟು ಹೊತ್ತಿಗೆ ಸಾರ್ವತ್ರಿಕ ಚುನಾವಣೆಗಳು ಬರುತ್ತವೆ. ಎರಡು ತಾಲ್ಲೂಕುಗಳನ್ನೂ ಸೇರಿಸಿ ಒಂದೇ ಸಾರಿ ಚುನಾವಣೆ ನಡೆಸೋಣ ಎಂದು ನಮ್ಮ ಮಾನ್ಯ ಮಿತ್ರರು ಕೆಲವರು ವಾದಮಾಡಿದರು. ಆದರೆ ಯಾವುದು ಒಳ್ಳೆಯದು, ಯಾವುದು ಕೆಟ್ಟದ್ದು, ಯಾವುದು ಹೆಚ್ಚು ಪ್ರಯೋಜನ ಎಂಬುದನ್ನು ಕೂಡ ಗಮನಿಸಬೇಕು.

ಈಗ ನಾವು ಪುರಸಭಾ ಚುನಾವಣೆಗಳನ್ನು ನಡೆಸುತ್ತಾ ಇದ್ದೇವೆ. ಪೌರಸಭೆಯ ಚುನಾವಣೆಗಳು ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯುಯನ್‌ಸಿ ಪ್ರಕಾರ ನಡೆಯುತ್ತಾ ಇದೆ. ಈಗ ಅನೇಕರು ಸಿಂಗಲ್ ಮೆಂಬರ್ ಕಾನ್‌ಸ್ಟಿಟ್ಯುಯನ್‌ಸಿ ಬೇಡ, ಪ್ಲೂರಲ್ ಮೆಂಬರ್ ಕಾನ್‌ಸ್ಟಿಟ್ಯುಯನ್‌ಸಿಪ್ರಕಾರ ಏರ್ಪಾಡು ಮಾಡಿ ಎಂದು ಹೇಳುತ್ತಾ ಇದ್ದಾರೆ. ನಮ್ಮ ಅನುಭವ ಆದರೂ ಕೂಡ ಏನು ಎಂದರೆ, ಈ ಪ್ಲೂರಲ್ ಮೆಂಬರ್ ಕಾನ್‌ಸ್ಟಿಟ್ಯುಯನ್‌ಸಿಯಲ್ಲಿ ವಿದ್ಯಾವಂತರಾದವರು, ಅನುಭವಸ್ಥರಾದವರು, ತಿಳಿವಳಿಕಸ್ಥರಾದವರು ಯಾರಿದ್ದಾರೋ ಅವರಿಗೆ ಅವಕಾಶವೇ ಇಲ್ಲ. ಇದನ್ನು ಯಾಕೆ ಹೇಳುತ್ತಾ ಇದ್ದಾರೆ ಎಂದರೆ ಹಣ ಬೇಕಾದಷ್ಟು ಇರುವವರು, ಬಹಳ ಪ್ರಭಾವಶಾಲಿಗಳಾಗಿರುವವರು ಯಾರಿದ್ದಾರೆ ಅವರೇ ಹೊರತು ಇನ್ನಾರೂ ಅಲ್ಲ. ವಿದ್ಯಾವಂತನಿಗೆ, ಬುದ್ಧಿವಂತನಿಗೆ ಅಲ್ಲಿ ಅವಕಾಶವಿಲ್ಲ. ಈ ಚುನಾವಣೆಗಳಲ್ಲಿ ಯಾವ ರೀತಿ ಪ್ರಚಾರ ಆಗುತ್ತವೆ, ಹಣ ಹೇಗೆ ಸಿಕ್ಕಾಪಟ್ಟೆ ಖರ್ಚು ಮಾಡುತ್ತಾರೆ ಎಂಬುದು ಈಗಾಗಲೇ ಒಂದು ಮಹಾಚುನಾವಣೆ ಆಗಿ ಇಲ್ಲಿರತಕ್ಕ ಮಾನ್ಯ ಸದಸ್ಯರಿಗೆ ಗೊತ್ತಿರುವ ವಿಚಾರ. ಅದನ್ನು ಹೆಚ್ಚಾಗಿ ವಿವರಿಸುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಈ ಪುರಸಭೆಗಳಿಗಾದರೂ ಕೂಡ ಮಲ್ಟಿ ಮೆಂಬರ್ ಕಾನ್‌ಸ್ಟಿಟ್ಯುಯನ್‌ಸಿ ಮಾಡುವುದು ಒಳ್ಳೆಯದಲ್ಲ ಎಂದು ಎನ್ನಿಸುತ್ತಾ ಇದೆ. ನಮ್ಮ ಜನಗಳಿಗೆ ಜಾತಿ ಮನೋಭಾವ ಇನ್ನೂ ಹೋಗಿಲ್ಲ. ಯಾವ ಹೋಬಳಿಯಲ್ಲಿ ಯಾರು ಬಹುಸಂಖ್ಯಾತರಾಗಿರುತ್ತಾರೋ ಅವರ ಪೈಕಿ ಯಾರಾದರೂ ಉಮೇದುವಾರರಾಗಿ ನಿಂತುಕೊಂಡರೆ ಅಲ್ಪಸಂಖ್ಯಾತರನ್ನು ಸುಲಭವಾಗಿ ಸೋಲಿಸಿಬಿಡುತ್ತಾರೆ. ಮೈನಾರಿಟಿ ಕಮ್ಯೂನಿಟಿಯವರು ಗೆಲ್ಲುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಯಾವ ಪಾರ್ಟಿ ಆದರೂ ಆಗಲಿ, ಈ ವಿಧವಾಗಿರುವುದರಿಂದ ಇಡೀ ತಾಲ್ಲೂಕು ಒಂದು ಚುನಾವಣಾ ಕ್ಷೇತ್ರವಾಗಿ ಮಾಡಿ ಚುನಾವಣೆ ನಡೆಸುವುದು ಬಹಳ ಮುಖ್ಯ ಮತ್ತು ಬಹಳ ಪ್ರಯೋಜನಕಾರಿ ಎಂದು ಹೇಳಿ ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಈ ಮಸೂದೆಗೆ ನಾನು ಕೂಡ ಕೆಲವು ತಿದ್ದುಪಡಿಗಳನ್ನು ತರಬೇಕೆಂದು ಅಂದುಕೊಂಡಿದ್ದೆ. ಮೊನ್ನೆ ತಾವು ತೀರ್ಮಾನ ಮಾಡಿರುವ ಹಾಗೆ ಈ ಜಿಲ್ಲಾ ಬೋರ್ಡ್ ಆಕ್ಟಿನಲ್ಲಿ ಪ್ರತಿಯೊಂದು ತಾಲ್ಲೂಕಿಗೂ ಕೂಡ ಅಲ್ಲಿನ ಪ್ರಜಾಸಂಖ್ಯೆಗನುಗುಣವಾಗಿ ಸ್ಥಾನಗಳನ್ನು ಕೊಟ್ಟಿದ್ದೀರಿ. 25 ಸಾವಿರಕ್ಕೆ ಒಬ್ಬೊಬ್ಬ ಸದಸ್ಯನಂತೆ ಏರ್ಪಾಡು ಮಾಡಿ ಷೆಡ್ಯೂಲ್‌ನಲ್ಲಿ ನಮೂದುಮಾಡಿದ್ದೀರಿ. ಅದರಲ್ಲಿರುವ ಪ್ರಕಾರ ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡ ಪ್ಲೂರಲ್ ಮೆಂಬರ್ ಕಾನ್‌ಸ್ಟಿಟ್ಯೂಯನ್‌ಸಿ ಇಟ್ಟುಕೊಂಡು ಚುನಾವಣೆ ನಡೆಸುವುದು ಎಂದು ಮಾಡಿದೆ. ಆ ಸದಸ್ಯರ ಸಂಖ್ಯೆ 3ಕ್ಕೆ ಹೆಚ್ಚಾದಂತೆ ಮಾಡಬೇಕೆಂದು ಅದರಲ್ಲಿ ಹೇಳಿದ್ದೀರಿ. ಇದರಿಂದ ಬಹಳ ತೊಂದರೆಯಾಗುತ್ತದೆ. ಕೆಲವು ತಾಲ್ಲೂಕುಗಳು ಇವೆ. ಆ ತಾಲ್ಲೂಕುಗಳಲ್ಲಿ ಒಂದು ಲಕ್ಷ ಒಂದೂವರೆ ಲಕ್ಷ ಪ್ರಜಾಸಂಖ್ಯೆ ಇರುತ್ತದೆ. ಇನ್ನೂ ಕೆಲವು ತಾಲ್ಲೂಕುಗಳಲ್ಲಿ 40 ಸಾವಿರ, 50 ಸಾವಿರ, 75 ಸಾವಿರ ಪ್ರಜಾಸಂಖ್ಯೆ ಇರುತ್ತದೆ. ಆದ್ದರಿಂದ 1—1½ ಲಕ್ಷ ಪ್ರಜಾಸಂಖ್ಯೆ ಇರತಕ್ಕ ಕೆಲವು ತಾಲ್ಲೂಕುಗಳಿಗೆ ಕೇವಲ 3 ಸ್ಥಾನಗಳನ್ನು ಕೊಟ್ಟು 50, 60—70 ಸಾವಿರ ಪ್ರಜಾಸಂಖ್ಯೆ ಇರತಕ್ಕ ತಾಲ್ಲೂಕುಗಳಿಗೂ 3 ಸ್ಥಾನಗಳನ್ನು ಕೊಡುವುದರಿಂದ ಇದು ಪ್ರಜಾಪ್ರಭುತ್ವ ತತ್ವಕ್ಕೂ ಕೂಡ ವಿರೋಧವಾಗುತ್ತದೆ. ಇದು ಚೆನ್ನಾಗಿಲ್ಲ. ಆದ್ದರಿಂದ ಇದನ್ನು ಸೂಕ್ತವಾಗಿ ಬದಲಾವಣೆ ಮಾಡಬೇಕು. ಕೆಲವು ಸದಸ್ಯರು ಈ ಜಿಲ್ಲಾ ಬೋರ್ಡುಗಳಲ್ಲಿ ಬಹಳ ಜನ ಸದಸ್ಯರಾಗಿಬಿಟ್ಟರೆ ಕೆಲಸಕಾರ್ಯ ನಡೆಯುವುದೇ ಕಷ್ಟ, ಅಥವಾ ಅದು ಬಹು unwieldy ಆಗುತ್ತದೆ ಎಂದು ಅಭಿಪ್ರಾಯಪಟ್ಟ ಹಾಗೆ ಕಾಣುತ್ತದೆ. ಆದರೆ ಈ ಪರಿಶಿಷ್ಟದಲ್ಲಿ ಕೊಟ್ಟಿರತಕ್ಕ ಸಂಖ್ಯೆಯನ್ನು ನೋಡಿದರೆ ಅದೇನೂ ಅಷ್ಟು ಹೆಚ್ಚಾಗಿ ಕಾಣುವುದಿಲ್ಲ. ಹಿಂದಿನ ಜಿಲ್ಲಾ ಬೋರ್ಡುಗಳ ಸಂಖ್ಯೆ ಎಷ್ಟಿತ್ತೋ ಅಷ್ಟೆ ಈಗಲೂ ಸ್ವಲ್ಪ ಹೆಚ್ಚು ಕಡಿಮೆ ಇದೆ. ಕೋಲಾರ ಜಿಲ್ಲೆಯಲ್ಲಿ ಹೇಳುವುದಾದರೆ ಮೊದಲು 3[illegible] ಇತ್ತು. ಈಗ 34 ಆಗಿದೆ. ಒಟ್ಟಿನಲ್ಲಿ 25 ಸಾವಿರಕ್ಕೆ ಒಬ್ಬರಂತೆ ಮಾಡುವುದು ಒಳ್ಳೆಯದಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಈ ಜಿಲ್ಲಾ ಬೋರ್ಡುಗಳಿಗೆ ಕಂದಾಯದ ಶೇಕಡ $12\frac{1}{2}$ ಭಾಗದ ಪೈಕಿ $6\frac{1}{4}$ ಭಾಗ ಮಾತ್ರ ಕೊಡಬೇಕೆಂದು ಮಾಡಿದ್ದೀರಿ. ಬಾಕಿಯದನ್ನು ತಾಲ್ಲೂಕು ಸಲಹಾ ಕಮಿಟಿಗಳಿಗೆ ಕೊಡಲಾಗುತ್ತದೆ ಎಂಬ ಉದ್ದೇಶವನ್ನು ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳಿದ್ದಾರೆ. ಉದ್ದೇಶವೇನೋ ಒಳ್ಳೆಯದೇ. ಆದರೆ ಅದನ್ನು ಈ ಕಾನೂನಿನಲ್ಲಿ ನಮೂದು ಮಾಡಿಲ್ಲ. ಕೇವಲ ಒಂದು ಭರವಸೆಯನ್ನು ಕೊಡುವುದು ಅಷ್ಟಾಗಿ ಉತ್ತಮವಾಗುವುದಿಲ್ಲ. ಆ ರೀತಿ ಹೇಳಿದಂತೆ ಇದರಲ್ಲಿ ನಮೂದು ಮಾಡಿದ್ದರೆ ನಮ್ಮ ಸ್ನೇಹಿತರೆಲ್ಲರೂ ಒಪ್ಪಿಕೊಳ್ಳುತ್ತಾ ಇದ್ದರು ಎಂದು ಕಾಣುತ್ತದೆ. ಈ ಜಿಲ್ಲಾ ಬೋರ್ಡುಗಳು ಕೆಲಸ ಮಾಡುವಾಗ, ಆಸ್ಪತ್ರೆ, ರಸ್ತೆಗಳು ಮುಂತಾದ ದೊಡ್ಡ ದೊಡ್ಡ ಕೆಲಸಗಳನ್ನು ಮಾಡಬೇಕಾಗುತ್ತದೆ. ಹಣದ ಕೊರತೆ ಉಂಟಾದಲ್ಲಿ ಜನಸಾಮಾನ್ಯರಿಗೆ ಹೆಚ್ಚಿನ ಸೌಕರ್ಯ ಮಾಡಿಕೊಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಈ 6 ಲಕ್ಷ ಚಿಲ್ಲರೆ ರೂಪಾಯಿಗಳನ್ನು ತಾಲ್ಲೂಕು ಸಲಹಾ ಕಮಿಟಿಗಳಿಗೆ ಹಂಚುವುದಾದರೆ 10 ಜಿಲ್ಲೆಗಳಿಗೆ ಸ್ವಲ್ಪ ಹೆಚ್ಚುಕಡಿಮೆ 1 ಲಕ್ಷಕ್ಕೂ ಕಡಿಮೆ ಹಣ ಬರುತ್ತದೆ. ಆದ್ದರಿಂದ ನನ್ನ ಸೂಚನೆ ಏನೆಂದರೆ ಜಿಲ್ಲಾ ಬೋರ್ಡಿನಿಂದ ಶೇಕಡ $6\frac{1}{4}$ ರಷ್ಟು ಹಣವನ್ನು ತೆಗೆದು ತಾಲ್ಲೂಕುಗಳಿಗೆ ಕೊಡುವ ಉದ್ದೇಶ ಇದೆ ಎಂದು ಹೇಳಿ ನಮೂದಿಸಿ ಸೂಕ್ತ ಬದಲಾವಣೆ ಮಾಡಿದರೆ ಸಾಕು. ಇಷ್ಟು ಹೇಳಿ ಈ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ.

ಶ್ರೀ ಕೆ. ಪಟ್ಟಾಭಿರಾಮನ್ (ಕೋಲಾರ).—ಮಾನ್ಯ ಸಭಾಪತಿಗಳೇ, ಪ್ರಾಯಶಃ ಈ ಜಿಲ್ಲಾ ಬೋರ್ಡುಗಳ ಭವಿಷ್ಯದ ಬಗ್ಗೆ ಈ ಸರ್ಕಾರ ಅಥವಾ ಮಂತ್ರಿಮಂಡಲ ರಚನೆ ಆದಾಗಿನಿಂದ ಒಂದಲ್ಲ ಒಂದು ರೀತಿಯಲ್ಲಿ ಒಂದು ವಿಷಾದ ಘಟನೆಗಳ ಹಾವಳಿಯೇ ನಡೆದುಕೊಂಡು ಬಂದಿದೆ ಎಂದು ಹೇಳಿದರೆ ಅದು ಅತ್ಯುಕ್ತಿ ಆಗಲಾರದು. ಪ್ರಾಯಶಃ ಈ ರೀತಿಯಾಗಿ ಈ ಜಿಲ್ಲಾ ಬೋರ್ಡುಗಳಿಗೆ ಸಂಬಂಧಪಟ್ಟ ಹಾಗೆ ಈ ಮೂರು ವರ್ಷಗಳಿಂದ ಒಂದು ಸನ್ನಿವೇಶವನ್ನು ಅನೇಕ ಸಾರಿ ಉಪಯೋಗಿಸಿಕೊಂಡು ನನ್ನ ಅಭಿಪ್ರಾಯಗಳನ್ನು ಈ ಮಾನ್ಯ ಸಭೆಯ ಮುಂದೆ ಇಟ್ಟಿರುವುದರಿಂದ ಪುನರುಕ್ತಿ ದೋಷಕ್ಕೆ ಪಾತ್ರನಾಗುತ್ತೇನೆಯೋ ಏನೋ ಎಂಬ ಅಂಶ ನನ್ನ ಮನಸ್ಸಿಗೆ ಬರುತ್ತಿರುವುದರಿಂದ ಇದನ್ನು ಹೆಚ್ಚು ವಿಳಂಬಮಾಡಲು ಪ್ರಯತ್ನಪಡುವುದಿಲ್ಲ. ಇಷ್ಟು ಮಾತ್ರ ಹೇಳಬಲ್ಲೆ. ಈ ಮಸೂದೆ ಏನು ಈ ಸಭೆಯ ಮುಂದೆ ಇದೆ ಇದಕ್ಕೆ ತೀರ ವಿರೋಧವಾದ ಒಂದು ಮಾತನ್ನು ಮಾನ್ಯ ಸದಸ್ಯರುಗಳು ಹೇಳಿದರು. ನನ್ನ ಅಭಿಪ್ರಾಯವನ್ನು ಹೊರಪಡಿಸುತ್ತ ಎರಡು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ. ಇದರೊಳಗೆ ಹೆಚ್ಚಿನ ಒಂದು ಅವಕಾಶವಿದ್ದರೂ ಕೂಡ ಸರ್ಕಾರದವರು ಏಕೋ ಏನೋ ಒಂದು ಕಾರಣ ಇಟ್ಟುಕೊಂಡು ಹಿಂದೂ ಮುಂದೂ ನೋಡುತ್ತಾ ಮಂದಗಮನದಿಂದ ಹೋಗುತ್ತಾ ಇದ್ದಾರಲ್ಲಾ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಎರಡನೆಯ ಮಾತು ಸ್ವಲ್ಪ ಅಧಿಕಪ್ರಸಂಗತನವಾಗುತ್ತದೆಯೋ ಏನೋ ಆದರೂ ಹೇಳಬೇಕೆಂದು ಆಶೆಪಡುತ್ತೇನೆ. ಈ ಮಸೂದೆಯಲ್ಲಿರತಕ್ಕ ಬೇರೆ ಬೇರೆ ಅಂಶಗಳನ್ನು ನೋಡಿದರೆ ಇದು ಪಾರ್ಟಿ ದೃಷ್ಟಿಯಲ್ಲಿ, ಪಕ್ಷದ ಹಿತದೃಷ್ಟಿಯಲ್ಲಿ, ಅದನ್ನೇ ಒಂದು ಪ್ರಾಮುಖ್ಯವಾಗಿ ಮನಸ್ಸಿನಲ್ಲಿಟ್ಟುಕೊಂಡು ಮಾಡಿದಂತೆ ಇದೆ. ಇಂಥಾ ಒಂದು ಮಸೂದೆಯನ್ನು ತಂದು ದೇಶಕ್ಕೆ ಅನ್ಯಾಯ ಮಾಡಿದಂತಾಗಿದೆ ಎಂದು ಹೇಳಿದರೆ ನನ್ನ ಅಭಿಪ್ರಾಯಗಳೆಲ್ಲವನ್ನೂ ಕೂಡ ಆ ಒಂದು ಮಾತಿನಲ್ಲಿ ಹೇಳಿದಂತಾಗುತ್ತದೆ ಎಂದು ಹೇಳಿ ಅದನ್ನು ಅಲ್ಲಿಗೆ ಬಿಟ್ಟುಬಿಡುತ್ತೇನೆ. ಈ ಜಿಲ್ಲಾ ಬೋರ್ಡುಗಳ ಮಸೂದೆಯ ಮೇಲೆ ಈಗ ಚರ್ಚೆ ಆಗುತ್ತಾ ಇರತಕ್ಕ ಸಂದರ್ಭದಲ್ಲಿ ಇಲ್ಲಿಗತಕ್ಕ ಬೇರೆ ಬೇರೆ ಅಂಶಗಳ ಬಗ್ಗೆ ದೀರ್ಘವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಒಂದೆರಡು ವಿಚಾರ ಮಾತ್ರ ತಮ್ಮ ಗಮನಕ್ಕೆ ತರಬೇಕೆಂದು ಆಶೆಪಡುತ್ತೇನೆ. ಮುಖ್ಯವಾಗಿ ಶ್ರೀ ಭೀಮಪ್ಪ ನಾಯಕರು ಹೇಳಿದಂಥಾ ಅನೇಕ ಅಭಿಪ್ರಾಯಗಳನ್ನು ನಾನು ಅನುಮೋದಿಸುತ್ತೇನೆ. ಅದನ್ನು ಒತ್ತಿ ಹೇಳಬೇಕು ಎನ್ನುವುದೇ ನನ್ನ ಮುಖ್ಯ ಉದ್ದೇಶ. ಈ ಮಸೂದೆಯಲ್ಲಿ ತಾಲ್ಲೂಕಿಗೆ ಮೂರಕ್ಕೆ ಹೆಚ್ಚಿಲ್ಲದಂತೆ ಸದಸ್ಯರನ್ನು ಆರಿಸಬೇಕೆಂದು ಹೇಳಿದ್ದೀರಿ.

ಏತಕ್ಕಾಗಿ ಈ ದಿವಸ ತಾವು ಹೀಗೆ ವಿರೋಧವಾಗಿ ಮಾತನಾಡುತ್ತಿದ್ದೀರಿ ಮತ್ತು ತಾವು ಏತಕ್ಕಾಗಿ ಯಾವ ಪ್ರತಿಯೊಂದು ಬಾಬಿಗೂ ಹೀಗೆ ಹಿಂದು ಹಿಂದಕ್ಕೆ ಹೆಜ್ಜೆ ಇಟ್ಟುಕೊಂಡು ಹೋಗುತ್ತಾ ಇದ್ದೀರಿ ಅನ್ನುವುದು ನನಗೆ ಚೆನ್ನಾಗಿ ಅರ್ಥವಾಗುತ್ತಿದೆ. ಈ ಜಿಲ್ಲಾ ಬೋರ್ಡುಗಳ ರಚನೆ ಯಾವ ರೀತಿಯಾಗಿರಬೇಕು, ಇವುಗಳನ್ನು ಯಾವ ರೂಪದಲ್ಲಿ ರಚಿಸಬೇಕು, ಇವುಗಳ ವೈಶಿಷ್ಟ್ಯತೆ ಯಾವ ರೀತಿಯಾಗಿರಬೇಕು ಎನ್ನತಕ್ಕಂಥಾ ವಿಚಾರದಲ್ಲಿ ಸರ್ಕಾರದವರಿಗೆ ಒಂದು ಸ್ಪಷ್ಟವಾದಂಥ ಒಂದು ಖಚಿತವಾದಂಥ, ಒಂದು ನಿರ್ದಿಷ್ಟವಾದಂಥ ಅಭಿಪ್ರಾಯವಿರುವುದಿಲ್ಲ ಎನ್ನತಕ್ಕಂಥಾದ್ದನ್ನು ನಾನು ಧಾರಾಳವಾಗಿ ಹೇಳಬಲ್ಲೆ. ತಾವು ಈ ದಿವಸ ದೇಶದ ಮುಂದೆ ಇಡಲು ಉದ್ದೇಶಪಟ್ಟಿರತಕ್ಕಂಥ ಈ ಜಿಲ್ಲಾ ಬೋರ್ಡುಗಳ ಮಸೂದೆ ಎಲ್ಲರಿಗೂ ಅರ್ಥವಾಗುವಂತೆಯೂ ಕಾನೂನು ದೃಷ್ಟಿಯಲ್ಲಿ ಇತರ ದೇಶಗಳ ಕಾನೂನಿಗೆ ಒಂದು ಹೊಂದಾವಣಿಕೆಯಾಗಿರುವಂತೆಯೂ, ಪ್ರಗತಿ ಪರವನ್ನು ಸಾಧಿಸತಕ್ಕಂಥ ಒಂದು ವೈಶಿಷ್ಟ್ಯತೆಯಿಂದ ಈ ಮಸೂದೆ ಕೂಡಿಲ್ಲ ಎಂಬ ಅಂಶವನ್ನು ನಾನು ಬಹಳ ಬಂದ ಮನಸ್ಸಿನಿಂದ ನೋಡುಕೊಂಡು ಹೇಳಬೇಕಾಗಿದೆ. ಈ ಮಸೂದೆಯನ್ನು ಒಂದು ಪ್ರಗತಿಪರವಾದ ರೀತಿಯಲ್ಲಿ ತರಲು ತಾವು ಹೆಜ್ಜೆ ಹೆಜ್ಜೆಗೂ ಹಿಂದಕ್ಕೂ ಮುಂದಕ್ಕೂ ನೋಡುತ್ತಿದ್ದೀರಿ. ಇದರ ಬಗ್ಗೆ ತಾವೀ ರೀತಿಯಾಗಿ ಮಾಡುತ್ತಿರುವುದು ಕೇವಲ ತಮ್ಮ ಒಂದು ಪಕ್ಷದ ಹಿತಕ್ಕಾಗಿಯೇ ಎಂದು ಹೇಳದೆ ವಿಧಿಯಿಲ್ಲ. ಈಗ ಸಭೆಯ ಮುಂದೆ ಚರ್ಚೆಗಾಗಿ ಬಂದಿರತಕ್ಕ ಈ ಮಸೂದೆಗೆ ಹಿನ್ನೆಲೆಯಾಗಿ ಎರಡು ವರದಿಗಳನ್ನು ಸರ್ಕಾರಕ್ಕೆ ಒಪ್ಪಿಸಲಾಗಿರುತ್ತದೆ. ಒಂದು ಶ್ರೀ ವಿ. ವೆಂಕಟಪ್ಪನವರ ಸಮಿತಿಯ ವರದಿ. ಮತ್ತೊಂದು ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರ ಸಮಿತಿಯ ವರದಿ. ಸರ್ಕಾರದವರು ತಾವು ಈ ಎರಡು ವರದಿಗಳನ್ನೂ ಒಂದೇ ಸಮನಾಗಿ ಕಂಡು, ಯಾವುದಕ್ಕೂ ಒಂದು ಪಕ್ಷಪಾತ ಭಾವನೆಯನ್ನು ತೋರಿಸದಂತೆ ತಾವು ಆ ಸಮಿತಿಗಳ ನಿರ್ಧಾರಗಳು ಏನೇ ಇರಲಿ ಅಂತೂ ಆ ಎರಡು ವರದಿಗಳಿಗೂ ಒಂದೇ ಬೆಲೆಯನ್ನು ಕೊಟ್ಟಿದ್ದೀರಿ. ಈ ಒಂದು ದೃಷ್ಟಿಯಿಂದಲಾದರೂ ತಾವು ಅವುಗಳ ಬೆಲೆಯೇನೆಂಬುದನ್ನು ಮೊದಲಿಸದೆ, ಎರಡಕ್ಕೂ ಒಂದೇ ರೀತಿಯಾಗಿ ತಮ್ಮ ಪೂರ್ಣ ಅಭಿಮಾನವನ್ನು ವ್ಯಕ್ತಪಡಿಸಿದ್ದೀರಿ. ಇಷ್ಟನ್ನಾದರೂ ತಾವು ಯಾವ ಒಂದು ಪಕ್ಷಪಾತವೂ ಇಲ್ಲದಂತೆ ಮಾಡಿದ್ದಕ್ಕಾಗಿ ದೇವರು ತಮ್ಮನ್ನು ಆಶೀರ್ವದಿಸಲಿ. ಆದರೆ ಈಗೇನು ಶ್ರೀ ಭೀಮಪ್ಪನಾಯಕರು ತಿಳಿಸಿರುತ್ತಾರೋ ಅದನ್ನು ನಾನು ಅಕ್ಷರಶಃ ಅನುಮೋದಿಸುತ್ತೇನೆ. ನನ್ನ ಅಭಿಪ್ರಾಯವೂ ಮತ್ತು

(ಶ್ರೀ ಕೆ. ಪಟ್ಟಾಭಿರಾಮನ್.)

ಅವರ ಅಭಿಪ್ರಾಯಗಳೂ ಎರಡೂ ಕೇವಲ ಹತ್ತಿರ ಹತ್ತಿರವಿರುವುದರಿಂದ ಈ ಬಗ್ಗೆ ನಾನೂ ಸಹ ಒಂದೆರಡು ಮಾತುಗಳನ್ನಾಡಲು ಅಪೇಕ್ಷೆಪಟ್ಟಿರುತ್ತೇನೆ. ಈಗ ನಾನು ಒಂದೆರಡು ಹೊಸ ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದಿದ್ದೇನೆ. ಈಗಾಗಲೇ ಮಾತನಾಡಿರತಕ್ಕಂಥ ಶ್ರೀ ಭೀಮಪ್ಪನಾಯಕರು ಇನ್ನು ಮುಂದೆ ರಚಿತವಾಗಲಿರುವ ಜಿಲ್ಲಾ ಬೋರ್ಡುಗಳು ಯಾವ ರೀತಿಯಾಗಿರಬೇಕು, ಅವುಗಳ ರೂಪರೇಖೆಗಳೇನು ಎಂಬ ವಿಚಾರಗಳನ್ನು ಪ್ರಸ್ತಾಪಮಾಡುತ್ತ ಇನ್ನು ಮುಂದೆ ರಚಿತವಾಗತಕ್ಕಂಥ ಈ ಜಿಲ್ಲಾ ಬೋರ್ಡುಗಳ ಬಗ್ಗೆ ತಾವು ಈ ರಾಜಕೀಯ ನೈಪುಣ್ಯತೆಯೇನಿದೆಯೋ ಅದಕ್ಕೆ ಹೆಚ್ಚಿನ ಅವಕಾಶವನ್ನು ಕೊಟ್ಟುಬಿಟ್ಟರೆ ಅದರಿಂದ ಏನೇನು ತೊಂದರೆಗಳು, ಏನೇನು ಅನಾಹುತಗಳಾಗುತ್ತವೆ ಮತ್ತು ಅದರಿಂದ ಹೇಗೆ ಈ ಸ್ಥಳೀಯ ಸಂಸ್ಥೆಗಳಿಗೆ ಸ್ವಾತಂತ್ರ್ಯವುಂಟಾಗುತ್ತದೆ ಎನ್ನುವುದನ್ನು ಅವರು ಬಹಳ ಚೆನ್ನಾಗಿ ಅವರವೇ ಆದಂಥಾ ಒಂದು ಶೈಲಿಯಲ್ಲಿ ಬಹಳ ವಿವರವಾಗಿ ತಿಳಿಸಿದ್ದಾರೆ. ಈ ಜಿಲ್ಲಾ ಬೋರ್ಡುಗಳು ಕೈಗೊಳ್ಳುವಂಥ ಕೆಲಸಕಾರ್ಯಗಳಾದರೂ ಯಾವುವು ? ಒಂದು ರಸ್ತೆಯ ಕೆಲಸ, ಒಂದು ಕೆರೆ, ಒಂದು ಬಾವಿ, ಒಂದು ವೈದ್ಯಸಹಾಯ. ಇತ್ಯಾದಿ ಕಾರ್ಯಗಳೇ ಆಗಿವೆ. ಇವರಲ್ಲಿ ಯಾವ ರಾಜಕೀಯವೂ ಇರುವುದಿಲ್ಲ. ಈ ಕೆಲಸಗಳೆಲ್ಲಾ ಸಾರ್ವಜನಿಕರ ಹಿತದೃಷ್ಟಿಯಿಂದ ನಡೆಸಲ್ಪಡತಕ್ಕವುಗಳಾಗಿವೆ. ಆದರೆ ಹಾಗೆ ಇದರಲ್ಲಿ ಯಾವ ಒಂದು ರಾಜಕೀಯ ಕೈವಾಡಕ್ಕೂ ಅವಕಾಶವಿಲ್ಲದೆ ಇದ್ದಾಗ್ಯೂ ತಾವು ಕೇವಲ ತಮ್ಮ ಒಂದು ಪಕ್ಷದ ಬೆಂಬಲಕ್ಕಾಗಿ, ತಮ್ಮ ಪಕ್ಷದ ಉಮೇದುವಾರರುಗಳಿಗೆ ಒಂದು ಸ್ಥಾನವನ್ನು ಕಲ್ಪಿಸಿಕೊಡಬೇಕೆಂಬ ದೃಷ್ಟಿಯಿಂದ ಈ ರೀತಿಯಾಗಿ ಮಾಡಿರುತ್ತೀರಿ ಈ ಜಿಲ್ಲಾ ಬೋರ್ಡಿನ ಸದಸ್ಯತ್ವಕ್ಕೆ ಇಂಥಾ ರಾಜಕೀಯ ನಿಪುಣರು ಬೇಕಾಗಿಲ್ಲ. ಈ ಕೆಲಸಕ್ಕೆ ಬೇಕಾಗಿರುವಂಥ ಜನರು ಯಾರೆಂದರೆ ಯಾರು ಯೋಗ್ಯರಾಗಿರುತ್ತಾರೋ ಯಾರು ಜನಾನುರಾಗಿಗಳಾಗಿರುತ್ತಾರೋ ಯಾರು ತಮ್ಮ ಒಂದು ನಿಸ್ವಾರ್ಥಸೇವೆಯನ್ನು ಈ ಜಿಲ್ಲಾ ಬೋರ್ಡುಗಳ ಏಳಿಗೆಗಾಗಿ ಸಲ್ಲಿಸುತ್ತಾರೋ, ಯಾರು ಸದಾ ಜನರ ಹಿತವನ್ನೇ ಕೋರುತ್ತಿರುತ್ತಾರೋ ಅಂಥವರಿಗಾಗಿ ಈ ಸ್ಥಾನಗಳನ್ನು ಮುಡುಪಾಗಿಡಬೇಕು. ಇಂಥ ಉಮೇದುವಾರರನ್ನೇ ನೋಡಿ ಆರಿಸಿ ಚುನಾವಣೆ ಮಾಡಬೇಕಾಗಿದೆಯೇ ಹೊರತು ಇದರಲ್ಲಿ ನಾವು ಈ ಒಂದು ರಾಜಕೀಯ ಗೊಂದಲವನ್ನು ತಂದು ಹಾಕಬಾರದು ಎಂದು ನಾನು ಇಲ್ಲಿಗೆ ಮೂರು ವರ್ಷಗಳಿಂದಲೂ ಒಂದೇ ಸಮನಾಗಿ ವಾದಿಸುತ್ತಾ ಬಂದಿದ್ದೇನೆ. ಈಗ ತಾವು ಪ್ರತಿಯೊಂದು ತಾಲ್ಲೂಕಿನಿಂದಲೂ ಮೂರು ಮೂರು ಜನಗಳನ್ನು ಚುನಾವಣೆಗೆ ನಿಲ್ಲಿಸಬೇಕೆಂದು ಹೇಳಿದ್ದೀರಿ. ಹೀಗೆ ಜನರು ಚುನಾವಣೆಗೆ ನಿಂತರೆ ಇದರ ಪರಿಣಾಮವೇನಾಗುತ್ತದೆಂಬುದು ತಮಗೆಲ್ಲರಿಗೂ ಗೊತ್ತಿರುವುದೇ ಆಗಿದೆ. ಈ ದಿವಸ ಯಾವುದಾದರೂ ಹತ್ತು ಜನರು ಚುನಾವಣೆಯಾಗಿ ಬರತಕ್ಕಂಥ ಒಂದು ಮೈನರ್ ಮುನಿಸಿಪಾಲಿಟಿಯ ವಿಚಾರವನ್ನೇ ತೆಗೆದುಕೊಳ್ಳೋಣ. ಹಾಗೆ ಕೇವಲ ಹತ್ತು ಜನರು ಚುನಾವಣೆಯಾಗಿ ಬರಬೇಕಾಗಿರುವಂಥ ಸ್ಥಾನಗಳಿಗೆ ಈ ದಿವಸ 10, 15, 20 ಜನಗಳು ಚುನಾವಣೆಗೆ ನಿಲ್ಲುವುದು ಕಂಡುಬರುತ್ತಾ ಇದೆ. ಇದರಿಂದ ಕೆಲವರಿಗೆ ಹೆಚ್ಚಿನ ಒಂದು ಸಂಖ್ಯಾಬಲದ ಬೆಂಬಲವಿದ್ದಾಗ್ಯೂ ಅವರು ಚುನಾವಣೆಗಳಲ್ಲಿ ಜಯಶೀಲರಾಗಿ ಬರುವುದಕ್ಕೆ ಅವಕಾಶವಿಲ್ಲದೆ ಕೇವಲ ಕಮ್ಮಿ ಸಂಖ್ಯಾಬಲದ ಜನರು ಚುನಾವಣೆಯಾಗಿ ಬರುತ್ತಿರುವಂಥಾ ನಿದರ್ಶನವನ್ನು ನಾವು ನೋಡುತ್ತಿದ್ದೇವೆ. ಈ ವಿಚಾರವನ್ನು ಕೂಡ ನಾನು ಹೇಳುತ್ತಿಲ್ಲ. ಇದನ್ನು ನಿಮ್ಮ ಪಾರ್ಟಿಗೆ ಸೇರಿರತಕ್ಕಂಥ ಶ್ರೀ ಭೀಮಪ್ಪನಾಯಕರೇ ಹೇಳಿದ್ದಾರೆ. ನಾನು ಈ ಬಗ್ಗೆ ಇಷ್ಟು ವರ್ಷಗಳಿಂದಲೂ ಪ್ರಯತ್ನಪಟ್ಟಿದ್ದೆಲ್ಲಾ ನೀರಿನಲ್ಲಿ ಹೋಮಮಾಡಿದಂತಾಯಿತು. ಆದರೆ ಇಂಗ್ಲೀಷಿನಲ್ಲಿ ಒಂದು ಮಾತನ್ನು ಹೇಳುತ್ತಾರೆ, A man who is going down deep in waters will try to catch the last straw ಎಂದು ಹೇಳುತ್ತಾರಲ್ಲ ಹಾಗೆಯೇ ಈ ದಿವಸ ನನ್ನ ಗತಿ ಸಹ ಆಗಿರುತ್ತೆಂದು ನಾನು ಹೇಳದೆ ವಿಧಿಯಿಲ್ಲ. ನಾನೀ ದಿವಸ ಆ last straw ಹಿಡಿದುಕೊಂಡಂತೆ ಶ್ರೀ ಭೀಮಪ್ಪನಾಯಕರನ್ನು ಹಿಡಿದುಕೊಂಡು ಮುಂದಕ್ಕೆ ಹೋಗಬೇಕಾಗಿದೆ. ಈ ರೀತಿಯಾಗಿ ಮನಸ್ಸುಮಾಡಿಕೊಂಡಿದ್ದೇನೆ ; ಆದರೆ ಇದೂ ಕೂಡ ನನ್ನ ಒಂದು ಅದೃಷ್ಟವೆಂದೇ ಹೇಳಬೇಕಾಗಿದೆ. ಆದರೆ ಈಗ ನನ್ನ ಆಶ್ರಯಕ್ಕೆ ಸಿಕ್ಕಿರುವಂಥ ಮಾನ್ಯ ಸದಸ್ಯರು last straw ಇದ್ದ ಹಾಗೇನೂ ಅಲ್ಲ. ಅವರು ನನಗೆ ಒಂದು ದೊಡ್ಡ ಪರ್ವತವೇ ಸಿಕ್ಕಿದಹಾಗೆ ಸಿಕ್ಕಿದ್ದಾರೆ. ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಭೀಮಪ್ಪನಾಯಕರು ಹೇಳಿರುವ ಪ್ರಕಾರ ಈ ಮೂರು ಜನರನ್ನು ವಿಂಗಡಣೆಮಾಡಿ ಇವರಿಗೆ ಒಂದು ತಾಲ್ಲೂಕನ್ನು ಒಂದು ಚುನಾವಣಾಕ್ಷೇತ್ರವನ್ನಾಗಿ ವಿಂಗಡಣೆ ಮಾಡಿರತಕ್ಕದ್ದು ಸರಿಯಲ್ಲ. ಇದಕ್ಕೆ ಬದಲಾಗಿ ಅವರು ಒಂದೆರಡು ಹೋಬಳಿಗಳನ್ನು ಒಂದಾಗಿ ಸೇರಿಸಿ ಒಂದು ಚುನಾವಣಕ್ಷೇತ್ರ ಎಂತಲಾದರೂ ಮಾಡಿ ಎಂಬುದಾಗಿ ಹೇಳಿದ್ದಾರೆ. ಆದುದರಿಂದ ಪುನಃ ನಾನೂ ಕೂಡ ಅದನ್ನೇ ಮತ್ತೆ ಹೇಳಿದರೆ ಅದು ಚೆನ್ನಾಗಿರುವುದಿಲ್ಲ. ಈ ಸಂದರ್ಭದಲ್ಲೇ ನಾನೂ ಕೂಡ ಒಂದೆರಡು ಮಾತುಗಳನ್ನು ಆಡಬೇಕೆಂದಿದ್ದೇನೆ. ಯಾವಾಗಲೂ ಈ ಚುನಾವಣಕ್ಷೇತ್ರಕ್ಕೂ ಮತ್ತು ಚುನಾಯಿಸಲ್ಪಡತಕ್ಕಂಥ ಉಮೇದುವಾರನಿಗೂ ಬಹಳ ನಿಕಟವಾದಂಥ ಒಂದು ಸಂಪರ್ಕವಿರಬೇಕು, ಬಾಂಧವ್ಯ ಇರಬೇಕು. ಅವರವರಿಗೆ ಅಷ್ಟು ಪ್ರೀತಿ ವಿಶ್ವಾಸಗಳಿರಬೇಕು ಅನ್ನುವುದು ಒಂದು ಪ್ರಜಾಪ್ರಭುತ್ವ ನೀತಿಯಲ್ಲಿ ಅಡಕವಾಗಿರುವಂಥ ತತ್ವ ಮತ್ತು ಒಂದು ದೊಡ್ಡ ಸಿದ್ಧಾಂತ. ಯಾವಾಗಲೂ ಈ ಒಂದು ಚುನಾವಣಕ್ಷೇತ್ರ ದೊಡ್ಡದಾದಷ್ಟೂ ಈ ನಿಕಟಸಂಪರ್ಕ ಮತ್ತು ಬಾಂಧವ್ಯಗಳು ದಿನ ದಿನಕ್ಕೂ ಕಮ್ಮಿಯಾಗುತ್ತಾ ಹೋಗುತ್ತದೆ. ಇನ್ನು ಈ ಚುನಾವಣೆಯ ಸಂಬಂಧದಲ್ಲಿ ಆಗಬಹುದಾದಂಥ ಖರ್ಚು ವೆಚ್ಚಗಳೂ ಕೂಡ ಪೂರಾ ಅಧಿಕವಾಗುತ್ತವೆ. ಜನರೆಲ್ಲರ ಅಂದರೆ ಅಷ್ಟೊಂದು ಅಗಾಧವಾದ ಪ್ರದೇಶದಲ್ಲಿರತಕ್ಕಂಥ ಜನರ ಬಾಂಧವ್ಯ ಬೆಳೆಸಲು ಬಹಳ ಕಷ್ಟವಾಗುತ್ತದೆ. ಆದರೆ ಈ ಚುನಾವಣಾಕ್ಷೇತ್ರದ ವ್ಯಾಪ್ತಿ ಕಡಮೆಯಾದಷ್ಟೂ ಈ ನಿಕಟ ಸಂಬಂಧ ಮತ್ತು ಬಾಂಧವ್ಯಗಳು ಹೆಚ್ಚಾಗುತ್ತವೆ. ಅಂದರೆ ಹೀಗೆ ಈ ಚುನಾವಣಕ್ಷೇತ್ರಗಳು ದೊಡ್ಡದಾದ ಹಾಗೆಲ್ಲಾ ಜನರಲ್ಲಿ ಸಂಬಂಧ ಕಮ್ಮಿಯಾಗುತ್ತಾ ಹೋಗುತ್ತದೆ. ಈ ದಿವಸ ತಾವು ಪ್ರತಿಯೊಂದು ತಾಲ್ಲೂಕನ್ನೂ ಒಂದೊಂದು ಚುನಾವಣಾಕ್ಷೇತ್ರವನ್ನಾಗಿ ಮಾಡಿ ಮೂರು ಜನಗಳಿಗೆ ಚುನಾಯಿತರಾಗಿ ಬರಲು ಅವಕಾಶವಿದೆಯೆಂದು ಹೇಳಿದ್ದೀರಿ. ಇದರಿಂದ ಕೇವಲ ಒಂದು ರಾಜಕೀಯ ಪಕ್ಷಕ್ಕೆ ಬೆಂಬಲ ನೀಡಬೇಕೆಂಬ ದೃಷ್ಟಿ ಕಾಣುತ್ತಿದೆಯೇ ಹೊರತು ಪ್ರಜಾ ಬೆಂಬಲಿಗರಿಗೆ ಮತ್ತು ಸ್ಥಳದಲ್ಲಿರತಕ್ಕಂಥ ಯೋಗ್ಯ ಜನಗಳಿಗೆ ಅವಕಾಶ ಕೊಟ್ಟಹಾಗೆ ಕಂಡುಬರುವುದಿಲ್ಲ. ಇಷ್ಟೇ ಅಲ್ಲದೆ ಹೀಗೆ ಚುನಾವಣಕ್ಷೇತ್ರಗಳನ್ನು ದೊಡ್ಡ

ದನ್ನಾಗಿ ಮಾಡುತ್ತಾ ಹೋದರೆ ಆಗ ಆ ಪ್ರದೇಶವಲ್ಲಿ ಯಾರು ಯೋಗ್ಯರು, ಯಾರು ಪ್ರಜಾ ಹಿತೈಷಿಗಳು, ಯಾರು ಜನಾನುರಾಗಿಗಳು, ಯಾರು ನಿಷ್ಪಕ್ಷಪಾತವಾದ ರೀತಿಯಲ್ಲಿ ಪ್ರಜಾಸೇವೆ ನಡೆಸಬಲ್ಲರು, ಎನ್ನುವುದನ್ನು ಕಂಡುಹಿಡಿಯಲು ತುಂಬ ತೊಡಕುಗಳುಂಟಾಗುತ್ತವೆ. ಹೀಗೆ ಈ ಚುನಾವಣೆಗಳ ನಾನಾ ತೊಡುಕುಗಳ ಬಗ್ಗೆ ಇದೂ ಒಂದು ದೊಡ್ಡ ಕಾರಣವಾಗಿದೆ. ಆದರೆ ಈ ವಿಚಾರವನ್ನು ನಾನಿನ್ನೂ ಲಂಬಿಸಿ ಹೇಳುವು ದಕ್ಕೆ ಇಷ್ಟಪಡುವುದಿಲ್ಲ. ಆದರೆ ಈಗಾಗಲೇ ಶ್ರೀ ಭೀಮಪ್ಪನಾಯಕರು ಏನು ಹೇಳಿದ್ದಾರೋ ಅದನ್ನು ಮಾನ್ಯ ಮಂತ್ರಿಗಳು ಕಾರ್ಯಗತವಾಡುತ್ತಾರೆಂದು ನಾನು ಭಾವಿಸಿದ್ದೇನೆ. ಈ ಚುನಾವಣೆಗಳು ಯಾವ ರೀತಿಯಾಗಿ ಆಗಬೇಕೆಂಬ ಬಗ್ಗೆ ನಾನೀಗ ತಮಗೆ ಕೆಲವು ಸಲಹೆಗಳನ್ನು ಕೊಡಬೇಕೆಂದಿದ್ದೇನೆ. ಈಗ ತಮ್ಮ ಮಸೂದೆಯಲ್ಲಿ ಹೇಳಿರುವ ಪ್ರಕಾರ ಮುನಿಸಿಪಲ್ ಪ್ರದೇಶ ಒಂದನ್ನು ಬಿಟ್ಟು ತಾಲ್ಲೂಕಿನಲ್ಲಿ ಉಮೇದು ವಾರನಾಗಿ ನಿಲ್ಲತಕ್ಕಂಥ ಮನುಷ್ಯನು ಎಲ್ಲಿಯಾದರೂ ವಾಸವಾಗಿರಲಿ ಆತನಿಗೆ ಯಾವ ತಾಲ್ಲೂಕಿನಲ್ಲಿ ಬೇಕಾ ಗಿದ್ದರೂ ಈ ಚುನಾವಣೆಗಳಿಗೆ ನಿಲ್ಲಬಹುದು ಎಂದು ಹೇಳುವ ಒಂದು ಅಧಿಕಾರವನ್ನು ಈಗ ಈ ಮಸೂದೆ ಯಲ್ಲಿ ತಾವು ಕೊಟ್ಟಿದ್ದೀರಿ. ಇದನ್ನು ನಾನು ತೀವ್ರ ವಾಗಿ ವಿರೋಧಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಇದನ್ನೆಲ್ಲಾ ನಾವೇ ನೂ ಮಾಡಿಲ್ಲ.

ಶ್ರೀ ಕೆ. ಪಟ್ಟಾಭಿರಾಮನ್.—ಹೌದು, ನೀವು ತಂದಿಲ್ಲ. ಆದರೆ ನೀವು ಒಂದು ಸೂಕ್ತ ತಿದ್ದುಪಡಿಯನ್ನು ಬಗ್ಗೆ ತರಬೇಕಾಗಿತ್ತು. ಈಗ ಮುನಿಸಿಪಲ್ ಇದರ ಅಥವಾ ಕಾರ್ಪೊರೇಷನ್ ಆಕ್ಟ್‌ಗಳನ್ನೇ ತೆಗೆದು ಕೊಳ್ಳೋಣ. ಅಲ್ಲಿ ತಾವು ಉಮೇದುವಾರರಾಗಿ ನಿಲ್ಲು ವಂಥ ಅವಕಾಶವನ್ನೇನಿದ್ದರೂ ಕೇವಲ ಆ ಸಂಬಂಧ ಪಟ್ಟ ಸರಹದ್ದಿನೊಳಗಿರತಕ್ಕವರಿಗೆ ಮಾತ್ರ ಕೊಟ್ಟಿ ದ್ದೀರೇ ಹೊರತು ಅನ್ಯರಿಗೆ ಆ ಅವಕಾಶವಿಲ್ಲ. ಅದ ರಂತೆಯೇ ತಾವೀಗ ಈ ಮುನಿಸಿಪಲ್ ಸರಹದ್ದಿನೊಳಗಿ ರುವಂಥ ಯಾವ ಒಬ್ಬ ಮನುಷ್ಯನಾಗಲೀ ಒಂದು ಹಳ್ಳಿಗೆ ಹೋಗಿ ಪಂಚಾಯಿತಿ ಚುನಾವಣೆಗೆ ನಿಲ್ಲುವು ದಕ್ಕೆ ಅವಕಾಶವಿಲ್ಲ ಎಂದು ಹೇಳಿದ್ದೀರಿ. ತಮಗೆ ನಿಜ ವಾಗಿಯೂ ಅಂಥ ಒಂದು ಪ್ರಗತಿಪರವಾದ ರೀತಿಯಲ್ಲಿ ಈ ಸ್ಥಳೀಯ ಸಂಸ್ಥೆಗಳ ವಿಚಾರದಲ್ಲಿ ಒಂದು ಹೆಜ್ಜೆ ಮುಂದೆಹಾಕಬೇಕೆಂಬ ಆಕಾಂಕ್ಷೆ ಇರುವುದಾದರೆ ತಾವು ಈ ಟೌನ್ ಪ್ರದೇಶದಲ್ಲಿರುವ ಜನಗಳಿಗೆ ಇದರಲ್ಲಿ ಯಾವ ಪ್ರಾಬಲ್ಯವನ್ನೂ ಕೊಡಬಾರದು... .....

ಶ್ರೀ ಎ. ಭೀಮಪ್ಪನಾಯಕ್.—ಟೌನ್ ಪ್ರದೇಶ ದಲ್ಲಿರತಕ್ಕಂಥವರಿಗೆ ಇದರಲ್ಲಿ ಕೈಹಾಕಲು ಅವಕಾಶವಿರ ಬಾರದು. ಇದನ್ನು ತಪ್ಪಿಸಿ ಎಂದು ಹೇಳಿದೆ.

ಶ್ರೀ ಕೆ. ಪಟ್ಟಾಭಿರಾಮನ್.—ಈಗ ನಾನೂ ಮತ್ತು ಅವರೂ ಇಬ್ಬರೂ ಬಹಳ ಹತ್ತಿರ ಹತ್ತಿರವಾಗಿ ಹೋಗು ತ್ತಿದ್ದೇವೆ. ಈ ಜಿಲ್ಲಾಬೋರ್ಡುಗಳ ಚುನಾವ ಣೆಗೆ ಬಹಳ ಅಧಿಕ ಸಂಖ್ಯೆಯಲ್ಲಿ ಆ ಹಳ್ಳಿಗಾಡಿನ ಜನರು ಮಾತ್ರ ನಿಲ್ಲಲು ಅರ್ಹರಾಗಿರುತ್ತಾರೆ ಶಿವಾಯಿ ಇತರ ರಿಗೆ ಅವಕಾಶವಿಲ್ಲವೆಂದು ಹೇಳುವಂಥ ರೀತಿಯಲ್ಲಿ ತಾವು ಈ 51ನೆಯ ಸೆಕ್ಷನ್ನನ್ನು ತಿದ್ದುಪಡಿಮಾಡಬೇಕಾಗಿದೆ. ಆದರೆ ಇದನ್ನು ಹೀಗೆ ತಿದ್ದುಪಡಿಮಾಡಿದರೆ ಬಹಳ ಜನ ರಿಗೆ ಅಸಮಾಧಾನವಾಗಬಹುದು, ಆದರೂ ಚಿಂತೆಯಿಲ್ಲ ಅವರನ್ನು ಸಮಾಧಾನಪಡಿಸಿಕೊಳ್ಳತಕ್ಕ ಆತುರದಲ್ಲಿ ತಾವು ಎದುರುಪಕ್ಷದ ವರ್ಗದ ಧ್ವನಿ ವೃದ್ಧಿಹೊಂದುವು ದಕ್ಕೆ ಮಾತ್ರ ಅವಕಾಶ ಮಾಡಿಕೊಳ್ಳಬೇಡಿ. ಹೀಗೆ ತಾವು ತಮ್ಮ ವರ್ಗದಲ್ಲಿ ಒಂದು ಪಕ್ಷದ ಹಿತಕ್ಕಾಗಿ ಅವರನ್ನು ಜಿಲ್ಲಾಬೋರ್ಡು ಅಧ್ಯಕ್ಷತನಕ್ಕಾಗಿ ನಿರ್ವಾಣಮಾಡಲು ಒಂದು ಜಿಲ್ಲಾಧ್ಯಕ್ಷರ ವರ್ಗವನ್ನು ಬೆಳಸಲು ತಾವು ದೇಶಕ್ಕೆ ಬಂದಂಥ ಸ್ವಾತಂತ್ರ್ಯವನ್ನು ಸೂರೆಮಾಡಬೇ ಕೆಂದು ಇಷ್ಟಪಟ್ಟಿದ್ದೀರಾ ಎಂದು ಕೇಳುತ್ತೇನೆ? ನಿಜವಾಗಿಯೂ ಈ ಪ್ರಜಾಪ್ರಭುತ್ವ ನೀತಿಗಳಿಗೆ ಅನುಗುಣವಾಗಿ ಮುಂದುವರೆಯಬೇಕೆಂಬ ಆಕಾಂಕ್ಷೆ ತಮಗೆ ಇದ್ದಿದ್ದೇ ಆದರೆ ಈ ತಾಲ್ಲೂಕು ನಗರಗಳಲ್ಲಿರ ತಕ್ಕಂಥ ಜನರಿಗೆ ಈ ಜಿಲ್ಲಾಬೋರ್ಡು ಚುನಾವಣೆಗ ಳಿಗೆ ನಿಲ್ಲಲು ಅವಕಾಶ ಕೊಡದಂತೆ ಮಾಡಬೇಕು, ಅವ ರಿಗೆ ಖಂಡಿತ ಅವಕಾಶವಿರಬಾರದು. ಈಗ ತಾವು ಈ ಗ್ರಾಮಪಂಚಾಯಿತಿಗಳಿಗೆ ಯಾವ ರೀತಿಯಾಗಿ ಈ ನಿಯ ಮಗಳನ್ನು ವಿಧಾಯಕಮಾಡಿದ್ದೀರೋ ಇದಕ್ಕೂ ಅದೇ ರೀತಿ ಮಾಡಬೇಕಾಗಿದೆ. ಈಗ ಒಬ್ಬ ಎಲ್ಲೋ ಇರತ ಕ್ಕಂಥ ಮನುಷ್ಯನು ಬಂದು ಯಾವುದೇ ಒಂದು ಪಂಚಾ ಯಿತಿಗೂ ಚುನಾವಣೆಗೆ ನಿಲ್ಲಲು ಸಾಧ್ಯವಿಲ್ಲ. ಆದಾಗ್ಯೂ ತಾವೀಗ ಕೆಲವು ವ್ಯಕ್ತಿಗಳ ಪ್ರಾಬಲ್ಯವನ್ನು ಬೆಳೆಸುವು ದಕ್ಕಾಗಿ ಈ ರೀತಿ ಮಾಡಿಕೊಂಡು ಬಂದಿದ್ದೀರಿ. ಆದರೆ ಈಗಾಗಲೇ ಆ ಹಳ್ಳಿ ಜನರಿಗೆ ಯಾವ ರೀತಿಯಾಗಿ ಈ ಅಸೆಂಬ್ಲಿಯಲ್ಲಿ ಕುಳಿತು ಉಪಕಾರ ಮಾಡುತ್ತಿದ್ದೀರಿ ಎನ್ನುವುವನ್ನು ಇಡೀ ದೇಶವೇ ನೋಡಿ ಆನಂದಪಡು ತ್ತಿದೆ............

ಶ್ರೀ ಜಿ. ಎ. ತಿಮ್ಮಪ್ಪಗೌಡ.—ತಮ್ಮಹಾಗೆ ಪಟ್ಟಣ ಗಳಲ್ಲಿರತಕ್ಕಂಥ ಯಾರೋ ಒಬ್ಬರು ಹಳ್ಳಿಗೆ ಹೋಗದೆ ಇದ್ದರೆ ಬಾಕಿ ಪಟ್ಟಣದಲ್ಲಿರತಕ್ಕವರಿಗೆಲ್ಲಾ ಆ ಹಳ್ಳಿಯ ವಿಚಾರವೇ ಗೊತ್ತಿಲ್ಲವೆಂದು ಹೇಳುತ್ತೀರಾ?

ಶ್ರೀ ಕೆ ಪಟ್ಟಾಭಿರಾಮನ್.—ಈ ಪ್ರಜಾಪ್ರಭುತ್ವಾ ಡಳಿತದ ಮೂಲಭೂತ ತತ್ವಗಳೇನೆಂಬುದನ್ನೇ ಶ್ರೀ ತಿಮ್ಮಪ್ಪಗೌಡರು ಸರಿಯಾಗಿ ಅರ್ಥಮಾಡಿಕೊಂಡಿಲ್ಲ ವೆಂದು ನಾನು ಅವರಿಗೆ ತಿಳಿಸಬೇಕಾಗಿದೆ. ಈ ಪ್ರಜಾ ಪ್ರಭುತ್ವದಲ್ಲ ಪ್ರಾತಿನಿಧ್ಯಕ್ಕೆ ಇರತಕ್ಕಂಥ ಮುಖ್ಯ ತಿರುಳು ಮತ್ತು ಆ ಮೂಲಭೂತವಾದಂಥ ತತ್ವ ಯಾವು ದೆಂದರೆ, ಜನ ಬೆಂಬಲವನ್ನು ಯಾರು ಹೆಚ್ಚಿಗೆ ಗಳಿಸಿ ಕೊಂಡಿರುತ್ತಾರೋ, ಯಾರು ಹೆಚ್ಚು ಪ್ರಜಾನುರಾಗಿಗ ಳಾಗಿರುತ್ತಾರೋ ಅಂಥಾ ವ್ಯಕ್ತಿಗೇ ಈ ಪ್ರಾತಿನಿಧ್ಯ ಹೆಚ್ಚಾಗಿ ದೊರೆಯಬೇಕೆಂದು ಹೇಳತಕ್ಕದ್ದೇ ಆ ಮೂಲ ಭೂತ ತತ್ವದ ತಿರುಳು. ಆದರೆ ನಾನು ಕಲ್ಕತ್ತಾದಲ್ಲಿ ವಾಸವಾಗಿದ್ದರೂ ಈ ಸ್ಥಾನಗಳಿಗೆ ಒಬ್ಬ ಪ್ರತಿನಿಧಿ ಯಾಗಿ ನಿಲ್ಲಲು ಸಾಧ್ಯವಿದೆ. ಆದುದರಿಂದ ತಾವು ಈ ಜಿಲ್ಲಾಬೋರ್ಡುಗಳ ಕೆಲಸಕಾರ್ಯಗಳು ಮತ್ತು ಅವು ಗಳ ರಚನೆ ಮಾತ್ರ ಅವುಗಳ ರೂಪರೇಖೆಗಳು ಯಾವ ಈ ಪ್ರಜಾಪ್ರಭುತ್ವದ ಮೂಲಭೂತ ತತ್ವಗಳವೆಯೋ ಅವುಗಳಿಗೆ ಅನುಗುಣವಾಗಿ ಹೊಂದಾಣಿಕೆಯಾಗಿರು ವಂತೆ ಮಾಡಲೇಬೇಕೆಂಬ ಆಸೆ ತಮಗೆ ಇರುವುದಾದರೆ ಈ ಟೌನುಗಳಲ್ಲಿರತಕ್ಕಂಥಾ ಜನರಿಗೆ ಈ ಚುನಾವಣೆಗ ಳಲ್ಲಿ ಭಾಗವಹಿಸಲು ಅವಕಾಶವಿರಲೇಬಾರದು. ಶ್ರೀ ಎ. ಭೀಮಪ್ಪನಾಯಕರು ಈ ವಿಚಾರವನ್ನು ಅವರದೇ ಆದಂಥ ಶೈಲಿಯಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ತಾವು ಈ ಟೌನಿನಲ್ಲಿರತಕ್ಕಂಥ ಜನರಿಗೆ ಅವಕಾಶ ಕೊಟ್ಟರೆ ನಮ್ಮ ಲಾಯರುಗಳಿಗೆ ಹೆಚ್ಚು ಅವಕಾಶ ಕೊಟ್ಟಹಾಗೆ ಆಗುತ್ತದೆ. ಆಗ ಇವರೇ ಹೆಚ್ಚು ಹೆಚ್ಚಾಗಿ ಬರಲು ಅವಕಾಶವಾಗಿ ಆ ಹಳ್ಳಿ ಜನರಿಗೆ ಅವಕಾಶವೇ ಇಲ್ಲದಂತಾಗುತ್ತದೆ. ಆದರೆ ತಾವು ಯಾವಾಗ ಶ್ರೀ ವಿ. ವೆಂಕಟಪ್ಪನವರ ಮತ್ತು ಶ್ರೀ ಡಿ. ಎಚ್. ಚಂದ್ರ ಶೇಖರಯ್ಯನವರ ಕಮಿಟಿಗಳ ರಿಪೋರ್ಟನ್ನು ಮೂಲೆಗೆ ತಳ್ಳುವುದಕ್ಕೆ ಪ್ರಯತ್ನಮಾಡಿದಿರೋ ಆಗಲೇ ತಮ್ಮ ಅಭಿ

(ಶ್ರೀ ಕೆ. ಪಟ್ಟಾಭಿರಾಮನ್.)

ಪ್ರಾಯವೇನೆಂಬುದು ಎಲ್ಲರಿಗೂ ತಿಳಿದು ಹೋಯಿತು. ತಮ್ಮ ಭಾವನೆ ಬೆಕ್ಕು ಕಣ್ಣುಮುಚ್ಚಿಕೊಂಡು ಹಾಲನ್ನು ಕುಡಿದರೆ ಯಾರೂ ಕಾಣಲಿಲ್ಲ ಅನ್ನುವಂತೆ ತಾವು ಭಾವಿಸಿದ್ದೀರಿ. ಆದರೆ ಇದರ ಪರಿಣಾಮ ಏನೂ ಆಗಲಾರದೆಂದು ತಾವು ಭಾವಿಸಬಾರದು. ನಾನಂತೂ ಈ ಪ್ರತ್ಯಕ್ಷ ಚುನಾವಣೆಯನ್ನು ಅತಿ ತೀವ್ರವಾಗಿ ವಿರೋಧಿಸುತ್ತೇನೆ.

Sri Kadidal MANJAPPA.—So you are for indirect election, is it?

ಶ್ರೀ ಕೆ. ಪಟ್ಟಾಭಿರಾಮನ್.—ಇಲ್ಲ. ನಾನು ಇದೇ ವಿಚಾರವನ್ನು ಮೂರು ವರ್ಷಗಳಿಂದಲೂ ಹೇಳುತ್ತಿದ್ದೇನೆ.

ಇನ್ನು ಮೂರನೆಯದಾಗಿ ನಾನು ಈಗ ತವಾಗೆ ಈ ಬಿಲ್ಲಿನ ಬಗ್ಗೆ 2-3 ಸಲಹೆಗಳನ್ನು ಮಾತ್ರ ಕೊಡಬೇಕೆಂದಿದ್ದೇನೆ. ತಾವು ಈಗ ಈ 9ನೆಯ ಸೆಕ್ಷನ್ನಿನಲ್ಲಿ ಚುನಾವಣೆ ಆದನಂತರ ಒಬ್ಬ candidate ಏನಾದರೂ ಅಕ್ರಮನಡೆಸಿದ್ದರೆ ಒಂದು ತಕರಾರನ್ನು ಸಬಾರ್ಡಿನೇಟ್ ಜಡ್ಜ್‌ರವರಲ್ಲಿ ಹಾಕಬಹುದು ಎಂತ ಹೇಳಿದ್ದೀರಿ. ಈ ಸೆಕ್ಷನ್ನಿನಲ್ಲಿ ತಾವು ಹೀಗೆ ಹೇಳಿದ್ದೀರಿ: by the improper acceptance or rejection of a nomination paper ಎಂದು ಹೇಳಿದ್ದೀರಿ. ಅಂದರೆ ಈ ಚುನಾವಣೆಗಳು ಕಳೆದುಹೋದನಂತರ ಬರತಕ್ಕಂಥ ಈ ಎಲೆಕ್ಷನ್ ಪೆಟಿಷನ್‌ಗಳನ್ನು ಈ ಜಡ್ಜ್‌ರವರಲ್ಲಿ ಅಪೀಲ್ ಹಾಕಿಕೊಳ್ಳಬಹುದೆಂದು ಹೇಳಿದೆ. ಆದರೆ ಮೊನ್ನೆ ಕಳೆದ ಚುನಾವಣೆಗಳಲ್ಲಿ ಇದರ ಪರಿಣಾಮ ಆ ಟ್ರಿಬ್ಯುನಲ್‌ನವರ ಮುಂದೆ ಏನಾಯಿತೆಂಬ ವಿಚಾರ ಎಲ್ಲರಿಗೂ ತಿಳಿದೇ ಇದೆ. ಯೋಗ್ಯರ ಅರ್ಜಿಗಳು ತಿರಸ್ಕಾರವಾಗಿಹೋಗಿ ಯಾರು ಯೋಗ್ಯರಲ್ಲವೋ ಮತ್ತು ಯಾರ ಅರ್ಜಿಯನ್ನು ನಿರಾಕರಣೆಮಾಡಬಹುದಾಗಿತ್ತೋ ಅಂಥವರ ಅರ್ಜಿಗಳನ್ನೆಲ್ಲಾ ಅಂಗೀಕಾರಮಾಡಿದ್ದರೂ ಕಾಯಬೇಕು. ಆದ್ದರಿಂದ ತಾವು ಇದನ್ನು ಬದಲಾವಣೆ ಮಾಡಬೇಕು. ಇದರಿಂದ ಬಹಳ ತೊಂದರೆ ಆಗುತ್ತದೆ.

ಸೆಂಟ್ರಲ್ ಪಾರ್ಲಿಮೆಂಟಿನಲ್ಲಿ ಇದಕ್ಕೆ ಸಂಬಂಧಪಟ್ಟ ತಿದ್ದುಪಡಿ ತರುವುದಕ್ಕೆ ಪ್ರಯತ್ನ ನಡೆಯುತ್ತಿದೆ ಎಂದು ನಾನು ಕೇಳಿದ್ದೇನೆ. ಅಲ್ಲಿ ಹಾಗಿರುವಾಗ, ಮಹಾ ಚುನಾವಣೆಗಳ ಅನುಭವ ನಮಗೆ ಇರುವಾಗ ಕೇಂದ್ರ ಸರ್ಕಾರದವರು ಕೂಡ ಇದಕ್ಕೆ ಸಂಬಂಧಪಟ್ಟ ತಿದ್ದುಪಡಿ ಈಗಾಗಲೇ ಮಾಡಬೇಕು ಎಂಬ ಅಭಿಪ್ರಾಯ ಹೊಂದಿರುವಾಗ, ಇಲ್ಲಿಯೂ ಕೂಡ ಹಾಗೆಯೇ ಮಾಡಿ ಚುನಾವಣೆಗಳು ಆಗುವವರೆಗೆ ಕಾದಿದ್ದು ನಂತರ ಒಂದು ತಕರಾರು ಅರ್ಜಿಯನ್ನು ತನ್ನ ಉಮೇದುವಾರಿಕೆ ಪತ್ರವನ್ನು ತಿರಸ್ಕರಿಸಿರುವುದು ಸರಿಯಲ್ಲವೆಂದು ಹಾಕಿ, ಆ ಅರ್ಜಿಯಮೇಲೆ ವಿಚಾರಣೆಯಾಗಿ ಈ ರೀತಿ ಅರ್ಜಿ ತಿರಸ್ಕರಿಸಿರುವುದು ಸರಿಯಲ್ಲವೆಂದು ಚುನಾವಣೆ ರದ್ದುಮಾಡಿದರೆ ಆಗ ಅದರಿಂದ ಖರ್ಚು ಎಷ್ಟು, ತೊಂದರೆ ಎಷ್ಟು ಆಗುತ್ತದೆ! ಅದಕ್ಕೋಸ್ಕರವಾಗಿ ಈ ಸೆಕ್ಷನ್ ಬದಲಾವಣೆಮಾಡಬೇಕು ಎಂದು ತಮ್ಮ ಗಮನಕ್ಕೆ ತರುತ್ತೇನೆ.

ಕೇಂದ್ರ ಸರ್ಕಾರದವರು ಇದಕ್ಕೆ ಸಂಬಂಧಪಟ್ಟ ಕಾನೂನಿಗೆ ಸೂಕ್ತವಾದ ತಿದ್ದುಪಡಿ ತರುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಮದರಾಸಿನಲ್ಲಿ ನಡೆದ ಒಂದು ಸಮಾಚಾರವನ್ನು ಸಭೆಯ ಗಮನಕ್ಕೆ ತರುತ್ತೇನೆ. ಅಲ್ಲಿ ಒಂದು ದೊಡ್ಡ ಪ್ರಮಾದವೇ ಆಯಿತು. ಅಲ್ಲಿ Legislative Councilಗೆ ಚುನಾವಣೆಯಾದಾಗ ತಿರಸ್ಕರಿಸಲ್ಪಟ್ಟ ಅರ್ಜಿದಾರರು Election tribunalಗೆ ಅರ್ಜಿಕೊಟ್ಟರು. ಅವರು Election ಪೂರ್ತಿಯಾಗುವವರೆಗೂ ಕಾದಿದ್ದರು. 10-12 ಜನರನ್ನು ಚುನಾಯಿಸಿದರು. ಇಷ್ಟಾದ ನಂತರ ಬಂದ ಒಂದು ತಕರಾರು ಅರ್ಜಿಯನ್ನು ಸ್ವೀಕರಿಸಿ ಅದನ್ನು ಪರಿಶೀಲಿಸಿ ಚುನಾವಣೆಗಳನ್ನು ರದ್ದುಮಾಡಿದರು. ಇದರ ಪರಿಣಾಮವಾಗಿ ಕೇಂದ್ರದಲ್ಲಿ ಒಂದು ತಿದ್ದುಪಡಿ ತರುವ ಪ್ರಯತ್ನಮಾಡುತ್ತಿದ್ದಾರೆ. ಈ ರೀತಿ ಮಾಡುವುದರಿಂದ ಇದರಲ್ಲಿ ಕಷ್ಟವೇನೂ ಕಾಣುವುದಿಲ್ಲ. Election Calender fix ಮಾಡುವಾಗ ಮಧ್ಯದಲ್ಲಿ interim order ಎಂದು Election Sub-Judge ಕೊಡಬಹುದು. Subordinate Judges ಎಲ್ಲಾ ಕಡೆಯೂ ಇರುವುದರಿಂದ ಚುನಾವಣೆಗಳು ನಡೆಯುವುದಕ್ಕೆ ಮುಂಚೆಯೇ ಇಂಥ ಅರ್ಜಿದಾರರು ಅರ್ಜಿ ಹಾಕಿ ಅದರ ಮೇಲೆ interim order ತರುವುದಕ್ಕೆ ಅವಕಾಶವಿರುತ್ತದೆ. ಈ ರೀತಿ ಮಾಡುವುದರಿಂದ ಚುನಾವಣೆಗಳು ನಡೆದ ನಂತರ ಅದನ್ನು ರದ್ದುಮಾಡಿದರೆ ಆಗತಕ್ಕ ಖರ್ಚುಗಳೆಲ್ಲವೂ ಉಳಿತಾಯವಾಗುತ್ತವೆ.

ಮೂರನೆಯ ಸಲಹೆ ವಿಷಯದಲ್ಲಿ ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ ಅದು ಏನೆಂದರೆ 106ನೆ ಸೆಕ್ಷನ್‌ಗೆ ಸಂಬಂಧಪಟ್ಟದ್ದು; ಎರಡನೆ ಭಾಗವನ್ನು ಇನ್ನುಮುಂದೆ ತೆಗೆದುಹಾಕಬೇಕು ಎಂದು ಹೇಳಿದೆ.

"106(2). The Government shall also assign to all the District Boards in the State an amount equal to six and one-fourth per-cent of the net land revenue collected in the State, the amount to be allotted to each District Board being such as the Government may from time to time determine."

ಇದರಲ್ಲಿ ಎರಡು ರೀತಿಯ ಅಸಮಾಧಾನಗಳಿವೆಯೆಂದು ಅಭಿಪ್ರಾಯಪಡುತ್ತೇನೆ. ಈ ರೀತಿ ಏನಾಯಿತಿ ಮಾಡಿಕೊಂಡು ಉಳಿದ ಹಣವನ್ನು ಯಾವ ರೀತಿ ಖರ್ಚು ಮಾಡುತ್ತಾರೆನ್ನುವುದಕ್ಕೆ ಪ್ರಾಸಂಗಿಕವಾಗಿ ಒಂದು ಸಲಹೆ ಕೊಟ್ಟಿದ್ದಾರೆಂದು ಮಾನ್ಯ ಸಭಾಪತಿಗಳು ಈಗಾಗಲೇ ತಿಳಿಸಿದ್ದಾರೆ. ಪ್ರಾಸಂಗಿಕವಾಗಿ ಕೊಟ್ಟಿರುವ ಸಲಹೆ ನಮಗೆ ಇಲ್ಲದ ಭಯವನ್ನುಂಟುಮಾಡಿದೆಯೆಂದು ಅಭಿಪ್ರಾಯಪಡುತ್ತೇನೆ. ಒಂದು ಕಾನೂನಿನ ಚೌಕಟ್ಟಿನಲ್ಲಿ ಕೆಲಸಮಾಡತಕ್ಕಂಥ ಒಂದು ಸಂಸ್ಥೆಗೆ ಬರುತ್ತಿದ್ದ ಹಣವನ್ನು ಮೊಟಕುಮಾಡಿ ಯಾವುದೋ ಒಂದು ಪರೋಕ್ಷವಾದ ರೀತಿಯಲ್ಲಿ ಅದನ್ನು ಖರ್ಚುಮಾಡುತ್ತೇವೆಂದು ಮಾನ್ಯ ಸಭೆಯ ಒಪ್ಪಿಗೆ ಕೇಳುತ್ತಿರುವುದನ್ನು ನೋಡಿದರೆ ಬಹಳ ವಿಚಿತ್ರವಾಗಿ ಕಾಣುತ್ತದೆ. ಕಾನೂನಿನ ಚೌಕಟ್ಟಿನಲ್ಲಿ ಇರತಕ್ಕ ಸಂಸ್ಥೆಯ ವರಮಾನವನ್ನು ಮೊಟಕುಮಾಡುವುದಕ್ಕೆ ಈ ಸಭೆಯ ಒಪ್ಪಿಗೆ ಕೇಳುತ್ತಿದ್ದೀರಲ್ಲಾ ಎಂದು ನನಗೆ ಆಶ್ಚರ್ಯವಾಗುತ್ತದೆ.

ಇನ್ನೊಂದು ದೃಷ್ಟಿಯನ್ನು ತಮ್ಮ ಗಮನಕ್ಕೆ ತರಬಯಸುತ್ತೇವೆ. ಈ ಹೊತ್ತು ಡಿಸ್ಟ್ರಿಕ್ಟ್ ಬೋರ್ಡುಗಳ ಕೆಲಸಕಾರ್ಯಗಳು ಎಷ್ಟಿವೆಯೆಂಬುದನ್ನು ಶ್ರೀ ಭೀಮಪ್ಪನಾಯಕರು ಬಹಳ ಚೆನ್ನಾಗಿ ವಿವರಿಸಿ ತಮ್ಮ ಅಭಿಪ್ರಾಯವನ್ನು ಕೊಟ್ಟರು. ಈಗ ಅನೇಕ ಡಿಸ್ಟ್ರಿಕ್ಟ್ ಬೋರ್ಡುಗಳು ಕಾನೂನಿನಲ್ಲಿರತಕ್ಕ obligatory duties ಕಡ್ಡಾಯ ಕೆಲಸದ ಜೊತೆಗೆ ಹೈಸ್ಕೂಲುಗಳನ್ನು ಕೂಡ ನಡೆಸುತ್ತಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ಹಾಗೂ ಮೈಸೂರು ಜಿಲ್ಲೆಯಲ್ಲಿ ಹೆಚ್ಚು ಹೈಸ್ಕೂ

ಲುಗಳನ್ನು ಡಿಸ್ಟ್ರಿಕ್ಟ್ ಬೋರ್ಡಿನವರೇ ನಡೆಸುತ್ತಿದ್ದಾರೆ. ಈ ಮಸೂದೆಯಾದ ಮೇಲೆ ಅವುಗಳ ವ್ಯಾಪ್ತಿಯೇನಾಗಬೇಕು ? ಆ ಸ್ಕೂಲುಗಳ ಖರ್ಚು ವೆಚ್ಚಗಳನ್ನು ಸರ್ಕಾರದವರಾದರೂ ವಹಿಸಿಕೊಳ್ಳುವುದಕ್ಕೆ ತಯಾರಾಗಿದ್ದಾರೆಂದು ಆಶ್ವಾಸನ ಕೂಡ ಬಂದಿಲ್ಲ. ಬರುತ್ತಿರುವ ದುಡ್ಡಿನಲ್ಲೇ ಏನೋ ಅಲ್ಪಸ್ವಲ್ಪ ಕೆಲಸಮಾಡುತ್ತಿರುವಾಗ ಈ ರೀತಿ ಶೇಕಡ $6\frac{1}{4}$ನ್ನು ತೆಗೆದುಹಾಕಿಬಿಟ್ಟರೆ, ಇನ್ನು ಅವುಗಳ obligatory ಕರ್ತವ್ಯಗಳನ್ನು ಹಾಗೂ ಹೈಸ್ಕೂಲುಗಳನ್ನು ನಡೆಸುವುದಕ್ಕೆ ಅವಕ್ಕೆ ಸಾಧ್ಯವಿದೆಯೋ ಇಲ್ಲವೋ ಎಂಬುದನ್ನು ಸರ್ಕಾರದವರು ಗಮನಿಸಿಲ್ಲವೆಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಈಗಲಾದರೂ ಈ ಬಗ್ಗೆ ತಮ್ಮಿಂದ ಸಮಂಜಸವಾದ ಉತ್ತರ ಬರುವುದಾದರೆ ನಾನು ಸಂತೋಷಪಡುತ್ತೇನೆ. ಆದರೂ ಒಟ್ಟಿನಲ್ಲಿ ಹೇಳುವುದಾದರೆ, ಈ ರೀತಿ ಶೇಕಡ $6\frac{1}{4}$ನ್ನು ತೆಗೆದುಹಾಕಬೇಕೆಂದಿರುವ ನಿಷೇಧ ಸರಿಯಾದದ್ದಲ್ಲ. ಎಲ್ಲೋ ಒಂದೆರಡು ಕಡೆ ಅದನ್ನು ಮಾಡಬಹುದೇ ಹೊರತು ಸರ್ವೇ ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲೂ developmental activitesಗಾಗಿ ಕಾನೂನು ರೀತ್ಯಾ ಒದಗಿಸಿದ್ದಂಥ ಹಣವನ್ನು ತೆಗೆದುಹಾಕುವುದು ನ್ಯಾಯವಲ್ಲ. ಇದರಿಂದಾಗಿ ಡಿಸ್ಟ್ರಿಕ್ಟ್ ಬೋರ್ಡು ಕೆಲಸಗಳಿಗೆ ಖಂಡಿತವಾಗಿಯೂ ತೊಂದರೆಯಾಗುತ್ತದೆ. ಏಕೆಂದರೆ, ಇದರಿಂದಾಗಿಯೇ ಒಂದೊಂದು ಡಿಸ್ಟ್ರಿಕ್ಟ್ ಬೋರ್ಡಿಗೆ 60,000, 70,000, ಒಂದು ಲಕ್ಷದವರೆಗೂ ಹಣ ಬರುತ್ತಿತ್ತು. ಈಗ ಅದನ್ನು ತೆಗೆದುಹಾಕಿದರೆ, ಅವರ developmental ಕೆಲಸಕಾರ್ಯಗಳನ್ನು ಹೇಗೆ ನಿರ್ವಹಿಸಿಯಾರು? ಮೊನ್ನೆ ತಾನೆ ಇದೇ ಸಂಬಂಧದಲ್ಲಿ ಒಂದು ಪ್ರಶ್ನೆ ಚರ್ಚೆಗೆ ಬಂದಿತ್ತು. ಯಾವ್ಯಾವ ಡಿಸ್ಟ್ರಿಕ್ಟ್ ಬೋರ್ಡಿನವರು ಎಷ್ಟೆಷ್ಟು ಹಣವನ್ನು ಸ್ಪೆಷಲ್ ಆಫೀಸರುಗಳಿಗೆ ತಮ್ಮ ಆಫೀಸನ್ನು ವಹಿಸಿದ ಕಾಲದಲ್ಲಿ ಬಿಟ್ಟುಕೊಟ್ಟಿದ್ದಾರೆ ಎಂಬುದನ್ನು ಕೇಳಿದ್ದಕ್ಕೆ minus balance ಇರತಕ್ಕ ಅನೇಕ ಡಿಸ್ಟ್ರಿಕ್ಟ್ ಬೋರ್ಡುಗಳನ್ನು ಉದಾಹರಿಸಿದ್ದಾರೆ. ಹೀಗೆ ಅವರು ಬಿಟ್ಟುಕೊಡುವಾಗ ಅಷ್ಟು ಕಮ್ಮಿ ಹಣವಿದ್ದೆಂದ ಮೇಲೆ ಅವರಿಗೆ ಬರತಕ್ಕ ಹಣವನ್ನು ಇನ್ನೂ ಮೊಟಕುಮಾಡಿ ಯಾವುದೋ developmental ಕೆಲಸಗಳಿಗೆ ಖರ್ಚು ಮಾಡುತ್ತೇವೆಂದು ಹೇಳುವುದು ನ್ಯಾಯವಲ್ಲ. ಅವಂತೂ ಇನ್ಯಾವ ಕೆಲಸಕಾರ್ಯಗಳನ್ನೂ ನಡೆಯಿಸುವಂತಿಲ್ಲ. ಆದ್ದರಿಂದ ಈ ಎರಡು ಕಾರಣಗಳಿಂದ ನಾನು ಈ ವಿಚಾರದಲ್ಲಿ ನಮ್ಮ ತೀವ್ರ ಅಸಮಾಧಾನವನ್ನು ಸೂಚಿಸುತ್ತೇನೆ.

ಒಟ್ಟಿನಲ್ಲಿ ಒಂದು ಮಾತನ್ನು ನಾನು ಈ ಮಸೂದೆಯ ಮೇಲೆ ಹೇಳಬೇಕೆಂದು ಆಶಿಸುತ್ತೇನೆ. ಇದು ನನ್ನ ಮನಸ್ಸಿನ ತೃಪ್ತಿಗೆ. ಏಕೆಂದರೆ, ನನಗೆ ಗೊತ್ತು, ನಾನು ಏನೇ ಹೇಳಿದರೂ ಈ ಮಸೂದೆ ಪಾಸಾಗುತ್ತದೆ. ಅನೇಕರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟುಗಳು ಬೇಗ ಆಗುವವರಾಗಿದ್ದಾರೆ. ನಾನು ಅವರನ್ನು ಅಭಿನಂದಿಸುವ ಅವಕಾಶವೂ ಸದ್ಯದಲ್ಲೇ ಸಿಕ್ಕುತ್ತದೆ. ಅದು ನನಗೆ ಗೊತ್ತು. ಆದರೂ ಇಷ್ಟುಮಾತ್ರ ನಾನು ಹೇಳಬಲ್ಲೆ.

ಮೊದಲಿಂದಲೂ ನಮಗೊಂದು ಆಸೆಯಿತ್ತು, ಗ್ರಾಮಪಂಚಾಯತಿಗಳಿಗೂ ಕೂಡ ಸುಧಾರಿತವಾದ ಒಂದು ಶಾಸನ ಬರುವಂತೆ ಮಾಡಬೇಕು ಎಂದು. ಆ ಅವಕಾಶವನ್ನು ಉಂಟುಮಾಡಲಿಕ್ಕೆ ಈಗಲಾದರೂ ಪ್ರಯತ್ನಿಸುತ್ತಾರೆಂದು ಭಾವಿಸಿದ್ದೆವು. ಅದೇನನ್ನೂ ಮಾಡದಿರುವುದು ಬಹು ವಿಷಾದಕರ. ಮೊನ್ನೆ ದಿವಸ ತಾನೆ ಇನ್ನೊಂದು ಸಂದರ್ಭ ಹೇಳಿದ್ದೇನೆ. ಗ್ರಾಮ ಪಂಚಾಯತಿಗಳಿಗೆ ಸಂಬಂಧಪಟ್ಟ ಕಾನೂನು ಬಂದು ಅದು ಚರ್ಚೆಗೆ ಬಂದಾಗ, ನಿಜವಾಗಿಯೂ ಸ್ಥಳೀಯ ಸ್ವರಾಜ್ಯ, ಪಂಚಾಯಿತಿ ರಾಜ್ಯ ಎಂಬುದಾಗಿ ದೊಡ್ಡ ದೊಡ್ಡ ಪದಗಳನ್ನು ನಮ್ಮ ರಾಜ್ಯಾಂಗದ Directive principles ನನ್ನೆಲ್ಲಾ ಉಪಯೋಗಿಸುತ್ತಿದ್ದೇವಲ್ಲ, ಆ ಕಡೆ ಒಂದು ಹೆಜ್ಜೆಯಾದರೂ ಇಡುವುದಕ್ಕೆ ಈ ಸರ್ಕಾರ ಧೈರ್ಯಮಾಡಲಿ, ಆ ವಿಷಯದಲ್ಲಿ ತಮ್ಮ ಅಂತಃಕರಣವನ್ನಾದರೂ ತೋರಿಸಲಿ ಎಂದು ಹೇಳಿದೆ. 'ಅಂತಃಕರಣ' ಎಂದರೆ ಮಾನ್ಯ ಮಂತ್ರಿಗಳಿಗೆ ಬಹುಶಃ ಚುಚ್ಚಿದಂತಾಗುತ್ತದೆ. ಏಕೆಂದರೆ ಈ ಮೂರು ವರ್ಷದ ಹಿನ್ನೆಲೆಯನ್ನು ನೋಡಿದರೆ, ವೀರಾಗ್ರಣಿಗಳಂತೆ ಧೈರ್ಯದಿಂದ ಮುನ್ನುಗ್ಗಿ ಹೋಗುತ್ತಿದ್ದಂಥಾವರು ಈಗೇಕೆ ಅಂಜಿಗಾಲು ಇಡಲಿಕ್ಕೂ ಪ್ರಯತ್ನಪಡದೆ ತೊಳಲುತ್ತಿದ್ದಾರಲ್ಲಾ ಅಂದರೆ "ಅಂತಃಕರಣ" ಎನ್ನುವ ಪದವನ್ನು ಉಪಯೋಗಿಸದೆ ಇನ್ನೇನು ಉಪಯೋಗಿಸಲಿ ?

ಆದ್ದರಿಂದ ಇಷ್ಟುಮಾತ್ರ ಹೇಳಬಲ್ಲೆ; ಪ್ರಗತಿಗೆ ವಿರುದ್ಧವಾಗಿ ಈ ಮಸೂದೆಯನ್ನು ತಂದಿರುವುದನ್ನು ನಾನು ವಿರೋಧಿಸುತ್ತೇನಾದರೂ ಒಂದು ಶಾಸನ ಕಡತಕ್ಕೆ ಇದು ಬರುವುದಾದರೆ ಶ್ರೀ ಭೀಮಪ್ಪನಾಯಕರಂಥ ಮಹಾ ಜ್ಞಾನಿಗಳು ಕೊಟ್ಟಿರುವ ಸಲಹೆಗಳ ಪ್ರಕಾರ ಸ್ವಲ್ಪಮಟ್ಟಿಗೆ ಬದಲಾವಣೆಯಾಗಬೇಕು. ಪ್ರಾಯಶಃ ಈಗ ಈ ಕಾನೂನನ್ನು ಸೆಲೆಕ್ಟ್ ಕಮಿಟಿಗೆ ಹಾಕುವುದು ಒಳ್ಳೆಯದೆಂದು ಕಾಣುತ್ತದೆ ; ಆಗಬೇಕಾದ ಬದಲಾವಣೆ ಬಹಳವಾಗಿದೆ. ಆದರೆ ಮುಂದು ವರೆಸಬೇಕೆಂದು ಹೇಳುತ್ತೇನೆಂದು ಯಾರೂ ಅನುಮಾನ ಪಡಬೇಕಾಗಿಲ್ಲ. ಕೇವಲ 2-3 ದಿನಗಳಲ್ಲಿ ಈ ಶಾಸನ ಸಭೆ ಮುಕ್ತಾಯವಾಗುವುದರೊಳಗಾಗಿ, 19ನೆಯ ತಾರೀಖಿನ ಒಳಗಾಗಿ ಕಮಿಟಿಯ ಸಲಹೆಪಡೆದು ಅಂಗೀಕಾರ ಪಡೆಯಬಹುದು. ಬಹಳ ಮಟ್ಟಿಗೆ ಸ್ವಲ್ಪ ಬದಲಾವಣೆ ಮಾಡಬೇಕೆಂದು ಮಾನ್ಯ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿರುವುದರಿಂದ ಅದಕ್ಕೆ ಮನ್ನಣೆಯನ್ನಿತ್ತು ತಕ್ಕಂತೆ ತಿದ್ದುಪಡಿ ಮಾಡುವುದು ಆವಶ್ಯಕ. ಇಷ್ಟು ಹೇಳಿ ಇದಕ್ಕೆ ವಿರೋಧ ತೋರಿಸಿ ಈ ಮಾರ್ಪಾಡಾಗ ತಕ್ಕದ್ದು ಆವಶ್ಯಕವೆಂದು ಸೂಚಿಸಿ ನನ್ನ ಮಾತನ್ನು ಮುಕ್ತಾಯಗೊಳಿಸುತ್ತೇನೆ.

Mr. SPEAKER.—The House has agreed to sit till 5-30 and finish it. Tomorrow we have to take up the Agricultural Income-tax Bill. If this Bill is not finished today, it will have to be taken up some time later.

Sri T. MARIAPPA.—Sir, certain very interesting observations have been made by Sri Pattabhiraman. It will not be proper to stifle opinions. If need be, we shall sit till 5-30, but still if it is necessary, it must be continued to-morrow also.

Sri J. MOHAMED IMAM.—This is a very important Bill. The Hon'ble Leader of the House is not present here. There was an understanding between me and him about tomorrow's Business of the House. But now since we are

(SRI J. MOHAMED IMAM.)

not able to finish this Bill even if we sit till 5-30 or 6, I suggest that we may rise now and continue this Bill tomorrow also and if necessary sit late tomorrow and finish it. We will take up the Agricultural Income-tax Bill next day.

Mr. SPEAKER.—There is urgency about the Agricultural Income-tax Bill because it will have to go to Select Committee.

Sri J. MOHAMED IMAM.—You can consult the Leader of the House on this point and decide, Sir.

Mr. SPEAKER.—The House will now adjourn and meet at 12 noon tomorrow.

The House adjourned at Fifteen Minutes past Five of the Clock to meet again at Twelve of the Clock on Tuesday, the 12th April 1955.

WD 4508—GPB—550—23-9-55.